ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಫೆಬ್ರವರಿ 5 ಬುಧವಾರ 2025

45

ಸಂಪುಟ: 45 | ಸಂಚಿಕೆ: 288 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಫೆ.15ರಿಂದ ಸ್ವಚ್ಛ ಸರ್ವೇಕ್ಷಣೆ ಆರಂಭ

ಮೈಸೂರು ಮತ್ತೆ ಸ್ವಚ್ಛ ನಗರಿಯಾಗಿ ಹೊರಹೊಮ್ಮಲು ಪಾಲಿಕೆ ಸಿದ್ಧತೆ; ವಿವಿಧ ಸಂಘ ಸಂಸ್ಥೆಗಳಿಂದ ಸಲಹೆ, ಅಭಿಪ್ರಾಯ ಸಂಗ್ರಹ



ಮೈಸೂರು ಮಹಾನಗರ ಪಾಲಿಕೆಯ ಶ್ರೀ ಜಯಚಾಮರಾಜ ಒಡೆಯರ್ ಸಭಾಂಗಣದಲ್ಲಿ ಮಂಗಳವಾರ ಸ್ವಚ್ಛ ಸರ್ವೇಕ್ಷಣೆ ಸಂಬಂಧ ಪಾಲುದಾರರ ಸಭೆ ನಡೆಯಿತು.

> ಫೆ.15ರಿಂದ ಏಪ್ರಿಲ್ ಅಂತ್ಯದವರೆಗೆ ಸ್ವಚ್ಛ ಸರ್ವೇಕ್ಷಣೆ ಸರ್ವೇ ಭಾರತ ಸರ್ಕಾರದಿಂದ ನಡೆಯಲಿದೆ. ಹೀಗಾಗಿ ನಗರದ ಎನ್‌ಜಿಓಗಳು, ಸಂಘಟನೆಗಳು ಸೇರಿದಂತೆ ಪಾಲುದಾರರ ಅಭಿಪ್ರಾಯಗಳನ್ನು ಇಂದಿನ ಸಭೆಯಲ್ಲಿ ಸಂಗ್ರಹಿಸಲಾಯಿತು. ಪ್ರತಿ ವರ್ಷದಂತೆ ಈ ಬಾರಿಯೂ ಸರ್ವೇ ನಡೆಯಲಿದ್ದು, ನಗರದ ಮೌಲ್ಯಮಾಪನ ಮಾಡಲಿದ್ದಾರೆ. ಉತ್ತಮ ಶ್ರೇಯಾಂಕ ಗಳಿಸಲು ನಗರದ ಜನತೆ ಹಾಗೂ ಸಂಘಟನೆಗಳ ಸಹಭಾಗಿತ್ವ ಮತ್ತು ಸಹಕಾರ ಮುಖ್ಯ.
> –ಶೇಖ್ ತನ್ವೀರ್ ಆಸೀಫ್, ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ

ಮೈಸೂರು,ಫೆ.4(ಪಿಎಂ)– ಕೇಂದ್ರ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದಿಂದ ಸ್ವಚ್ಛ ಸರ್ವೇಕ್ಷಣೆ ಫೆ.15ರಿಂದ ಆರಂಭವಾಗುತ್ತಿದ್ದು, ಮೈಸೂರು ಮತ್ತೊಮ್ಮೆ ಸ್ವಚ್ಛ ನಗರಿಯಾಗಿ ಹೊರಹೊಮ್ಮಲು ಮೈಸೂರು ಮಹಾನಗರ ಪಾಲಿಕೆ ಸಿದ್ಧತೆ ನಡೆಸಿದೆ.

ಈ ನಿಟ್ಟಿನಲ್ಲಿ ಮಂಗಳವಾರ ನಗರದ ವಿವಿಧ ಸಂಘ–ಸಂಸ್ಥೆಗಳು, ಎನ್‌ಜಿಓಗಳ ಮುಖ್ಯಸ್ಥರು, ಪದಾಧಿಕಾರಿಗಳು ಸೇರಿದಂತೆ ಪಾಲುದಾರರ ಸಭೆ ನಡೆಸಿ ಸಲಹೆ ಮತ್ತು ಅಭಿಪ್ರಾಯಗಳನ್ನು ಸಂಗ್ರಹಿಸಲಾಯಿತು. ಮೈಸೂರು ಮಹಾನಗರ ಪಾಲಿಕೆಯ ಶ್ರೀ ಜಯಚಾಮರಾಜ ಒಡೆಯರ್ ಸಭಾಂಗಣದಲ್ಲಿ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಗರದ ಸ್ವಚ್ಛತೆ ಕಾಯ್ದುಕೊಂಡು ಉತ್ತಮ ಸ್ಥಾನ ಗಳಿಸಲು ವಹಿಸಬೇಕಾದ ಕ್ರಮಗಳ ಬಗ್ಗೆ ಚರ್ಚೆ ನಡೆಸಲಾಯಿತು. ಸಭೆಯಲ್ಲಿ ಭಾಗವಹಿಸಿದ್ದ ವಿವಿಧ ಸಂಘ–ಸಂಸ್ಥೆಗಳು ಮತ್ತು ಎನ್‌ಜಿಓ ಮುಖ್ಯಸ್ಥರು, ಪದಾಧಿಕಾರಿಗಳು, ಮೈಸೂರಿನ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಈ ಹಿಂದೆ ಕೈಗೊಳ್ಳಲಾಗಿದ್ದ ಉತ್ತಮ ಕ್ರಮಗಳನ್ನು ಪರಿಣಾಮಕಾರಿ ಅನುಷ್ಠಾನದ ಅಗತ್ಯವನ್ನು ಪ್ರಸ್ತಾಪಿಸಿದರು. ಅಲ್ಲದೆ, ಪ್ರಸ್ತುತ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾದ ನೂತನ ಕ್ರಮಗಳ ಕುರಿತು ತಮ್ಮ ಸಲಹೆ ಹಾಗೂ ಅಭಿಪ್ರಾಯವನ್ನೂ ಮಂಡಿಸಿದರು.

ಏಪ್ರಿಲ್ ಅಂತ್ಯದವರೆಗೆ ಸರ್ವೇಕ್ಷಣೆ: 2015 ಮತ್ತು 2016ರಲ್ಲಿ ನಡೆದ ಸ್ವಚ್ಛ ಸರ್ವೇಕ್ಷಣೆಯ ಸಮಗ್ರ ವಿಭಾಗದಲ್ಲಿ ಮೈಸೂರು ನಗರ ಸತತ ಎರಡು ಬಾರಿ ದೇಶದ ನಂಬರ್ 1 ಸ್ವಚ್ಛ ನಗರ ಪ್ರಶಸ್ತಿಗೆ ಭಾಜನವಾಗಿ ಇಡೀ ದೇಶದ ಗಮನ ಸೆಳೆದಿತ್ತು. ನಂತರದ ವರ್ಷಗಳಲ್ಲಿ ಶ್ರೇಯಾಂಕದಲ್ಲಿ ಇಳಿಕೆಯಾಗಿದ್ದು, ಇದೀಗ ಸಾಧ್ಯವಾದಷ್ಟು ಅಗ್ರಸ್ಥಾನ ಅಲಂಕರಿಸಲು ಪಾಲಿಕೆ ಸಿದ್ಧತೆ ನಡೆಸಿದೆ. ಫೆ.15ರಿಂದ ಏಪ್ರಿಲ್ ಅಂತ್ಯದವರೆಗೆ ಸ್ವಚ್ಛ ಸರ್ವೇಕ್ಷಣೆ ನಡೆಯಲಿದ್ದು, ಹೀಗಾಗಿ ಈ ಬಾರಿಯ ಅಭಿಯಾನದಲ್ಲಿ ನಗರದ ಜನತೆ ಮತ್ತು ಸಂಘ–ಸಂಸ್ಥೆಗಳ ಸಹಭಾಗಿತ್ವವನ್ನು ಪೂರ್ಣ ಪ್ರಮಾಣದಲ್ಲಿ ಪಡೆದು ಗರಿಷ್ಠ ಮಟ್ಟದ ಪ್ರಯತ್ನ ಹಾಕಲು ಪಾಲಿಕೆ ಇಂದು ಪಾಲುದಾರರ ಸಭೆ ನಡೆಸಿತು.

20ಕ್ಕೂ ಹೆಚ್ಚು ಸಲಹೆಗಳು: ಸಭೆಯಲ್ಲಿ ಮೈಸೂರಿನ ಸ್ವಚ್ಛತೆ ಕಾಪಾಡುವಲ್ಲಿ ಅಗತ್ಯವಿರುವ 20ಕ್ಕೂ ಹೆಚ್ಚಿನ ■ 6ನೇ ಪುಟಕ್ಕೆ

ನಾಳೆಯಿಂದ ಸಿಎಂ ಸಿದ್ದರಾಮಯ್ಯ ಆ್ಯಕ್ಟಿವ್!

ಸದ್ಯ ಮಂಡಿ ನೋವಿನಿಂದ ವಿಶ್ರಾಂತಿಯಲ್ಲಿರುವ ಸಿಎಂ



ಬೆಂಗಳೂರು, ಫೆ.4(ಕೆಎಂಶಿ)– ಸ್ನಾನಗೃಹದಲ್ಲಿ ಆಯ ತಪ್ಪಿ ಬಿದ್ದು ಮಂಡಿ ನೋವಿನಿಂದ ಬಳಲುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರದಿಂದ ಎಂದಿನಂತೆ ತಮ್ಮ ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದಾರೆ. ಮೈಸೂರು ಪ್ರವಾಸ ವೇಳೆ ಈ ಘಟನೆಗೆ ಒಳಗಾಗಿದ್ದ ಮುಖ್ಯಮಂತ್ರಿ ಅವರು, ವೈದ್ಯರ ಸಲಹೆ ಮೇರೆಗೆ ಐದು ದಿನಗಳ ಕಾಲ ತಮ್ಮ ಎಲ್ಲಾ ಕಾರ್ಯಕ್ರಮಗಳನ್ನು ರದ್ದುಪಡಿಸಿ ಪೂರ್ಣ ವಿಶ್ರಾಂತಿಯಲ್ಲಿದ್ದಾರೆ. ಕಳೆದ ಸೋಮವಾರದಿಂದ ಸತತವಾಗಿ 10 ದಿನಗಳ ಕಾಲ 2025–26ನೇ ಸಾಲಿನ ಮುಂಗಡಪತ್ರ ಸಿದ್ಧತೆಯ ಪೂರ್ವಭಾವಿ ಸಭೆಗಳನ್ನು ಕರೆದಿದ್ದರು. ಆದರೆ, ಈ ಘಟನೆಯಿಂದ ಪೂರ್ವಭಾವಿ ಸಭೆ ಸೇರಿದಂತೆ ಪ್ರಮುಖ ಕಾರ್ಯಕ್ರಮಗಳಿಂದಲೂ ದೂರ ಉಳಿದಿದ್ದರು. ಇದೀಗ ಫೆಬ್ರವರಿ 6ರಿಂದ 8 ದಿನಗಳ ಕಾಲ ಮುಂಗಡಪತ್ರದ ತಯಾರಿಯಲ್ಲಿ ತೊಡಗಲಿದ್ದಾರೆ

ಕೇವಲ ಒಂದೇ ದಶಕದಲ್ಲಿ ದೇಶದ 25 ಕೋಟಿ ಜನರ ಬಡತನದಿಂದ ಹೊರತಂದಿದ್ದೇವೆ

'ಗರೀಬಿ ಹಟಾವೋ' ಘೋಷಣೆ ಹೊರಡಿಸಿದ ಕಾಂಗ್ರೆಸ್‌ಗೆ ಪ್ರಧಾನಿ ಮೋದಿ ಎದಿರೇಟು; ಸಂಸತ್‌ನಲ್ಲಿ ಸುದೀರ್ಘ ಭಾಷಣ

ನವದೆಹಲಿ, ಫೆ.4– ಕಳೆದ 10 ವರ್ಷದಲ್ಲಿ 25 ಕೋಟಿ ಜನರನ್ನು ಬಡತನ ರೇಖೆಯಿಂದ ಹೊರತರಲಾಗಿದೆ. ಈ ಹಿಂದೆ 40 ವರ್ಷಗಳ ಕಾಲ ಗರೀಬಿ ಹಟಾವೋ (ಬಡತನವನ್ನು ಹೊಡೆದೋಡಿಸಿ) ಎಂದು ಘೋಷಣೆ ಕೂಗಿದವರು ಬಡತನ ನಿರ್ಮೂಲನೆ ಮಾಡಲಿಲ್ಲ. ಆದರೆ, ನಾವು ಒಂದೇ ದಶಕದಲ್ಲಿ ಮಾಡಿದ್ದೇವೆ. ಬಡತನವನ್ನು ನಿವಾರಿಸುವ ಕೆಲಸ ಮಾಡಿದ್ದೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಕಾಂಗ್ರೆಸ್‌ಗೆ ಎದಿರೇಟು ನೀಡಿದ್ದಾರೆ.

ಇಲ್ಲಿಯವರೆಗೆ ಬಡವರಿಗೆ 4 ಕೋಟಿ ಮನೆಗಳನ್ನು ನೀಡಲಾಗಿದೆ. ಕಷ್ಟದ ಜೀವನವನ್ನು ನಡೆಸಿದವರಿಗೆ ಮಾತ್ರ ಮನೆ ಪಡೆಯುವುದರ ಮೌಲ್ಯ ಏನೆಂದು ಅರ್ಥವಾಗುತ್ತದೆ. ಹಿಂದಿನ ಕಾಲದಲ್ಲಿ ಮಹಿಳೆಯರು ಶೌಚಾಲಯ ವ್ಯವಸ್ಥೆಯ ಕೊರತೆಯಿಂದ ಬಹಳಷ್ಟು ಸಮಸ್ಯೆ ಎದುರಿಸುತ್ತಿದ್ದರು. ಈ ಎಲ್ಲ ಸೌಲಭ್ಯಗಳನ್ನು ಹೊಂದಿರುವವರು ಅದರಿಂದ ವಂಚಿತರಾದವರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಮೋದಿ ಹೇಳಿದ್ದಾರೆ. ಸಂಸತ್ ಅಧಿವೇಶನದಲ್ಲಿ ರಾಷ್ಟ್ರಪತಿಗಳ ಭಾಷಣಕ್ಕೆ ವಂದನಾ ನಿರ್ಣಯಕ್ಕೆ ಉತ್ತರವಾಗಿ ಮಾತನಾಡಿದ ಪ್ರಧಾನಿ ಮೋದಿ, ನಾವು 2025ನೇ ವರ್ಷದಲ್ಲಿದ್ದೇವೆ. 21ನೇ ಶತಮಾನದ 25% ಭಾಗ ಅಂತ್ಯವಾಗಿದೆ. ಸ್ವಾತಂತ್ರ್ಯದ ಬಳಿಕ ಏನು ಬದಲಾಗಿದೆ ಎಂಬುದನ್ನು ಸಮಯ ನಿರ್ಧಾರ ಮಾಡಲಿದೆ. ರಾಷ್ಟ್ರಪತಿಗಳು ತಮ್ಮ ಭಾಷಣದಲ್ಲಿ ಭವಿಷ್ಯದ 25 ವರ್ಷದ ವಿಕಸಿತ್ ಭಾರತದ ಕಲ್ಪನೆಯನ್ನು ತೆರೆದಿಟ್ಟಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಭಾಷಣ ವಿಕಸಿತ್ ಭಾರತದ ಸಂಕಲ್ಪವನ್ನು ಗಟ್ಟಿಗೊಳಿಸಿದೆ. ನಮ್ಮ ದೇಶದ ■ 6ನೇ ಪುಟಕ್ಕೆ



ಲೋಕಸಭೆಯಲ್ಲಿ ಪ್ರಧಾನಿ ಮೋದಿ ಮಾತನಾಡಿದರು.

ಹಣಕಾಸು ವ್ಯವಹಾರದಲ್ಲಿ ಕಡ್ಡಾಯವಾಗಿ ನಿಯಮಾವಳಿ ಪಾಲಿಸಲು ಸರ್ಕಾರ ತಾಕೀತು

ಆರ್‌ಬಿಐ ನಿಯಮ ಮೀರಿ ಬಡ್ಡಿ ವಿಧಿಸುವಂತಿಲ್ಲ

ಬೆಂಗಳೂರು, ಫೆ.4–ಮೈಕ್ರೋ ಫೈನಾನ್ಸ್ ಸಂಸ್ಥೆಗಳ ದಬ್ಬಾಳಿಕೆ ತಡೆಯುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದು, ಹಣಕಾಸು ವ್ಯವಹಾರದಲ್ಲಿ ಕಡ್ಡಾಯವಾಗಿ ನಿಯಮ ಪಾಲಿಸುವಂತೆ ಸಂಸ್ಥೆಗಳಿಗೆ ತಾಕೀತು ಮಾಡಿದೆ.

ಸಾಲ ನೀಡಿದ ಸಂಸ್ಥೆಗಳು ಹಾಗೂ ಲೇವಾದೇವಿದಾರರ ಕಿರುಕುಳ ಸಹಿಸಲಾಗದೆ ಹಲವರು ಆತ್ಮಹತ್ಯೆ ಮಾಡಿಕೊಂಡ ಹಿನ್ನೆಲೆಯಲ್ಲಿ ಕಳೆದ ಜನವರಿ 25ರಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಕರ್ನಾಟಕ ವಲಯದ ಅಧ್ಯಕ್ಷರು, ಭಾರತೀಯ ರಿಸರ್ವ್ ಬ್ಯಾಂಕ್‌ನ ಪ್ರಾಂತೀಯ ನಿರ್ದೇಶಕರು, ಸಾ–ಧನ್, ಎಕೆಎಂಐ, ಎಂಎಫ್‌ಐ ಸೇರಿದಂತೆ ಪ್ರಮುಖ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಪ್ರತಿನಿಧಿಗಳು, ರಾಜ್ಯಮಟ್ಟದ ಬ್ಯಾಂಕರ್‌ಗಳ ಸಮಿತಿ ಸಂಚಾಲಕರು, ಪೊಲೀಸ್, ಕಂದಾಯ, ಸಹಕಾರ ಹಾಗೂ ಆರ್ಥಿಕ ಇಲಾಖೆಯ ಅಧಿಕಾರಿಗಳನ್ನೊಳಗೊಂಡ ಸಭೆಯಲ್ಲಿ, ■ 6ನೇ ಪುಟಕ್ಕೆ

ಸಹಾಯವಾಣಿಗೆ ಕರೆ ಮಾಡಿ...

> ಕೆಲ ವ್ಯಕ್ತಿಗಳು, ಅನಧಿಕೃತ ಲೇವಾದೇವಿದಾರರು ಬಡಜನರ ಅವಶ್ಯಕತೆಯನ್ನು ಬಂಡವಾಳ ಮಾಡಿಕೊಳ್ಳುತ್ತಿದ್ದಾರೆ. ತುರ್ತು ಅವಶ್ಯಕತೆಗೆ ಹಣ ನೀಡಿ, ಹೆಚ್ಚು ಬಡ್ಡಿ ವಿಧಿಸಿ ಶೋಷಣೆ ಮಾಡುತ್ತಾರೆ. ಅಂತಹ ವ್ಯಕ್ತಿಗಳು ಅಥವಾ ಸಂಸ್ಥೆಗಳ ವಿರುದ್ಧ ಸಾರ್ವಜನಿಕರು ಸಹಾಯವಾಣಿ ಸಂಖ್ಯೆಗಳಿಗೆ ದೂರು ನೀಡಬಹುದು. ಸೂಕ್ಷ್ಮ ಹಣಕಾಸು ಸಂಸ್ಥೆ, ಮನಿ ಲೆಂಡಿಂಗ್ ಸಂಸ್ಥೆಗಳ ನಿಯಮ ಉಲ್ಲಂಘನೆಗಳ ಕುರಿತು ಆರ್‌ಬಿಐ ಸಹಾಯವಾಣಿ 14448ಗೆ ಮಾಹಿತಿ ನೀಡಬಹುದು. ರಾಜ್ಯ ಸರ್ಕಾರ ಮೈಕ್ರೋ ಫೈನಾನ್ಸ್ ಸಾಲಗಾರರಿಗೆ ಎಲ್ಲ ರೀತಿಯ ಕಾನೂನು ರಕ್ಷಣೆ ನೀಡಲು ಕ್ರಮವಹಿಸಿದೆ. ನೊಂದ ವ್ಯಕ್ತಿಗಳು ರಾಜ್ಯದ ಏಕೀಕೃತ ಸಹಾಯವಾಣಿ 112 ಅಥವಾ 1902 ಸಂಪರ್ಕಿಸಬಹುದು.
> –ಡಾ.ಶಾಲಿನಿ ರಜನೀಶ್, ಮುಖ್ಯ ಕಾರ್ಯದರ್ಶಿಗಳು



ರಥಸಪ್ತಮಿ ಮೈಸೂರಲ್ಲಿ ಸಾಮೂಹಿಕ ಸೂರ್ಯ ನಮಸ್ಕಾರ


■ ಪುಟ–11

ವಿಶ್ವೇಶ್ವರಯ್ಯ ನಾಲೆಗೆ ಕಾರು ಉರುಳಿದ ಪ್ರಕರಣ; ಸತ್ತವರ ಸಂಖ್ಯೆ ಮೂರಕ್ಕೆ ಏರಿಕೆ

ತಡೆಗೋಡೆ ನಿರ್ಮಾಣ ಮಾಡದ್ದಕ್ಕೆ ಜನಪ್ರತಿನಿಧಿಗಳು, ಅಧಿಕಾರಿಗಳ ವಿರುದ್ಧ ಜನತೆ ಆಕ್ರೋಶ

ಮಂಡ್ಯ, ಫೆ.4– ವಿಶ್ವೇಶ್ವರಯ್ಯ ನಾಲೆಗೆ ಕಾರು ಉರುಳಿಬಿದ್ದ ಪ್ರಕರಣದಲ್ಲಿ ಸಾವನ್ನಪ್ಪಿದವರ ಸಂಖ್ಯೆ 3ಕ್ಕೆ ಏರಿಕೆಯಾಗಿದೆ. ನಾಪತ್ತೆಯಾಗಿದ್ದ ಮಂಡ್ಯದ ಹಾಲಹಳ್ಳಿಯ ಪೀರ್ ಖಾನ್(40) ಶವ ತಿಬ್ಬನಹಳ್ಳಿ ಬಳಿ ನಾಲೆಯಲ್ಲಿ ಪತ್ತೆಯಾಗಿದೆ.

ಸೋಮವಾರ ರಾತ್ರಿ ಕತ್ತಲಾದ ಹಿನ್ನೆಲೆಯಲ್ಲಿ ಅಗ್ನಿಶಾಮಕ ಸಿಬ್ಬಂದಿ ಶೋಧ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿದ್ದರು. ಆದರೆ ಕುಟುಂಬಸ್ಥರು, ಸ್ನೇಹಿತರು ಸೇರಿ ತಡರಾತ್ರಿವರೆಗೂ ಪೀರ್ ಖಾನ್‌ಗಾಗಿ ಶೋಧ ನಡೆಸಿದರು. ನಾಲೆಯಲ್ಲಿ ನೀರು ಸ್ಥಗಿತಗೊಳಿಸದ ಹಿನ್ನೆಲೆಯಲ್ಲಿ ಮಂಗಳವಾರ ಕಾರ್ಯಾಚರಣೆ ಮುಂದುವರಿಸಿದ್ದರು. ಈ ವೇಳೆ ನಾಲೆಯಲ್ಲಿ ಪೀರ್ ಖಾನ್ ಶವ ಪತ್ತೆಯಾಗಿದೆ. ಈ ಪ್ರಕರಣದಲ್ಲಿ ಬದುಕುಳಿದ ನಯಾಜ್‌ಗೆ ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಕುತ್ತಿಗೆಗೆ ತೀವ್ರ ಪೆಟ್ಟಾಗಿರುವುದರಿಂದ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ವೈದ್ಯರು ನಯಾಜ್‌ನನ್ನು ತೀವ್ರ ನಿಗಾ ಘಟಕದಲ್ಲಿರಿಸಿದ್ದಾರೆ.



ಜನರ ಆಕ್ರೋಶ: ಮಂಡ್ಯದ ವಿಸಿ ನಾಲೆಯಲ್ಲಿ ದುರಂತಗಳ ಸರಮಾಲೆಯೇ ನಡೆದು ಹೋಗುತ್ತಿದೆ. ಅವಘಡ ಸಂದರ್ಭ ಮಾತ್ರ ತಡೆಗೋಡೆ ನಿರ್ಮಾಣಕ್ಕೆ ಅರ್ಧಂಬರ್ಧ ಕೆಲಸ ಮಾಡುವ ಜಿಲ್ಲಾಡಳಿತ ಮತ್ತು ಜನಪ್ರತಿನಿಧಿಗಳು ಜನರ ಪ್ರಾಣದೊಂದಿಗೆ ಚೆಲ್ಲಾಟವಾಡುತ್ತಿದ್ದಾರೆ ಎಂದು ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹುಲಿಕೆರೆ–ಶಿವಳ್ಳಿ ಮಾರ್ಗದ ರಸ್ತೆಯಲ್ಲಿ ಜೀವ ಕೈಯ್ಯಲ್ಲಿ ಹಿಡಿದು ಸಂಚರಿಸಬೇಕಾದ ಪರಿಸ್ಥಿತಿ ಉಂಟಾಗಿದೆ. ಈ ಹಿಂದೆ ಇದೇ ನಾಲೆಗೆ ಕಾರು ಬಿದ್ದು, ಚಾಲಕ ಲೋಕೇಶ್ ಸಾವನ್ನಪ್ಪಿದ್ದರು. ನಂತರ ಜಿಲ್ಲಾಡಳಿತ 500 ಮೀಟರ್‌ನಷ್ಟು ಬ್ಯಾರಿಕೇಡ್ ಅಳವಡಿಕೆ ಮಾಡಿತ್ತು. ಉಳಿದ ನಾಲ್ಕು ಕಿಲೋ ಮೀಟರ್ ಬ್ಯಾರಿಕೇಡ್ ಅಳವಡಿಸಿದ್ದರೆ ಈ ಅಪಘಾತ ನಡೆಯುತ್ತಿರಲಿಲ್ಲ. ತಕ್ಷಣ ತಡೆಗೋಡೆ ನಿರ್ಮಿಸುವಂತೆ ಸಾರ್ವಜನಿಕರು ಜಿಲ್ಲಾಡಳಿತಕ್ಕೆ ಒತ್ತಾಯಿಸಿದ್ದಾರೆ.

ಮೈಕ್ರೋ ಫೈನಾನ್ಸ್ ಹಾವಳಿಗೆ ವಿಷ ಸೇವಿಸಿ ಮತ್ತೊಬ್ಬ ರೈತ ಆತ್ಮಹತ್ಯೆ

ಹೆಚ್.ಡಿ.ಕೋಟೆ, ಫೆ.4–ಮೈಕ್ರೋ ಫೈನಾನ್ಸ್‌ನಲ್ಲಿ ಮಾಡಿದ ಸಾಲ ತೀರಿಸಲಾಗದೇ ರೈತರೊಬ್ಬರು ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಕಣಿಯನಹುಂಡಿ ಗ್ರಾಮದಲ್ಲಿ ನಡೆದಿದೆ.



ಜಯರಾಮೇಗೌಡ

ಗ್ರಾಮದ ಜಯರಾಮೇಗೌಡ(55) ಆತ್ಮಹತ್ಯೆ ಮಾಡಿಕೊಂಡವರು. ಇವರು ತಮ್ಮ 3 ಎಕರೆ ಜಮೀನಿನಲ್ಲಿ ಶುಂಠಿ, ಬಾಳೆ ಬೆಳೆಯಲು ಈಕ್ವಿಟಾಸ್, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಹಾಗೂ ಕೈಸಾಲ ಸೇರಿದಂತೆ 10 ಲಕ್ಷ ರೂ. ಸಾಲ ಮಾಡಿದ್ದರು ಎನ್ನಲಾಗಿದೆ. ಜಮೀನಿನಲ್ಲಿ ಬೆಳೆ ಸಮರ್ಪಕವಾಗಿ ಬಾರದೇ ಸಾಕಷ್ಟು ನಷ್ಟ ಅನುಭವಿಸಿದ್ದರು. ಇದರಿಂದ ಮನನೊಂದಿದ್ದ ಜಯರಾಮೇಗೌಡ ಆಗಾಗ್ಗೆ ಮನೆಯವರ ಬಳಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ತಿಳಿಸಿದ್ದರು ಎನ್ನಲಾಗಿದೆ.

ಬಿಜೆಪಿ ತೊರೆಯುವ ಕಾಲ ಬಂದರೆ ಬಹಿರಂಗವಾಗಿಯೇ ಹೇಳಿ ಹೋಗ್ತೇನೆ...!

ಬೆಂಗಳೂರು, ಫೆ.4(ಕೆಎಂಶಿ)–ಬಿಜೆಪಿ ತೊರೆಯುವ ಸಮಯ ಬಂದರೆ ಬಹಿರಂಗವಾಗಿಯೇ ಹೇಳಿ ಹೊರಹೋಗುತ್ತೇನೆ. ಅಂತಹ ಸನ್ನಿವೇಶದಲ್ಲಿ ನನ್ನನ್ನು ಜೈಲಿನಲ್ಲಿ ಕೂಡಿ ಹಾಕಲು ಸಾಧ್ಯವೇ ಎಂದು ಪಕ್ಷದ ಹಿರಿಯ ನಾಯಕ, ಮಾಜಿ ಸಚಿವ ಬಿ. ಶ್ರೀರಾಮುಲು ಖಾರವಾಗಿ ತಿಳಿಸಿದ್ದಾರೆ. ಪಕ್ಷ ನನಗೆ ಎಲ್ಲಾ ಅವಕಾಶಗಳನ್ನು ನೀಡಿದೆ, ಪಕ್ಷ ಬಿಟ್ಟು ಹೋಗುವ ಪ್ರಶ್ನೆಯೇ ಇಲ್ಲ. ನಾನು ಪಕ್ಷ ತೊರೆಯುತ್ತೇನೆ ಎಂದು ಎಲ್ಲಿಯೂ ಹೇಳಿಲ್ಲ. ಅಂತಹ ಸನ್ನಿವೇಶ ಎದುರಾದರೆ ನನ್ನನ್ನು ಯಾರೂ ತಡೆಯಲು ಸಾಧ್ಯವಿಲ್ಲ ಎಂದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು, ಬಡವರು, ಶ್ರಮಿಕರು, ರೈತರ ಪರ ಇರುವ ಕಾರ್ಯಕರ್ತರ ಜೊತೆ ಇರುತ್ತೇನೆ. ನನಗೆ ಈ ಸಮುದಾಯವೇ ಮುಖ್ಯ. ರಾಜ್ಯ ಬಿಜೆಪಿಯಲ್ಲಿ ಭುಗಿಲೆದ್ದಿರುವ ಆಂತರಿಕ ಕಲಹ ಮುಂದುವರೆದಿರುವಂತೆಯೇ ಶ್ರೀರಾಮುಲು ಇಂತಹ ಹೇಳಿಕೆ ನೀಡಿರುವುದಲ್ಲದೆ, ಇಷ್ಟು ದಿನ ನಾನು ಸೈಲೆಂಟಾಗಿದ್ದೆ, ಇನ್ನು ಮುಂದೆ ಸುಮ್ಮನಿರಲ್ಲ ಎಂದಿದ್ದಾರೆ. ಪಕ್ಷದ ವರಿಷ್ಠರನ್ನು ಭೇಟಿ ಮಾಡಲು ಸಮಯ ಕೋರಿ ಹೋಗಬೇಕೆಂದೇನೂ ಇಲ್ಲ, ಹಿಂದೆಲ್ಲಾ ಭೇಟಿ ಮಾಡಿದ್ದೇನೆ.




ಶ್ರೀರಾಮುಲು

ಮುಡಾ ನಿವೇಶನ ಅಕ್ರಮ ಮಂಜೂರಾತಿ ಪ್ರಕರಣ

ನಿವೃತ್ತ ನ್ಯಾ.ಪಿ.ಎನ್.ದೇಸಾಯಿ ವಿಚಾರಣಾ ಆಯೋಗದ ಅವಧಿ ಮೇ 31ರವರೆಗೆ ವಿಸ್ತರಣೆ

● ಸರ್ಕಾರದ ಅಧೀನ ಕಾರ್ಯದರ್ಶಿ ಆದೇಶ ● ಕಾರ್ಯ ವ್ಯಾಪ್ತಿ, ಷರತ್ತಿನಲ್ಲಿ ಬದಲಾವಣೆ ಇಲ್ಲ




ದೇಸಾಯಿ

ಮೈಸೂರು, ಫೆ.4(ಬಿಎಲ್‌ಯು)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ನಿವೇಶನ ಹಂಚಿಕೆ ಹಗರಣದ ವಿಚಾರಣೆಗೆ ರಾಜ್ಯ ಸರ್ಕಾರ ನೇಮಕ ಮಾಡಿದ್ದ ಹೈಕೋರ್ಟ್ ನಿವೃತ್ತ ನ್ಯಾಯಾಧೀಶ, ನ್ಯಾಯಮೂರ್ತಿ ಪಿ.ಎನ್.ದೇಸಾಯಿ ನೇತೃತ್ವದ ಏಕಸದಸ್ಯ ವಿಚಾರಣಾ ಆಯೋಗದ ಅವಧಿಯನ್ನು ಮೇ 31 ರವರೆಗೆ ವಿಸ್ತರಿಸಿ ಸರ್ಕಾರ ಆದೇಶ ಹೊರಡಿಸಿದೆ.

ರಾಜ್ಯ ಸರ್ಕಾರದ ಒಳಾಡಳಿತ ಇಲಾಖೆ (ಕಾನೂನು ಮತ್ತು ಸುವ್ಯವಸ್ಥೆ)ಯ ಅಧೀನ ಕಾರ್ಯದರ್ಶಿ ಎಸ್. ನಾಗರಾಜು ಅವರು ರಾಜ್ಯಪಾಲರ ಆದೇಶಾನುಸಾರ ಈ ಆದೇಶ ಹೊರಡಿಸಿದ್ದಾರೆ. ಮುಡಾದಲ್ಲಿ ನಿವೇಶನ ಹಂಚಿಕೆಯಲ್ಲಿ ಆರೋಪಗಳು ಕೇಳಿ ಬಂದ ಹಿನ್ನೆಲೆಯಲ್ಲಿ ವಿಚಾರಣಾ ಆಯೋಗದ ಕಾಯ್ದೆ 1952ರ ನಿಯಮ 3ರ ಉಪ ನಿಯಮ (1) ಅನ್ವಯ ಹೈಕೋರ್ಟ್ ನಿವೃತ್ತ ನ್ಯಾಯಾಧೀಶರಿಂದ ವಿಚಾರಣೆ ಮಾಡಲು 14–07–2024 ರಂದು ಅಧಿಸೂಚನೆ ಹೊರಡಿಸಲಾಗಿತ್ತು. ಇದಕ್ಕಾಗಿ ಹೈಕೋರ್ಟ್ ನಿವೃತ್ತ ನ್ಯಾಯಾಧೀಶರಾದ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ನೇತೃತ್ವದಲ್ಲಿ ಏಕಸದಸ್ಯ ವಿಚಾರಣಾ ಆಯೋಗ ರಚನೆ ಮಾಡಿ ಸರ್ಕಾರ ಆದೇಶಿಸಿತ್ತು. ನಂತರ 23–07–2024ರಂದು ವಿಚಾರಣಾ ಆಯೋಗದ ಕಾರ್ಯ ವ್ಯಾಪ್ತಿ ಮತ್ತು ಷರತ್ತುಗಳನ್ನು ನಿಗದಿ ಮಾಡಲಾಗಿತ್ತು. ನ್ಯಾಯಮೂರ್ತಿ ಪಿ.ಎನ್. ದೇಸಾಯಿ ಅವರ ಪತ್ರದ ಆಧಾರದ ಮೇಲೆ 06–01–2025 ರಂದು ವಿಚಾರಣಾ ಆಯೋಗದ ಅವಧಿಯನ್ನು ಮೇ 31 ರವರೆಗೆ ಸರ್ಕಾರ ವಿಸ್ತರಿಸಿದೆ. ಈ ಆದೇಶದ ಪ್ರತಿಯನ್ನು ಸಂಬಂಧಿಸಿದ ಎಲ್ಲಾ ಇಲಾಖೆ ಮುಖ್ಯಸ್ಥರಿಗೆ ಕಳುಹಿಸಲಾಗಿದೆ. ಆದರೆ, ಈಗಾಗಲೇ ನಿಗದಿ ಮಾಡಿರುವ ಕಾರ್ಯ ವ್ಯಾಪ್ತಿ ಮತ್ತು ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಸರ್ಕಾರದ ಅಧೀನ ಕಾರ್ಯದರ್ಶಿ ನಾಗರಾಜ್ ಸ್ಪಷ್ಟಪಡಿಸಿದ್ದಾರೆ.



ಆಯೋಗದ ಅವಧಿ ವಿಸ್ತರಣೆಗೆ ಸ್ನೇಹಮಯಿ ಕೃಷ್ಣ ಆಕ್ಷೇಪ



ಮುಡಾ ನಿವೇಶನ ಹಂಚಿಕೆ ಅಕ್ರಮಗಳ ಬಗ್ಗೆ ತನಿಖೆ ನಡೆಸುತ್ತಿರುವ ನಿವೃತ್ತ ನ್ಯಾಯಾಧೀಶರಾದ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ಆಯೋಗದ ಅವಧಿಯನ್ನು ವಿಸ್ತರಿಸುವ ಸರ್ಕಾರದ ನಡೆಗೆ ದೂರುದಾರ ಸ್ನೇಹಮಯಿ ಕೃಷ್ಣ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಕೇಂದ್ರ ಸರ್ಕಾರದಿಂದ ಡಿಬಾರ್ ಆಗಿರುವ ವಿಚಾರವನ್ನು ಪಿ.ಎನ್. ದೇಸಾಯಿ ಅವರು ಮುಚ್ಚಿಟ್ಟಿದ್ದರು. ತರುವಾಯ ನಾನು ದೂರು ನೀಡಿ ಈ ವಿಚಾರ ಸುದ್ದಿಯಾದ ನಂತರ ಪಿ.ಎನ್.ದೇಸಾಯಿ ಅವರು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಈ ಅರ್ಜಿಯ ವಿಚಾರಣೆ ಇನ್ನು ಬಾಕಿ ಇರುವಾಗ ಪಿ.ಎನ್.ದೇಸಾಯಿ ಅವರ ವಿಚಾರಣಾ ಆಯೋಗದ ಅವಧಿಯನ್ನು ವಿಸ್ತರಿಸಿರುವುದು ಸೂಕ್ತವಲ್ಲ. ಸರ್ಕಾರದ ಈ ನಡೆ ಹಲವು ಅನುಮಾನಗಳನ್ನು ಹುಟ್ಟು ಹಾಕುತ್ತದೆ ಎಂದು ಆಪಾದಿಸಿದರು.

ಮೈಸೂರು ಮಿತ್ರ

ಬುಧವಾರ 5 ಫೆಬ್ರವರಿ 2025

ಒಪಿಎಸ್ ಜಾರಿಗೆ ಆಗ್ರಹಿಸಿ ಫೆ.7ಕ್ಕೆ ಬೆಂಗಳೂರಲ್ಲಿ ಹಕ್ಕೊತ್ತಾಯ ಧರಣಿ

ಮೈಸೂರು, ಫೆ.4(ಜಿಎ)–ಕರ್ನಾಟಕ ರಾಜ್ಯ ಎನ್‌ಪಿಎಸ್ (ಹಳೆಯ ಪಿಂಚಣಿ ಯೋಜನೆ) ನೌಕರರ ಸಂಘದ ವತಿಯಿಂದ ಒಪಿಎಸ್ (ರಾಷ್ಟ್ರೀಯ ಪಿಂಚಣಿ ಯೋಜನೆ) ಜಾರಿಗೊಳಿಸುವಂತೆ ಆಗ್ರಹಿಸಿ ಫೆ.7ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಒಂದು ದಿನದ ಹಕ್ಕೊತ್ತಾಯ ಧರಣಿ ಹಮ್ಮಿಕೊಳ್ಳಲಾಗಿದೆ. ಹೀಗಾಗಿ ಜಿಲ್ಲೆಯ ಸಂಘದ ಸದಸ್ಯರು, ಇನ್ನಿತರರೂ ಪಾಲ್ಗೊಳ್ಳಬೇಕೆಂದು ಜಿಲ್ಲಾಧ್ಯಕ್ಷ ಎಸ್.ಆರ್. ಮಂಜುನಾಥ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2006 ರ ಏ.1ರಿಂದ ಸರ್ಕಾರಿ ಸೇವೆಗೆ ಸೇರಿರುವ ನೌಕರರ ಸಂಧ್ಯಾ ಕಾಲದ ಬದುಕಿನ ಭದ್ರತೆಯನ್ನು ತಂದು ಕೊಡುವ ನಿಟ್ಟಿನಲ್ಲಿ ಹಾಗೂ ಈಗಾಗಲೇ ಮರಣ ಹೊಂದಿರುವ ಎನ್‌ಪಿಎಸ್‌ಗೆ ಒಳಪಡುವ ನೌಕರರ ಅವಲಂಬಿತ ಕುಟುಂಬಗಳಿಗೆ ಮತ್ತು ಎನ್‌ಪಿಎಸ್ ಯೋಜನೆ ಅಡಿಯಲ್ಲಿ ನಿವೃತ್ತಿ ಹೊಂದಿ ದಯನೀಯ ಜೀವನ ನಡೆಸುತ್ತಿರುವವರ ನೆರವಿಗೆ ಸರ್ಕಾರ ಒಪಿಎಸ್ ಜಾರಿ ಮೂಲಕ ನಿಲ್ಲಬೇಕೆಂದು ಈ ಹಿಂದಿನಿಂದಲೂ ಒತ್ತಾಯ ಮಾಡಲಾಗುತ್ತಿದೆ ಎಂದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವ ಮೊದಲು ಚುನಾವಣಾ ಪ್ರಣಾಳಿಕೆಯಲ್ಲಿ ಎನ್‌ಪಿಎಸ್ ರದ್ದುಗೊಳಿಸುವುದಾಗಿ ಭರವಸೆ ನೀಡಿತ್ತು. ಆದರೆ ಸರ್ಕಾರ ಅಧಿಕಾರಕ್ಕೆ ಬಂದು ವರ್ಷ ಮೀರಿದ್ದರೂ ಕ್ರಮ ಕೈಗೊಂಡಿಲ್ಲ. ಹೀಗಾಗಿ ಅಂದು ಹಕ್ಕೊತ್ತಾಯಕ್ಕಾಗಿ ಧರಣಿ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಆರ್. ಶ್ರೀಧರ್, ಮುರಳೀಕೃಷ್ಣ, ಯಶವಂತ್, ತೀರ್ಥಕುಮಾರ್ ಉಪಸ್ಥಿತರಿದ್ದರು.

ವಿವೇಕಾನಂದ ಜಯಂತಿ



ಮೈಸೂರಿನ ವಿವೇಕಾನಂದ ಪದವಿ ಪೂರ್ವ ಕಾಲೇಜಿನಲ್ಲಿ ವಿವೇಕಾನಂದರ ಜಯಂತಿ ಪ್ರಯುಕ್ತ ನಡೆದ ಅಂತರ ಶಾಲಾ ಮಟ್ಟದ ಲಿಖಿತ ರಸಪ್ರಶ್ನೆ ಸ್ಪರ್ಧೆಯಲ್ಲಿ ನಗರದ ಅನಂತಗೀತ ವಿದ್ಯಾಲಯದ ವಿದ್ಯಾರ್ಥಿಗಳಾದ ಕೀರ್ತಿರಾಜ್ ಪ್ರಥಮ, ನಮಿತ್ ಗೌಡ ದ್ವಿತೀಯ ಮತ್ತು ಸಿಂಚನಾ ಆರ್.ಗೌಡ ತೃತೀಯ ಸ್ಥಾನ ಪಡೆದಿದ್ದಾರೆ. ವಿಜೇತ ವಿದ್ಯಾರ್ಥಿಗಳೊಂದಿಗೆ ಶಾಲೆಯ ಮುಖ್ಯ ಶಿಕ್ಷಕ ಲೋಕೇಶ್ ಹೆಚ್ ಪಿ, ಶಿಕ್ಷಕರಾದ ಜಮುನಾ, ಉಷಾ, ಕಾವೇರಮ್ಮ, ಶಿಲ್ಪಾ ಅವರನ್ನು ಚಿತ್ರದಲ್ಲಿ ಕಾಣಬಹುದು.

ಬಾಬು ಕೆ.ವೀರೇಗೌಡರಿಗೆ ಮೈಸೂರು ವಿವಿ ಗೌರವ ಡಾಕ್ಟರೇಟ್ ಪ್ರದಾನ ಮಾಡಿದ ರಾಜ್ಯಪಾಲರು

ಬೆಂಗಳೂರು, ಫೆ.4(ಕೆಎಂಶಿ)–ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿಯನ್ನು ಬಾಬು ಕೆ.ವೀರೇಗೌಡ ಅವರಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಇಂದು ಪ್ರದಾನ ಮಾಡಿದರು. ರಾಜಭವನದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡಿ ಮಾತನಾಡಿದ ಅವರು, ಮೈಸೂರು ವಿಶ್ವವಿದ್ಯಾನಿಲಯ ಕರ್ನಾಟಕ ರಾಜ್ಯದ ಮೊದಲ ಹಾಗೂ ದೇಶದ ಆರನೇ ಅತ್ಯಂತ ಹಳೇ ವಿಶ್ವವಿದ್ಯಾಲಯವಾಗಿದ್ದು, ದೇಶಕ್ಕೆ ಅನೇಕ ವಿಜ್ಞಾನಿಗಳು, ತತ್ವಜ್ಞಾನಿಗಳು ಮತ್ತು ರಾಜಕಾರಣಿಗಳನ್ನು ಕೊಡುಗೆಯಾಗಿ ನೀಡಿದೆ. ಶಿಕ್ಷಣ, ವಿಜ್ಞಾನ, ಸಾಹಿತ್ಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ, ದೇಶದ ಪ್ರಗತಿಗೆ ಗಣನೀಯ ಕೊಡುಗೆ ನೀಡಿದ ಮಹನೀಯರಿಗೆ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ನೀಡುತ್ತಿರುವುದು ಸಂತೋಷದ ಸಂಗತಿಯಾಗಿದೆ ಎಂದು ಹೇಳಿದರು.

ಚಿನ್ನದ ಪದಕ ವಿಜೇತ ವಿದ್ಯಾರ್ಥಿನಿಗೆ ಸನ್ಮಾನ



ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಎಂ.ಎ ವಿಭಾಗದಲ್ಲಿ 11 ಚಿನ್ನದ ಪದಕ ಹಾಗೂ ಐದು ನಗದು ಬಹುಮಾನವನ್ನು ಪಡೆದ ಕುಮಾರಿ ಕಾವ್ಯ ಅವರನ್ನು ಮೈಸೂರು ತಾಲೂಕು ನಾಯಕ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಮುಕ್ತ ವಿವಿ ಮನೋಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಹೊಸಕೋಟೆ ಮಂಜುನಾಥ್, ಭೂ ಮಾಪನ ಇಲಾಖೆ ಸಹಾಯಕ ನಿರ್ದೇಶಕ ಚಿಕ್ಕಣ್ಣ, ಮುಖಂಡರಾದ ಕ್ಯಾತಮಾರನಹಳ್ಳಿ ವೆಂಕಟೇಶ್, ಎನ್.ಮಹದೇವಸ್ವಾಮಿ, ವೆಂಕಟಯ್ಯ, ಕುಮಾರಸ್ವಾಮಿ, ಮರಿಸ್ವಾಮಿ ನಾಯಕ್, ನಾರಾಯಣ್, ರಾಜಶೇಖರ್, ಗೋಪಾಲ್, ರಂಗಸ್ವಾಮಿ, ಸೋಮ, ಚಂದ್ರು, ಕೇಶವ ನಾಯಕ್, ಚಿಕ್ಕಣ್ಣ, ರಂಗಸ್ವಾಮಿ, ವಿದ್ಯಾರ್ಥಿನಿಲಯ ಪಾಲಕರಾದ ರಾಘವ ನಾಯಕ್, ಸೋಮೇಶ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಜಿಲ್ಲಾ ಭಗೀರಥ ಉಪ್ಪಾರರ ಸಂಘದ ಅಧ್ಯಕ್ಷರ ವಿರುದ್ಧ ಆರೋಪ

ಮೈಸೂರು, ಫೆ.4(ಜಿಎ)–ಮೈಸೂರು ಜಿಲ್ಲಾ ಭಗೀರಥ ಉಪ್ಪಾರರ ಸಂಘದ ಅಧ್ಯಕ್ಷರು ಆಯ್ಕೆಯಾದ ದಿನದಿಂದಲೂ ಈವರೆಗೂ ಸಂಘದ ಏಳಿಗೆಗೆ ಯಾವುದೇ ಕೆಲಸ ಮಾಡುತ್ತಿಲ್ಲ. ಬದಲಾಗಿ ತಮ್ಮ ಏಳಿಗೆಗೆ ಸ್ಥಾನ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂದು ಸಂಘದ ಗೌರವ ಸಲಹೆಗಾರ ಪಿ.ಎಸ್.ವಿಷಕಂಠಯ್ಯ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಯೋಗೀಶ್ ಉಪ್ಪಾರ್ ಅವರು ಸಂಘದ ಇನ್ನಿತರ ಪದಾಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಕೇವಲ ಪ್ರಚಾರಪ್ರಿಯರಾಗಿದ್ದಾರೆ. ಗಣ್ಯರ ಜೊತೆಗೆ ಫೋಟೋ ತೆಗೆಸಿಕೊಂಡು ಪ್ರಚಾರ ಪಡೆಯುವುದರಲ್ಲಿಯೇ ನಿರತರಾಗಿದ್ದು, ಸಂಘವನ್ನು ಸಂಪೂರ್ಣ ನಿರ್ಲಕ್ಷಿಸಿದ್ದಾರೆ. ಹೀಗಾಗಿ ಪದಾಧಿಕಾರಿಗಳೆಲ್ಲ ಸೇರಿ ಅವರನ್ನು ವಜಾಗೊಳಿಸುವ ಬಗ್ಗೆ ಆಲೋಚಿಸುತ್ತಿದ್ದಾರೆ. ಆದ್ದರಿಂದ ಕಾನೂನು ಹೋರಾಟದ ಮೂಲಕ ಅವರನ್ನು ವಜಾಗೊಳಿಸುತ್ತೇವೆ ಎಂದರು. ಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಶಾಂತರಾಜು, ತಮ್ಮಡಿ ಮಾದೇಶ್, ಮಹದೇವಶೆಟ್ಟಿ, ರಮೇಶ್, ಕೃಷ್ಣ, ಗೋವಿಂದರಾಜು ಉಪಸ್ಥಿತರಿದ್ದರು.


ಭತ್ತದ ಬಿತ್ತನೆ ಬೀಜಕ್ಕೆ ಸೂಕ್ತ ದರ ನಿಗದಿ ಮಾಡದಿದ್ದರೆ ಬೀಜ ಖರೀದಿ ಕೇಂದ್ರಕ್ಕೆ ಬೀಗ

ಮೈಸೂರು, ಫೆ.4(ಜಿಎ)–ರಾಜ್ಯ ಬೀಜ ನಿಗಮದ ಮೈಸೂರು ಕಚೇರಿಯು ಬೀಜೋತ್ಪಾದಕರಿಂದ ಈಗ ಪಡೆಯುತ್ತಿರುವ ಭತ್ತದ ಬಿತ್ತನೆಬೀಜದ ದರ ಕಳೆದ ಸಾಲಿಗೆ ಹೋಲಿಸಿದರೆ, ಕಡಿಮೆ ನಿಗದಿ ಮಾಡಿದೆ. ಹೀಗಾಗಿ ಇನ್ನು ಒಂದು ವಾರದಲ್ಲಿ ಸೂಕ್ತ ದರ ನಿಗದಿ ಮಾಡದಿದ್ದಲ್ಲಿ ಬಂಡಿಪಾಳ್ಯದಲ್ಲಿರುವ ಬೀಜ ಖರೀದಿ ಕೇಂದ್ರದ ಕಚೇರಿಗೆ ಬೀಗ ಜಡಿಯಬೇಕಾಗುತ್ತದೆ ಎಂದು ಜಿಲ್ಲೆಯ ಕೆಲ ಬೀಜೋತ್ಪಾದಕರು ಎಚ್ಚರಿಕೆ ನೀಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕಲ್ಮಳ್ಳಿಯ ಬೀಜೋತ್ಪಾದಕರ ರೈತ ಪ್ರಭುಸ್ವಾಮಿ ಮಾತನಾಡಿ, ಕಳೆದ ಸಾಲಿಗೆ ಹೋಲಿಸಿದರೆ, ಈ ಬಾರಿ ಜ್ಯೋತಿ ಭತ್ತಕ್ಕೆ 3100 ರೂ, ಇದ್ದರೆ ಕಳೆದ ಬಾರಿ ಅದು 3600 ಇತ್ತು. ಇದೇ ರೀತಿ ಇತರೆ ತಳಿಗಳಿಗೂ ಅತಿ ಕಡಿಮೆ ನಿಗದಿ ಮಾಡಲಾಗಿದೆ. ಹೀಗಾಗಿ ಬೀಜೋತ್ಪಾದನೆಗಾಗಿ ನೋಂದಣಿ ಶುಲ್ಕ, ಲೋಡ್ ಅನ್‌ಲೋಡ್, ಸಾಗಾಣಿಕೆ ವೆಚ್ಚ, ಇದರೊಡನೆ ನಿರ್ವಹಣೆಗಾಗಿ ಅಪಾರ ವೆಚ್ಚ ಮಾಡಿರುವ ರೈತರಿಗೆ ತೀರಾ ಸಮಸ್ಯೆಯಾಗಲಿದೆ. ಹಲವರು ಸಾಲ ಮಾಡಿ ಈ ಭತ್ತ ಬೆಳೆದಿದ್ದು, ದರ ಕಡಿಮೆ ನಿಗದಿ ಮಾಡಿರುವುದರಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದ್ದರಿಂದ ಸೂಕ್ತ ದರ ನಿಗದಿ ಮಾಡಬೇಕು. ಇಲ್ಲದಿದ್ದರೆ ಈಗಾಗಲೇ ತಾವು ಪೂರೈಸಿರುವ ಭತ್ತ ವಾಪಸು ನೀಡಬೇಕು. ಒಂದು ವಾರದಲ್ಲಿ ಸೂಕ್ತ ದರ ನಿಗದಿ ಮಾಡದಿದ್ದಲ್ಲಿ ನಿಗಮದ ಕಚೇರಿಗೆ ಬೀಗ ಜಡಿದು ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಗೋಷ್ಠಿಯಲ್ಲಿ ಗುರುಸ್ವಾಮಿ, ಮಹದೇವಸ್ವಾಮಿ, ನಾಗೇಂದ್ರಸ್ವಾಮಿ ಇದ್ದರು.

ವರ್ಷಪೂರ್ತಿ ವಾಜಪೇಯಿ ಸ್ಮರಿಸುವ ವಿಶಿಷ್ಟ ಕಾರ್ಯಕ್ರಮ

ಅಟಲ್ ಜೀ ಜನ್ಮ ಶತಾಬ್ದಿ ಸಮಿತಿ ರಾಜ್ಯ ಸಹ ಸಂಚಾಲಕ ಫಣೀಶ್ ಮಾಹಿತಿ



ಅಟಲ್ ಬಿಹಾರಿ ವಾಜಪೇಯಿ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಅಟಲ್ ಜೀ ಜನ್ಮ ಶತಾಬ್ದಿ ಸಮಿತಿ ರಾಜ್ಯ ಸಹ ಸಂಚಾಲಕ ಎನ್.ವಿ.ಫಣೀಶ್ ಮಾತನಾಡಿದರು.

ಮೈಸೂರು,ಫೆ.4(ಬಿಎಲ್‌ಯು)– ದಿವಂಗತ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರನ್ನು ಸ್ಮರಿಸುವ ಹಲವು ವಿನೂತನ ಕಾರ್ಯಕ್ರಮಗಳು ಡಿಸೆಂಬರ್ 25ವರೆಗೆ ಒಂದು ವರ್ಷ ಕಾಲ ನಿರಂತರವಾಗಿ ನಡೆಯಲಿದೆ ಎಂದು ಅಟಲ್ ಜೀ ಜನ್ಮ ಶತಾಬ್ದಿ ಸಮಿತಿಯ ರಾಜ್ಯ ಸಹ ಸಂಚಾಲಕ ಎನ್.ವಿ.ಫಣೀಶ್ ತಿಳಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಈಗಾಗಲೇ ಡಿಸೆಂಬರ್ 24, 2024ರಿಂದ ಅಟಲ್ ಜನ್ಮ ಶತಾಬ್ದಿ ಕಾರ್ಯಕ್ರಮಗಳು ಆರಂಭವಾಗಿದ್ದು, ಡಿಸೆಂಬರ್ 25ರವರೆಗೆ ನಡೆಯಲಿದೆ ಎಂದು ಹೇಳಿದರು.

ಅಟಲ್ ಬಿಹಾರಿ ವಾಜಪೇಯಿ ಅವರನ್ನು ವಿರೋಧ ಪಕ್ಷಗಳು ಕೂಡ ಒಪ್ಪುವ ಅಜಾತಶತ್ರುವಾಗಿದ್ದರು. ಆದರ್ಶ ರಾಜಕಾರಣಕ್ಕೆ ವಾಜಪೇಯಿ ಮೇಲ್ಪಂಕ್ತಿ ಹಾಕಿಕೊಟ್ಟಿದ್ದರು. ಈ ಹಿನ್ನೆಲೆಯಲ್ಲಿ ಇಂತಹ ಮೇರು ವ್ಯಕ್ತಿತ್ವದ ರಾಜಕಾರಣಿಯ ತತ್ವಾದರ್ಶಗಳನ್ನು ಜನರಿಗೆ ಮನವರಿಕೆ ಮಾಡಿಕೊಡಲು ಜನ್ಮ ಶತಾಬ್ದಿ ಕಾರ್ಯಕ್ರಮ ರೂಪಿಸಲಾಗಿದೆ ಎಂದರು.

ಅಟಲ್ ಬಿಹಾರಿ ವಾಜಪೇಯಿ ಅವರ ಸಂಘಟನಾತ್ಮಕತೆ, ಹೋರಾಟ ಮತ್ತು ವ್ಯಕ್ತಿತ್ವದ ಆಧಾರದ ಮೇಲೆ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ವಾಜಪೇಯಿ ಅವರು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಕೂಡ ವಾಸ್ತವ್ಯ ಹೂಡಿದ್ದರು. ಈ ಹಿನ್ನೆಲೆ ವಾಜಪೇಯಿ ಅವರಿಗೆ ಮೈಸೂರಿನಲ್ಲಿರುವ ಯಾವ ವ್ಯಕ್ತಿಯ ಒಡನಾಟವಿತ್ತು. ಅವರು ಕಂಡಂತೆ ವಾಜಪೇಯಿ ಅವರ ವಿಶಿಷ್ಟ ಗುಣಗಳೇನು ಎಂಬ ಬಗ್ಗೆ ಮಾಹಿತಿ ಸಂಗ್ರಹಿಸಲಾಗುವುದು. ತರುವಾಯ ಒಟ್ಟಾರೆ ಅಂಶಗಳನ್ನು ಕ್ರೋಢೀಕರಿಸಿ ಪುಸ್ತಕದ ರೂಪ ನೀಡಲಾಗುವುದು ಹೇಳಿದರು.

ಅಟಲ್ ಬಿಹಾರಿ ವಾಜಪೇಯಿ ಅವರ ಸ್ಮರಣೆ ಕುರಿತಂತೆ ಫೆಬ್ರವರಿ 15ರಿಂದ ಮಾರ್ಚ್ 15ರವರೆಗೆ ಮೈಸೂರು ಸೇರಿದಂತೆ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಫಣೀಶ್ ಮಾಹಿತಿ ನೀಡಿದರು.

ಇದೇ ವೇಳೆ ಮಾತನಾಡಿದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಜಿ.ಮೋಹನ್, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರ್ಯವೈಖರಿ ಹಾಗೂ ಆಡಳಿತ ವಿಫಲತೆಯನ್ನು ಪ್ರತಿದಿನ ಸಮರ್ಥಿಸಿಕೊಳ್ಳುತ್ತಾರೆ. ರಾಜ್ಯ ವಕ್ತಾರರಾಗಿದ್ದರೂ ಮೈಸೂರು ಬಿಟ್ಟು ಎಲ್ಲೂ ಮಾತನಾಡುವುದಿಲ್ಲ ಎಂದು ಟೀಕಿಸಿದರು. ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಜಿಲ್ಲಾ ಪ್ರಮುಖ್ ಸುರೇಶ್‌ಬಾಬು, ಶಿವಕುಮಾರ್, ಜಿಲ್ಲಾ ಸಂಚಾಲಕ ಕಿರಣ್, ರಾಮೇಗೌಡ, ರಮೇಶ್, ಜಿಲ್ಲಾ ಸಮಿತಿ ಪ್ರಮುಖರಾದ, ದಯಾನಂದ ಪಟೇಲ್, ಮಹೇಶ್‌ರಾಜ್ ಅರಸ್, ಪಾಪಣ್ಣ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಯೋಗಕ್ಷೇಮ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಆಯ್ಕೆ

ಮೈಸೂರು, ಫೆ.4–ಮೈಸೂರಿನ ಶ್ರೀರಾಂಪುರ 2ನೇ ಹಂತದಲ್ಲಿರುವ ಯೋಗಕ್ಷೇಮ ಗೃಹ ನಿರ್ಮಾಣ ಸಹಕಾರ ಸಂಘದ 2025–30ನೇ ಸಾಲಿಗೆ ನಿರ್ದೇಶಕರು ಹಾಗೂ ಪದಾಧಿಕಾರಿಗಳ ಚುನಾವಣೆ ಇತ್ತೀಚೆಗೆ ಸಂಘದ ಕಚೇರಿಯಲ್ಲಿ ನಡೆಯಿತು.



ಶೇಖರ್



ಆಚಾರ್

ಎನ್.ಎನ್.ಶೇಖರ್ ಹಾಗೂ ಹೆಚ್.ವಿ.ಎಲ್.ಎನ್.ಆಚಾರ್, ಕ್ರಮವಾಗಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾಗಿ ಅವಿರೋಧವಾಗಿ ಪುನರಾಯ್ಕೆಯಾದರು. ನಿರ್ದೇಶಕರ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಹೆಚ್.ವಿ.ಎಲ್.ಎನ್. ಆಚಾರ್, ಎಸ್.ಶ್ರೀಧರ್, ಕೆ.ಅನಂತ, ಎಂ.ಎನ್.ರಮೇಶ್, ಡಿ.ಆರ್.ಶಂಕರೇಗೌಡ, ಕೆ.ಸತೀಶ್, ಎಂ.ಪಿ.ರಾಜೇಂದ್ರ ಪ್ರಸಾದ್, ಇ.ಎಂ.ಪುಟ್ಟಸ್ವಾಮಿ, ಎಸ್.ಸುರೇಶ್‌ಬಾಬು, ಎಲ್.ಎನ್.ಶೇಖರ್, ಶ್ರೀಮತಿ ಸಿ.ಎಸ್.ಲಕ್ಷ್ಮಿ, ಅಂಜಲಾದೇವಿ, ದೇವಿಕುಮಾರ್, ಆರ್.ಗೋವಿಂದ, ಬಿ.ಪೂವಪ್ಪ ಆಯ್ಕೆಯಾದರು ಎಂದು ಪ್ರಕಟಣೆ ತಿಳಿಸಿದೆ.

ಫೆ.9ಕ್ಕೆ ಬಿ.ಕೆ.ಮೀನಾಕ್ಷಿಯವರ ಕೃತಿಗಳ ಲೋಕಾರ್ಪಣೆ

ಮೈಸೂರು,ಫೆ.4–ಮೈಸೂರಿನ ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗದ ವತಿಯಿಂದ ಹಿರಿಯ ಕವಯಿತ್ರಿ ಹಾಗೂ ಲೇಖಕಿ ಬಿ.ಕೆ.ಮೀನಾಕ್ಷಿ ವಿರಚಿತ ಮೋನು ಮತ್ತು ಆನೆ (ಮಕ್ಕಳ ಕಥಾ ಸಂಕಲನ), ಸದಾ ನಿಮ್ಮೊಂದಿಗೆ (ವ್ಯಕ್ತಿ ಚಿತ್ರಗಳ ಸಂಕಲನ), ನಗುವಿನಿಬ್ಬನಿ ಮಿನುಗುತಿರಲಿ (ಪ್ರಬಂಧಗಳ ಸಂಕಲನ) ಕೃತಿಗಳ ಲೋಕಾರ್ಪಣೆ ಸಮಾರಂಭವನ್ನು ಫೆ.9ರಂದು ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಮೇಲುಕೋಟೆ ವೆಂಗೀಪುರ ನಂಬೀಮಠದ ಪೀಠಾಧ್ಯಕ್ಷ ಶ್ರೀಇಳೈ ಆಳ್ವಾರ್ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಕೃತಿಗಳನ್ನು ಹಿರಿಯ ಸಂಸ್ಕೃತ ವಿದ್ವಾಂಸ ಡಾ.ಹೆಚ್.ವಿ.ನಾಗರಾಜರಾವ್ ಲೋಕಾರ್ಪಣೆ ಮಾಡಲಿದ್ದು, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಜೆಎಸ್‌ಎಸ್ ವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಹಿರಿಯ ವಿಮರ್ಶಕ ಡಾ.ಸಿ.ನಾಗಣ್ಣ ಕೃತಿ ಕುರಿತು ಮಾತನಾಡಲಿದ್ದಾರೆ. ಲೇಖಕಿ ಬಿ.ಕೆ.ಮೀನಾಕ್ಷಿ, ಸವಿಗನ್ನಡ ಪತ್ರಿಕೆ ಸಂಪಾದಕ ರಂಗನಾಥ್ ಉಪಸ್ಥಿತರಿರುವರು.

ಕೇಂದ್ರ ಬಜೆಟ್‌ನ ಸ್ವಾಗತಾರ್ಹ ಪ್ರಸ್ತಾಪ

ಮೈಸೂರು, ಫೆ.4–ಕಳೆದ ಫೆ.1ರಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿದ ಬಜೆಟ್ ಜನರಲ್ಲಿ ಭರವಸೆ ಮೂಡಿಸಿದೆ. ಆದಾಯ ತೆರಿಗೆ ಮಿತಿ ಏರಿಕೆಯಿಂದ ಮಧ್ಯಮ ವರ್ಗಕ್ಕೆ ವರದಾನವಾಗಿದೆ. ಆರ್ಥಿಕ ಬೆಳವಣಿಗೆಗೆ ಈ ಬಜೆಟ್ ಶಕ್ತಿವರ್ಧಕವಾಗಲಿದೆ ಎಂದು ನ್ಯಾಷನಲ್ ರಿಯಲ್ ಎಸ್ಟೇಟ್ ಡೆವಲಪ್‌ಮೆಂಟ್ ಕೌನ್ಸಿಲ್ (ನರೆಡ್ಕೋ) ಮೈಸೂರು ಚಾಪ್ಟರ್ ಖಜಾಂಚಿ ಎ.ಪಿ.ನಾಗೇಶ್ ಅಭಿಪ್ರಾಯಪಟ್ಟಿದ್ದಾರೆ.



ಎ.ಪಿ.ನಾಗೇಶ್

ಪರಿಶಿಷ್ಟ ಜಾತಿ, ಪಂಗಡದ ಸಮುದಾಯದ ಯುವಕರು ಹಾಗೂ ಮಹಿಳೆಯರಿಗೆ ಉದ್ಯಮ ಸ್ಥಾಪನೆಗೆ 2 ಕೋಟಿವರೆಗೆ ಸಾಲ ಸೌಲಭ್ಯ ಕಲ್ಪಿಸುವ ಪ್ರಸ್ತಾಪವೂ ಸ್ವಾಗತಾರ್ಹ. ರೈತರಿಗೆ ಈ ಬಾರಿಯೂ ಭರಪೂರ ಕೊಡುಗೆ ನೀಡಿರುವುದು ಪ್ರಶಂಸನೀಯ ಕ್ರಮ ಎಂದು ಅವರು ತಿಳಿಸಿದ್ದಾರೆ.

ರಂಗಭೂಮಿ, ಜಾನಪದ ಕಲೆಗಳ ಉಚಿತ ತರಬೇತಿ ಶಿಬಿರ

ಮೈಸೂರು, ಫೆ. 4–ಮೈಸೂರಿನ ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ ವತಿಯಿಂದ ಫೆ.7ರಂದು ಸಂಜೆ 4 ಗಂಟೆಗೆ ರಂಗಾಯಣದ ಬಿ.ವಿ.ಕಾರಂತರ ರಂಗ ಚಾವಡಿಯಲ್ಲಿ ರಂಗಭೂಮಿ, ಜಾನಪದ ಕಲೆಗಳ ಉಚಿತ ತರಬೇತಿ ಶಿಬಿರ ಏರ್ಪಡಿಸಲಾಗಿದೆ. ಶಿಬಿರವು ಒಂದು ತಿಂಗಳ ಕಾಲ ಪ್ರತಿದಿನ ಸಂಜೆ 4ರಿಂದ 6ರವರೆಗೆ ನಡೆಯಲಿದ್ದು, ಜನಪದ ನೃತ್ಯಗಳು, ಸಂಗೀತ ಪ್ರಕಾರಗಳು, ಅಭಿನಯ ತರಬೇತಿಯನ್ನು ವಿವಿಧ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗೆ ಮೊ. 9632073716, 7618739343 ಸಂಪರ್ಕಿಸಬಹುದು.

ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಾಲ ಸಿಗದೆ ಖಾಸಗಿ ಹಣಕಾಸು ಸಂಸ್ಥೆಗಳ ಮೇಲೆ ಅವಲಂಬನೆ

ಸಾಲ ಬಾಧೆಯಿಂದ ಕೆಲವರು ಆತ್ಮಹತ್ಯೆ, ಕೆಲವರು ಊರು ಖಾಲಿ

ಮೈಸೂರು, ಫೆ.4(ಬಿಎಲ್‌ಯು)– ರಾಷ್ಟ್ರೀಕೃತ ಬ್ಯಾಂಕ್‌ಗಳು ನಿಗದಿತ ಸಮಯದಲ್ಲಿ ಸಾಲ ನೀಡದ ಕಾರಣ ರೈತರು ಹಾಗೂ ಜನಸಾಮಾನ್ಯರು ಖಾಸಗಿ ಬ್ಯಾಂಕ್ ಹಾಗೂ ಮೈಕ್ರೋ ಫೈನಾನ್ಸ್‌ಗಳನ್ನು ಅವಲಂಬಿಸಿ ಕಿರುಕುಳ ಅನುಭವಿಸುತ್ತಿದ್ದಾರೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರೈತ ಬಣದ ಅಧ್ಯಕ್ಷ ಇಂಗಲಗುಪ್ಪೆ ಕೃಷ್ಣೇಗೌಡ ಆರೋಪಿಸಿದರು.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಖಾಸಗಿ ಬ್ಯಾಂಕ್ ಹಾಗೂ ಮೈಕ್ರೋ ಫೈನಾನ್ಸ್‌ಗಳ ಹಾವಳಿ ಹೆಚ್ಚಾಗಿರುವ ಕಾರಣ ಸಾಲಕ್ಕೆ ಹೆದರಿದ ಜನರು ಊರು ಬಿಡುತ್ತಿದ್ದಾರೆ. ಕೆಲವರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ ಎಂದು ದೂರಿದರು.

ರೈತರು ಹಾಗೂ ಜನಸಾಮಾನ್ಯರು ಸಾಲ ಕೇಳಿದರೆ ರಾಷ್ಟ್ರೀಕೃತ ಬ್ಯಾಂಕ್‌ಗಳು ಬಹಳಷ್ಟು ದಾಖಲಾತಿ ಕೇಳುತ್ತಾರೆ. ಆದರೆ ವಂಚನೆ ಎಸಗುವ ಉದ್ಯಮಿಗಳು ಇಂದು ಸಾಲಕ್ಕೆ ಅರ್ಜಿ ಹಾಕಿದರೆ ನಾಳೆಯೇ ಮಂಜೂರು ಮಾಡುತ್ತದೆ. ಇದರಿಂದ ಸಾಲ ಸಿಗದ ರೈತರು ಹೈರಾಣಾಗಿದ್ದಾರೆ ಎಂದು ಆಪಾದಿಸಿದರು.

ಖಾಸಗಿ ಹಣಕಾಸು ಸಂಸ್ಥೆಗಳು ರಕ್ತ ಹೀರುವಂತೆ ಕಿರುಕುಳ ನೀಡುತ್ತಿವೆ. ಇದರಿಂದ ಮೈಸೂರು ಸೇರಿದಂತೆ ರಾಜ್ಯಾದ್ಯಂತ ರೈತರು ಹಾಗೂ ಜನಸಾಮಾನ್ಯರು ಪ್ರತಿದಿನ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಈ ನಿಟ್ಟಿನಲ್ಲಿ ಇದಕ್ಕೆ ಕಡಿವಾಣ ಹಾಕಲು ರಾಜ್ಯ ಸರ್ಕಾರ ಸುಗ್ರೀವಾಜ್ಞೆ ತರಲು ಮುಂದಾಗಿರುವುದು ಸ್ವಾಗತಾರ್ಹ ಎಂದರು.




ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಮಂಗಳವಾರ ಕರ್ನಾಟಕ ರಾಜ್ಯ ರೈತ ಸಂಘದ ರೈತ ಬಣದ ಅಧ್ಯಕ್ಷ ಇಂಗಲಗುಪ್ಪೆ ಕೃಷ್ಣೇಗೌಡ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮೈಸೂರು ತಾಲೂಕು ಕಚೇರಿ ಸೇರಿದಂತೆ ಎಲ್ಲಾ ಕಚೇರಿಗಳಲ್ಲಿ ಲಂಚವಿಲ್ಲದೆ ಕೆಲಸ ಆಗುತ್ತಿಲ್ಲ. ಪ್ರತಿಯೊಂದು ಕೆಲಸ ಆಗಬೇಕೆಂದರೆ ಮಧ್ಯವರ್ತಿಗಳ ಮೂಲಕ ಹೋಗಬೇಕಾದ ವ್ಯವಸ್ಥೆ ಇದೆ ಎಂದು ಕಿಡಿಕಾರಿದರು.

ವರುಣ ವಿಧಾನಸಭಾ ಕ್ಷೇತ್ರ, ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರ ಹಾಗೂ ಹೆಚ್.ಡಿ.ಕೋಟೆ ತಾಲೂಕಿನಲ್ಲಿ ರೈತರ ಹೆಸರಿನಲ್ಲಿ ಭೂ ಮಾಫಿಯಾ ಸರ್ಕಾರದ ಭೂಮಿ ಕಬಳಿಸುತ್ತಿದ್ದಾರೆ. ಅಧಿಕಾರಿಗಳು ಭೂಗಳ್ಳರ ಜೊತೆ ಶಾಮೀಲಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಸರ್ಕಾರ ಈ ಬಗ್ಗೆ ಗಮನಹರಿಸಬೇಕು ಎಂದು ಕೃಷ್ಣೇಗೌಡ ಆಗ್ರಹಿಸಿದರು. ಸಂಘದ ಮೈಸೂರು ಜಿಲ್ಲಾ ಅಧ್ಯಕ್ಷ ಮಾಲಿಕ್ ಆವೃತ್ತಿ, ಚಾಮರಾಜನಗರ ಜಿಲ್ಲಾಧ್ಯಕ್ಷ ಪಾಳ್ಯ ರಂಗಸ್ವಾಮಿ ನಾಯಕ್, ಮಂಡ್ಯ ಜಿಲ್ಲಾಧ್ಯಕ್ಷ ಕಂಠೀರವ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.02.2025 ಬುಧವಾರ, ಮಳೆ ನಕ್ಷತ್ರ: ಶ್ರವಣ 24.01.2025 ರಿಂದ 05.02.2025 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಭರಣಿ, ರಾಹುಕಾಲ: ಮಧ್ಯಾಹ್ನ 12 ರಿಂದ 1.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 9 ಗಂಟೆಗೆ ಹಿಮ್ಮಡಿ ಮುಳ್ಳು, ಪಿತ್ತಗಂಧೆ (ಶೀತ ಪಿತ್ತ) ಚಿಕಿತ್ಸಾ ಶಿಬಿರ; ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ರಾಮಕೃಷ್ಣ ವಿದ್ಯಾಕೇಂದ್ರ :** ಅಜ್ಜ ಅಜ್ಜಿಯರ ದಿನ, ಅಧ್ಯಕ್ಷತೆ : ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ. ಪಾಪೇಗೌಡ, ಉಪಸ್ಥಿತರು : ಕಾರ್ಯನಿರ್ವಾಹಕ ಅಧಿಕಾರಿ ಪ್ರೊ. ಚಿ. ಚಂದ್ರಶೇಖರ್, ಮುಖ್ಯೋಪಾಧ್ಯಾಯ ಜಿ.ಎನ್. ವಿಶ್ವನಾಥ್, ಮುಖ್ಯೋಪಾಧ್ಯಾಯಿನಿ ಶ್ರೀಮತಿ ವೀಣಾ ಕೆ. ಹೆಗಡೆ, ಸ್ಥಳ: ಶಾಲೆಯ ಶ್ರೀ ಶಾರದಾ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಸಂತ ಫಿಲೋಮಿನಾ ಕಾಲೇಜು, ಕನ್ನಡ ವಿಭಾಗ, ನವಕರ್ನಾಟಕ ಪ್ರಕಾಶನ :** ಬೃಹತ್ ಪುಸ್ತಕ ಪ್ರದರ್ಶನ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ತ್ರಯೀನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್ :** ಶ್ರೀ ಶ್ಯಾಮಲಾ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಶ್ರೀ ಚಕ್ರಾರ್ಚನೆ, ನವಾವರಣ ಪೂಜಾ, ಸಂಜೆ 5.30 ರಿಂದ ಶ್ರೀ ಹಯಗ್ರೀವ, ಶ್ರೀ ವಾಗ್ವಾದಿನಿ, ಶ್ರೀ ವಾಗೀಶ್ವರಿ, ಶ್ರೀಶುಕ ಶ್ಯಾಮಲಾ, ಶ್ರೀ ವೀಣಾ ಶ್ಯಾಮಲಾ, ಶ್ರೀ ವೇಣು ಶ್ಯಾಮಲಾ, ಶ್ರೀ ಶಾರಿಕಾ ಶ್ಯಾಮಲಾ, ಶ್ರೀ ಲಘು ಶ್ಯಾಮಲಾ, ಶ್ರೀ ನಕುಲಿ ಶ್ಯಾಮಲಾ, ಶ್ರೀ ಹಂಸತಿ ಶ್ಯಾಮಲಾ, ಶ್ರೀ ರಾಜ ಶ್ಯಾಮಲಾ ಆವರಣಾಂಗ ಹೋಮ, ಪೂರ್ಣಾಹುತಿ, ಪ್ರಸಾದ ವಿನಿಯೋಗ, ಸ್ಥಳ: ತ್ರಯೀನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್, ಜಯಲಕ್ಷ್ಮಿಪುರಂ.

■ **ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಸವಿತಾ ಮಹರ್ಷಿ ಜಯಂತಿ, ಉದ್ಘಾಟನೆ :ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ನಿವೃತ್ತ ಪ್ರಾಧ್ಯಾಪಕ ಡಾ. ಕೆ.ಎಸ್. ರಾಮಪ್ರಸಾದ್ ಅವರಿಂದ ಉಪನ್ಯಾಸ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಬೆಳಗ್ಗೆ 11.30ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಶ್ರೀ ತ್ಯಾಗರಾಜ ಆರಾಧನೆ ಪ್ರಯುಕ್ತ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ವಿದ್ವಾನ್ ಆರ್.ವಿ. ಅಕ್ಷಯ್, ವಿದ್ವಾನ್ ಆರ್.ವಿ. ಅಭಿಷೇಕ್ ಅವರಿಂದ ದ್ವಂದ್ವ ಗಾಯನ, ಸಹಕಾರ : ವಿದ್ವಾನ್ ಅಮೋಘ್ ನಡದೂರ್, ವಿದ್ವಾನ್ ಪ್ರಣವ್ ಸುಬ್ರಹ್ಮಣ್ಯ, ವಿದ್ವಾನ್ ಉತ್ತಮ್ ಶಾಂತರಾಜು, ಸ್ಥಳ: ಕೃಷ್ಣಮೂರ್ತಿಪುರಂ, ಶ್ರೀರಾಮಮಂದಿರ, ಸಂಜೆ 6 ರಿಂದ 8.30 ರವರೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ರಂಗ ದಿಗ್ಗಜರು–ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯ ಮರೆಯಬಾರದ ಮಹನೀಯರು, ಲೇಖನ ಹಾಗೂ ನಿರೂಪಣೆ–ಎಸ್. ರಾಮನಾಥ್, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ –ಎಂ.ರಾಘವೇಂದ್ರ, ಅಮೃತಾ ನಿತಿನ್ ಶಾಸ್ತ್ರಿ, ವ್ಯಾಖ್ಯಾನ–ಡಾ. ಕಬ್ಬಿನಾಲೆ ವಸಂತ ಭಾರಧ್ವಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.00 ಮನೋನಂದನ–ಪ್ರಾಯೋಜಿತ ಮಾನಸಿಕ ಆರೋಗ್ಯ ಕಾರ್ಯಕ್ರಮ 'ಹದಿಹರೆಯದ ಮಕ್ಕಳೊಂದಿಗೆ ಸಂಭಾಷಣೆ' ಕುರಿತು ತಿಳಿಸಿಕೊಡಲಿದ್ದಾರೆ ಮಾನಸಿಕ ರೋಗ ತಜ್ಞರಾದ ಡಾ. ಅಭಿಜಿತ್. ಹೆಚ್.ಆರ್. ಪ್ರಾಯೋಜಕರು–ಪ್ರೇರಣಾ ಆಸ್ಪತ್ರೆ ಮತ್ತು ಪ್ರೇರಣಾ ಫರ್ಟಿಲಿಟಿ ಕುವೆಂಪುನಗರ, ಮೈಸೂರು ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.35 ಆಯುಷ್‌ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ, 4.45 ಹಿಂದಿ ಪಾಠ, ಪ್ರಸ್ತುತಿ : ಡಾ. ಸ್ಮಿತಾ ಚಿಪ್ಳೂಣ್‌ಕರ್, 6.50 ಕೃಷಿರಂಗ : ಮೇವು, ಮೆಲುಕು–ಮೇವಿನ ಬೆಳೆಗಳ ಬೇಸಾಯ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ. ರಾಷ್ಟ್ರೀಯ ಹೈನುಗಾರಿಕೆ ಮಿಷನ್ ಈ ಕುರಿತು ಮಂಡ್ಯದ ಪಶುಪಾಲನೆ ಹಾಗೂ ಪಶುವೈದ್ಯಕೀಯ ಸೇವಾ ಇಲಾಖೆಯ ಮುಖ್ಯ ಪಶು ವೈದ್ಯಾಧಿಕಾರಿ ಬಿ.ಎಸ್. ತ್ರಿನೇಶ್ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಸವಿನೆನಪು, 9.30 ಕ್ರೀಡಾಲೋಕ, 10.00 ನಾಟಕ–ಕೊಣಾರ್ಕ, ಮೂಲ ಹಿಂದಿ–ಜಗದೀಶ್ ಚಂದ್ರ ಮಾಥೂರ್, ಹಿಂದಿ ನಾಟಕ ರೂಪಾಂತರ–ಅಂಜಲಿ ಶರ್ಮ, ಕನ್ನಡಾನುವಾದ–ಡಾ. ತಿಪ್ಪೇಸ್ವಾಮಿ, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್

■ **ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ :** 59ನೇ ವರ್ಷದ ತೈಪೂಸಂ ಮಹೋತ್ಸವ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು, ಸಂಜೆ 6.30ಕ್ಕೆ ಉದ್ಘಾಟನಾ ಸಮಾರಂಭ, ಚೇತನಾ ಸ್ಮಾರ್ಟ್ ಕಿಡ್ಸ್ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, ವಿಶ್ವೇಶ್ವರನಗರ.

■ **ಅರಳಿ ರಂಗ ತಂಡ, ಮೈಸೂರು :** ಅರಳಿ ರಂಗ ತಂಡದ ಉದ್ಘಾಟನೆ ಮತ್ತು ಡಾ. ಸಿ. ರವೀಂದ್ರನಾಥ್‌ರವರು ರಚಿಸಿರುವ ಉರುವಿ ಕನ್ನಡ ನಾಟಕ ಪ್ರದರ್ಶನ, ಸಂಗೀತ : ದಿಗ್ವಿಜಯ ಹೆಗ್ಗೋಡು, ಸಂಗೀತ : ವರ್ಷಾ, ಪ್ರಾಣೇಶ್, ನಿರ್ದೇಶನ : ರಮ್ಯ ಶೇಖರ್, ಪಾವನ ಧನರಾಜ್, ಉದ್ಘಾಟನೆ : ಕವಯತ್ರಿ ಡಾ. ಬಿ.ಟಿ. ಲಲಿತಾ ನಾಯಕ್, ಅತಿಥಿಗಳು : ಡಾ. ಆರ್. ಸಂತೋಷ್ ನಾಯಕ್, ಹಿರಿಯ ರಂಗ ಕಲಾವಿದೆ ಶ್ರೀಮತಿ ಗೀತಾ ಮೋಂಟಡ್ಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಉಪಸ್ಥಿತರು : ಡಾ. ಸಿ. ರವೀಂದ್ರನಾಥ್, ಸ್ಥಳ: ಕಿರು ರಂಗಮಂದಿರ, ಸಂಜೆ 6.30ಕ್ಕೆ.

ನೇರಳೆ ಗ್ರಾಮ, ಹೆಚ್.ಡಿ. ಕೋಟೆ ತಾ.

■ **ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು (ಹೆಚ್.ಡಿ. ಕೋಟೆ) :** 23ನೇ ವಾರ್ಷಿಕ ವಿಶೇಷ ಶಿಬಿರ–2024–25, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ, ಬೆಳಗ್ಗೆ 7ಕ್ಕೆ ಸರಳ ವ್ಯಾಯಾಮ, ಬೆಳಗ್ಗೆ 8.30 ರಿಂದ ಶ್ರಮದಾನ, ಗ್ರಾಮ ಸಮೀಕ್ಷೆ, ಸಂಜೆ 4ಕ್ಕೆ ಉಪನ್ಯಾಸ, ಅಧ್ಯಕ್ಷತೆ : ಬೀಚನಹಳ್ಳಿ ಗ್ರಾಪಂ ಉಪಾಧ್ಯಕ್ಷ ಬಸವರಾಜ ನಾಯಕ, ಸ್ಥಳ: ನೇರಳೆ ಗ್ರಾಮ, ಹೆಚ್.ಡಿ. ಕೋಟೆ ತಾ.

ಮೈಕ್ರೊ ಫೈನಾನ್ಸ್ ಕಂಪನಿಗಳ ಕಿರುಕುಳ: ರಾಜಭವನದ ಅಂಗಳದಲ್ಲಿ 'ಸುಗ್ರೀವಾಜ್ಞೆ'

ಬೆಂಗಳೂರು, ಫೆ.4– ಮೈಕ್ರೊ ಫೈನಾನ್ಸ್ ಕಂಪನಿಗಳು ಮತ್ತು ಲೇವಾದೇವಿದಾರರು ನೀಡುತ್ತಿರುವ ಕಿರುಕುಳದಿಂದ ಸಾಲಗಾರರನ್ನು ರಕ್ಷಿಸುವ ಉದ್ದೇಶದಿಂದ ರೂಪಿಸಿದ 'ಕರ್ನಾಟಕ ಮೈಕ್ರೊ ಫೈನಾನ್ಸ್ (ಬಲವಂತದ ಕ್ರಮಗಳ ತಡೆ) ಸುಗ್ರೀವಾಜ್ಞೆ–2025' ಅನ್ನು ಅಂಕಿತಕ್ಕಾಗಿ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರಿಗೆ ಕಳುಹಿಸಲಾಗಿದೆ ಎಂದು ಕಾನೂನು ಮತ್ತು ಸಂಸದೀಯ ಇಲಾಖೆಯ ಕಾರ್ಯದರ್ಶಿ ಜಿ.ಶ್ರೀಧರ್ ತಿಳಿಸಿದ್ದಾರೆ.


ಗೆಹ್ಲೋಟ್

10 ವರ್ಷ ಜೈಲು: ಸಾಲಗಾರರಿಗೆ ಹಿಂಸೆ, ಕಿರುಕುಳ ನೀಡುವ ಮೈಕ್ರೊ ಫೈನಾನ್ಸ್ ಕಂಪನಿಗಳು ಅಥವಾ ಲೇವಾದೇವಿದಾರರಿಗೆ ಆರು ತಿಂಗಳುಗಳಿಗಿಂತ ಕಡಿಮೆ ಇಲ್ಲದ, 10 ವರ್ಷದವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು 5 ಲಕ್ಷದವರೆಗೆ ವಿಸ್ತರಿಸಬಹುದಾದ ದಂಡ ವಿಧಿಸಲು ಸುಗ್ರೀವಾಜ್ಞೆಯಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದು ಅವರು ತಿಳಿಸಿದರು.

ಸುಗ್ರೀವಾಜ್ಞೆಯ ಕರಡಿನಲ್ಲಿ 3 ವರ್ಷ ಜೈಲು ಶಿಕ್ಷೆ ಎಂದು ಉಲ್ಲೇಖಿಸಲಾಗಿತ್ತು. ಆದರೆ, ಕಾನೂನು ಇನ್ನಷ್ಟು ಬಿಗಿಗೊಳಿಸುವ ಉದ್ದೇಶದಿಂದ ಜೈಲು ಶಿಕ್ಷೆಯ ಪ್ರಮಾಣವನ್ನು 10 ವರ್ಷದವರೆಗೆ ವಿಸ್ತರಿಸಲು ಅವಕಾಶ ಕಲ್ಪಿಸಲಾಗಿದೆ. ಮೈಕ್ರೊ ಫೈನಾನ್ಸ್ ಕಂಪನಿಗಳು ಮತ್ತು ಲೇವಾದೇವಿದಾರರ ನೋಂದಣಿ ಕಡ್ಡಾಯ ಸೇರಿದಂತೆ ಇತರ ಎಲ್ಲ ಅಂಶಗಳು ಸುಗ್ರೀವಾಜ್ಞೆಯಲ್ಲಿದೆ ಎಂದೂ ಅವರು ವಿವರಿಸಿದರು.

ಕಿರುಕುಳ ಕೊಡುವವರಿಗೆ ಶಿಕ್ಷೆ ಪ್ರಮಾಣ ಹೆಚ್ಚಳ

ಬೆಂಗಳೂರು, ಫೆ.4– ಮೈಕ್ರೋ ಫೈನಾನ್ಸ್ ಹೆಸರಿನಲ್ಲಿ ಕಿರುಕುಳ ಕೊಡುವವರಿಗೆ ಕಾನೂನಿನ ಬಿಸಿ ಮುಟ್ಟಿಸಲು ಶಿಕ್ಷೆ ಪ್ರಮಾಣವನ್ನು ಹೆಚ್ಚಿಸಿದ್ದೇವೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ತಿಳಿಸಿದರು.

ನಗರದಲ್ಲಿ ಮಾತನಾಡಿದ ಅವರು, ಈ ಮೊದಲು ಬಿಲ್‌ನಲ್ಲಿ 3 ವರ್ಷ ಶಿಕ್ಷೆ ಇತ್ತು. ಈಗ ಅದನ್ನ 10 ವರ್ಷಕ್ಕೆ ಹೆಚ್ಚಳ ಮಾಡಿದ್ದೇವೆ. ದಂಡ ಕೂಡಾ 5 ಲಕ್ಷ ರೂ. ಮಾಡಿದ್ದೇವೆ. ಕಿರುಕುಳ ಕೊಡುವವರಿಗೆ ಕಾನೂನಿನ ಬಿಸಿ ತಟ್ಟಬೇಕು. ಕಾಟಾಚಾರಕ್ಕೆ ಕಾನೂನು ಮಾಡಿದರೆ ಇಂತಹ ಕಿರುಕುಳ ಪ್ರಕರಣ ನಿಲ್ಲೋದಿಲ್ಲ. ಇದಕ್ಕಾಗಿ ದಂಡ ಮತ್ತು ಶಿಕ್ಷೆ ಜಾಸ್ತಿ ಮಾಡಿದ್ದೇವೆ. ಇಂತಹ ಕಠಿಣ ಕಾನೂನಿಂದ ಮಾತ್ರ ಕಿರುಕುಳ ನಿಲ್ಲುತ್ತದೆ. ಆ ಉದ್ದೇಶದಿಂದ ಶಿಕ್ಷೆ ಪ್ರಮಾಣ ಜಾಸ್ತಿ ಮಾಡಿದ್ದೇವೆ ಎಂದು ತಿಳಿಸಿದರು.

ರಾಜ್ಯಪಾಲರಿಗೆ ಬಿಲ್ ಕಳಿಸಿದ್ದೇವೆ. ಇವತ್ತು ಆಗುತ್ತಾ ಗೊತ್ತಿಲ್ಲ. ರಾಜ್ಯಪಾಲರು ಊರಿಗೆ ಹೋಗಿದ್ದಾರೆ ಎನ್ನುತ್ತಿದ್ದಾರೆ. ಅವರು ಬಂದು ನೋಡಿ ಸಹಿ ಆದ ಕೂಡಲೇ ಸುಗ್ರಿವಾಜ್ಞೆ ಜಾರಿ ಆಗಲಿದೆ ಎಂದರು.


ಪರಮೇಶ್ವರ್

ಬಿಲ್ ವಿರುದ್ಧ ಮೈಕ್ರೋ ಫೈನಾನ್ಸ್ ಕಂಪನಿಗಳು ಕೋರ್ಟ್‌ಗೆ ಹೋಗಬಹುದು ಎಂದು ಕೊಂಡು ಬಿಲ್ ಸಿದ್ಧ ಮಾಡುವುದು ತಡವಾಗಿದೆ. ಮೊದಲ ಕರಡು ಸಿದ್ಧ ಮಾಡಿದಾಗ ಫೈನಾನ್ಸ್ ಕಂಪನಿಗಳು ಕೋರ್ಟ್‌ಗೆ ಹೋಗಬಹುದು ಎಂದು ಚರ್ಚಿಸಿದ್ದೆವು. ಹೀಗಾಗಿ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕು ಎಂದು ಸಿಎಂ ಕಾನೂನು ಇಲಾಖೆಗೆ ಸೂಚನೆ ಕೊಟ್ಟಿದ್ದರು. ಇದಕ್ಕೆ ಎರಡು ದಿನ ತಡವಾಗಿದೆ. ಈಗ ಎಲ್ಲವನ್ನು ಗಮನದಲ್ಲಿಟ್ಟುಕೊಂಡು ಕರಡು ಸಿದ್ಧ ಮಾಡಿದ್ದೇವೆ. ಕೋರ್ಟ್‌ಗೆ ಹೋದರೂ ಸರ್ಕಾರಕ್ಕೆ ಹಿನ್ನಡೆ ಆಗುವುದಿಲ್ಲ ಎಂದು ನಾವು ಅಂದುಕೊಂಡಿದ್ದೇವೆ ಎಂದು ಹೇಳಿದರು.

ಕಸಾಯಿಖಾನೆಗೆ ಸಾಗಿಸುತ್ತಿದ್ದ 42 ಕರುಗಳ ರಕ್ಷಣೆ; ವಾಹನ, ಚಾಲಕ ಪೊಲೀಸ್ ವಶಕ್ಕೆ

ಮೈಸೂರು, ಫೆ4(ಎಸ್‌ಬಿಡಿ)– ಮೈಸೂರಿನ ಕಸಾಯಿಖಾನೆಗೆ ಸಾಗಿಸುತ್ತಿದ್ದ 42 ಕರುಗಳನ್ನು ಮೈಸೂರಿನ ಇಲವಾಲ ಪೊಲೀಸರು ರಕ್ಷಿಸಿ, ವಾಹನ ಹಾಗೂ ಅದರ ಚಾಲಕನನ್ನು ವಶಕ್ಕೆ ಪಡೆದಿದ್ದಾರೆ.

ಹುಣಸೂರು ಕಡೆಯಿಂದ ಮೈಸೂರು ಕಡೆಗೆ ಜಾನುವಾರುಗಳನ್ನು ಸಾಗಿಸುತ್ತಿರುವ ಬಗ್ಗೆ ನಿನ್ನೆ ಸಂಜೆ ಖಚಿತ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಇಲವಾಲ ಠಾಣೆ ಸಬ್‌ಇನ್ಸ್‌ಪೆಕ್ಟರ್ ಬಿ.ಕೆ.ಮಹೇಶ್ ಕುಮಾರ್, ಸಿಬ್ಬಂದಿ ಮಹೇಶ್ ಹಾಗೂ ಹರೀಶ್ ಅವರೊಂದಿಗೆ ಇಲವಾಲದ ಆರ್‌ಎಂಪಿ ಬಳಿ ವಾಹನ ತಪಾಸಣೆ ನಡೆಸುತ್ತಿದ್ದಾಗ ಐಷರ್ ಗೂಡ್ಸ್ ವಾಹನ(ಕೆಎ–17, ಡಿ–0950)ದಲ್ಲಿ ಜಾನುವಾರುಗಳು ಪತ್ತೆಯಾಗಿವೆ.

ಕೂಡಲೇ ಚಾಲಕ ಸರ್ವರ್‌ನನ್ನು ವಶಕ್ಕೆ ಪಡೆದು ವಾಹನವನ್ನು ಠಾಣೆ ಆವರಣದಲ್ಲಿ ಪರಿಶೀಲಿಸಿದಾಗ 41 ಹಸುವಿನ ಕರುಗಳು ಹಾಗೂ ಒಂದು ಎಮ್ಮೆ ಕರು ಪತ್ತೆಯಾಗಿವೆ. ಈ ಬಗ್ಗೆ ಚಾಲಕನನ್ನು ವಿಚಾರಣೆಗೆ ಒಳಪಡಿಸಿದಾಗ ಹುಣಸೂರು ರತ್ನಪುರಿಯ ಶಾಬಾಜ್, ಅಲ್ತಾಪ್, ಅಪ್ಸರ್, ಖಾಶಿಫ್ ಹಾಗೂ ಸುಹೇಲ್ ಸಂತೆಯಲ್ಲಿ ಜಾನುವಾರು ಖರೀದಿಸಿ, ಮೈಸೂರಿನ ಕಸಾಯಿಖಾನೆಗೆ ಸಾಗಿಸಲು ತಿಳಿಸಿರುವುದಾಗಿ ಹೇಳಿದ್ದಾನೆ. ಈ ಸಂಬಂಧ ಚಾಲಕ ಸೇರಿ 6 ಜನರ ವಿರುದ್ಧ ಇಲವಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾವೇರಿ ನದಿಗೆ ಹೊಸ ಅಣೆಕಟ್ಟು ನಿರ್ಮಾಣಕ್ಕೆ ಒಪ್ಪಿಗೆ ನೀಡಿಲ್ಲ: ಕೇಂದ್ರ ಸ್ಪಷ್ಟನೆ

ನವದೆಹಲಿ, ಫೆ.4– ಕಾವೇರಿ ನದಿಗೆ ಹೊಸ ಅಣೆಕಟ್ಟು ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿಲ್ಲ ಎಂದು ಕೇಂದ್ರ ಜಲಶಕ್ತಿ ಸಚಿವಾಲಯ ಸ್ಪಷ್ಟಪಡಿಸಿದೆ.

ರಾಜ್ಯಸಭೆಯಲ್ಲಿ ಸದಸ್ಯ ಎಸ್.ಕಲ್ಯಾಣ ಸುಂದರಂ ಕೇಳಿದ ಪ್ರಶ್ನೆಗೆ ಜಲಶಕ್ತಿ ಖಾತೆಯ ರಾಜ್ಯ ಸಚಿವ ರಾಜ್ ಭೂಷಣ್ ಚೌದರಿ ಈ ಉತ್ತರ ನೀಡಿದ್ದಾರೆ. ಬೆಂಗಳೂರಿಗೆ ಕುಡಿಯುವ ನೀರು ಪೂರೈಕೆಗೆ ಮೇಕೆದಾಟು ಯೋಜನೆಗೆ ಅನುಮತಿ ನೀಡುವಂತೆ ರಾಜ್ಯ ಸರ್ಕಾರ ಐದು ವರ್ಷಗಳ ಹಿಂದೆಯೇ ಪ್ರಸ್ತಾಪ ಸಲ್ಲಿಸಿದೆ.

ಕಾವೇರಿ ಕಣಿವೆಯ ಹೆಚ್ಚುವರಿ ನೀರು ಬಳಕೆಗೆ ತಮಿಳುನಾಡು ಸರ್ಕಾರ ಕಾವೇರಿ–ವೆಲ್ಲಾರ್–ಗುಂಡಾರ್ ನದಿ ಜೋಡಣೆ ಯೋಜನೆ ಕೈಗೆತ್ತಿಕೊಂಡಿದೆ. ಇದಕ್ಕೂ ಕೇಂದ್ರ ಒಪ್ಪಿಗೆ ನೀಡಿಲ್ಲ.

ಕುಂಭಮೇಳ: ಮತ್ತೊಬ್ಬ ಕನ್ನಡಿಗನ ಸಾವು

ಕೊಪ್ಪಳ, ಫೆ4– ಪ್ರಯಾಗ್‌ರಾಜ್‌ನ ಸಂಗಮ್ ಘಾಟ್‌ನಲ್ಲಿ ಆಯೋಜಿಸಲಾಗಿದ್ದ ಅತಿದೊಡ್ಡ ಧಾರ್ಮಿಕ ಸಭೆಯಾದ ಮಹಾಕುಂಭದ ಮೌನಿ ಅಮವಾಸ್ಯೆಯಂದು ಸಂಭವಿಸಿದ ಕಾಲ್ತುಳಿತದಲ್ಲಿ ಕರ್ನಾಟಕದ ನಾಲ್ವರು ಸೇರಿದಂತೆ ಒಟ್ಟು 30 ಜನರು ಸಾವನ್ನಪ್ಪಿದ್ದ ಘಟನೆ ಇಡೀ ದೇಶವನ್ನೇ ಬೆಚ್ಚಿ ಬೀಳಿಸಿತ್ತು. ಈ ನಡುವೆ 15 ದಿನದ ಹಿಂದೆ ಪ್ರಯಾಗ್‌ರಾಜ್‌ಗೆ ತೆರಳಿದ್ದ ಕೊಪ್ಪಳದ ಯುವಕನೋರ್ವ ಸಾವನ್ನಪ್ಪಿರುವುದಾಗಿ ಮಾಹಿತಿ ಬಂದಿದೆ.

27 ವರ್ಷದ ಯುವಕ ಸಾವು: ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳದಲ್ಲಿ ಭಾಗಿಯಾಗಲು ಕೊಪ್ಪಳದಿಂದ ಹೋಗಿದ್ದ ಕಾರಟಗಿ ತಾಲೂಕಿನ ಸಿದ್ದಾಪುರದ 27 ವರ್ಷದ ಯುವಕ ಪ್ರವೀಣ್ ಹೊಸಮನಿ ಮೃತಪಟ್ಟಿದ್ದಾನೆ ಎಂದು ಮಾಹಿತಿ ಬಂದಿದೆ.

ಅಮೆರಿಕಾದ ಬರಾಕ್ ಒಬಾಮಾಗೆ ಹನುಮನೇ ಸ್ಫೂರ್ತಿ

ಒಬಾಮ ಹೇಳಿಕೆ ನಂತರ ಜಗತ್ತಿಗೆ 'ಹನುಮ' ಮಹಾಮಹಿಮನಾದ: ಮಾಜಿ ಸಚಿವ ಎಸ್.ಎ.ರಾಮದಾಸ್ ವಿವರಣೆ

ಮೈಸೂರು, ಫೆ.4(ಎಸ್‌ಪಿಎನ್)– ಅಮೆರಿಕಾದ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಅವರು ತಮ್ಮ ಚುನಾವಣಾ ಸಂದರ್ಭದಲ್ಲಿ ನನ್ನ ಗೆಲುವಿಗೆ ಹನುಮನೇ ಸ್ಫೂರ್ತಿಯಾಗಿದ್ದ ಎಂದು ನೆನೆದ ಪರಿಣಾಮ ಇಂದು ಜಗತ್ತಿಗೆ ಶ್ರೀ ಹನುಮ ದೇವರ ಮಹಿಮೆ ಪರಿಚಯವಾಗಿದೆ ಎಂದು ಮಾಜಿ ಸಚಿವ ಎಸ್.ಎ.ರಾಮದಾಸ್ ಅಭಿಪ್ರಾಯಪಟ್ಟರು.

ಮೈಸೂರು ಪೋರ್ಟ್ ಮೊಹಲ್ಲಾದ ಶೃಂಗೇರಿ ಶಂಕರಮಠ ಮೈಸೂರು ಶಾಖೆ ಆವರಣದಲ್ಲಿ ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲೂಕು ಪೋ–ಗೇರಸೊಪ್ಪ ಗ್ರಾಮದ ಬಂಗಾರಮಕ್ಕಿ ಶ್ರೀಕ್ಷೇತ್ರದಲ್ಲಿ ಶ್ರೀ ವೀರಾಂಜನೇಯ ಧಾರ್ಮಿಕ ಹಾಗೂ ದತ್ತಿ ಸಂಸ್ಥೆ ವತಿಯಿಂದ ಹಮ್ಮಿಕೊಂಡಿರುವ ಶ್ರೀವೀರಾಂಜನೇಯ ಸ್ವಾಮಿ ಪ್ರತಿಷ್ಠಾ ಹಾಗೂ ಜಾತ್ರಾ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ 'ಸಂಸ್ಕೃತಿ ಕುಂಭ – ಮಲೆನಾಡ ಉತ್ಸವ– 2025 ಹಾಗೂ ಶ್ರೀ ಅವಧೂತ ರಾಮಾನಂದ ಗುರೂಜಿಯವರ ಪೀಠಾರೋಹಣದ ರಜತ ಮಹೋತ್ಸವಕ್ಕೆ ಭಕ್ತರ ಆಹ್ವಾನಿಸುವ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕಳೆದ 10 ವರ್ಷಗಳ ಹಿಂದೆ ಅಮೆರಿಕಾ ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ ನನಗೆ ಹನುಮ ದೇವರು ಸ್ಫೂರ್ತಿಯಾಗಿದ್ದ ಸನ್ನಿವೇಶವನ್ನು ಬರಾಕ್ ಒಬಾಮರು ಟಿ.ವಿ.ಸಂದರ್ಶನವೊಂದರಲ್ಲಿ ವಿವರಿಸಿದ್ದರು. ಶ್ರೀ ಹನುಮ ದೇವರ ಕುರಿತು ಟಿ.ವಿ. ನಿರೂಪಕರು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಹನುಮ ವಿಗ್ರಹವನ್ನು ತಮ್ಮ ಕೈಯಲ್ಲಿ ಹಿಡಿದು ವಿವರಿಸಿದ್ದು ಅಚ್ಚರಿಗೆ ಕಾರಣವಾಗಿತ್ತು. ಹಾಗಾಗಿ ಪ್ರತಿಯೊಬ್ಬರು ಶ್ರೀರಾಮ ಮತ್ತು ಸೀತಾಮಾತೆ, ಹನುಮನ ನಾಮಜಪ ಮಾಡಿದರೆ ಮನುಷ್ಯ ಜನ್ಮ ಸಾರ್ಥಕವಾಗುತ್ತದೆ. ಅಲ್ಲದೆ, ರಾಮಾಯಣ ಮತ್ತು ಮಹಾಭಾರತದಲ್ಲಿ ಬರುವ ಅನೇಕ ಸಂಗತಿಗಳು ಇಂದಿಗೂ ನಿಜವಾಗಿವೆ ಎಂದರು.


'ಸಂಸ್ಕೃತಿ ಕುಂಭ – ಮಲೆನಾಡ ಉತ್ಸವ– 2025ಕ್ಕೆ ಮೈಸೂರಿನ ಭಕ್ತವೃಂದವನ್ನು ಆಹ್ವಾನಿಸುವ ಸಭೆಯಲ್ಲಿ ಶ್ರೀ ಮಾರುತಿ ಗುರೂಜಿ, ಮಾಜಿ ಸಚಿವ ಎಸ್.ಎ.ರಾಮದಾಸ್ ಸೇರಿದಂತೆ ಇತರರಿದ್ದರು.

ಭಾರತೀಯ ಪರಂಪರೆ, ಸಂಸ್ಕೃತಿಗಳಲ್ಲಿ ಶ್ರೀರಾಮ–ಸೀತಾಮಾತೆ ಹಾಗೂ ಆಂಜನೇಯ ಸ್ವಾಮಿ ಚರಿತ್ರೆ ಸಮುದಾಯದಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತವೆ. ಅಂತೆಯೇ ವಿವಿಧ ಧಾರ್ಮಿಕ ಮುಖಂಡರ ನೇತೃತ್ವದಲ್ಲಿ ನಡೆಯುವ ವಿವಿಧ ಧಾರ್ಮಿಕ ಕೈಂಕರ್ಯಗಳನ್ನು ಹಮ್ಮಿಕೊಂಡಿದ್ದಾರೆ. ಇದು ಸಮಾಜದ ಸ್ವಾಸ್ಥ್ಯ ಕಾಪಾಡಲು ಸಹಕಾರಿಯಾಗುತ್ತದೆ ಎಂದರು.

ಭಕ್ತಿಗೀತೆಗಳ ಸ್ಪರ್ಧೆ: ಈ ವೇಳೆ 12ಕ್ಕೂ ಹೆಚ್ಚು ಭಜನಾ ಮಂಡಳಿಗಳಾದ ಸ್ಕಂದ ಭಜನಾ ಮಂಡಳಿಯ ಸುಧಾಮಣಿ ನೇತೃತ್ವದ ತಂಡ, ಶ್ರೀ ಲಕ್ಷ್ಮೀಕಾಂತ ಭಜನಾ ಮಂಡಳಿ ತಂಡ, ನಿಂಬುಜಾದೇವಿ ಭಜನಾ ಮಂಡಳಿಯ ತಂಡ, ಗುರು ವಿಠ್ಠಲ ಭಜನಾ ಮಂಡಳಿಯ ನಳಿನಿ ಪ್ರೇಮ್ ಕುಮಾರ್ ನೇತೃತ್ವದ ತಂಡ, ಶ್ರೀ ಪ್ರಸನ್ನ ವಿಠ್ಠಲ ಭಜನಾ ಮಂಡಳಿಯ ಮಾಲತಿ, ಸ್ವರಾಂಜಲಿ ಭಜನಾ ಮಂಡಳಿಯ ವನಜಾಕ್ಷಿ ನೇತೃತ್ವದ ತಂಡ, ಅಮೃತ ಭಜನಾ ಮಂಡಳಿಯ ಕಾತ್ಯಾಯಿನಿ ಮತ್ತು ತಂಡ, ಮೂಕಾಂಬಿಕಾ ಭಜನಾ ಮಂಡಳಿಯ ರಚನಾ ಮತ್ತು ತಂಡ, ಚಾಮುಂಡೇಶ್ವರಿ ಭಜನಾ ಮಂಡಳಿಯ ರಚನಾ, ಚಾಮುಂಡೇಶ್ವರಿ ಭಜನಾ ಮಂಡಳಿ(ನಂಜನಗೂಡು), ವೇದವ್ಯಾಸ ಭಜನಾ ಮಂಡಳಿ, ಶ್ರೀ ನಿಧಿ ಭಜನಾ ಮಂಡಳಿ, ಹರಿಸ್ಮರಣೆ ಭಜನಾ ಮಂಡಳಿ, ಚಾಮುಂಡೇಶ್ವರಿ ಭಜನಾ ಮಂಡಳಿ (ರಾಮಕೃಷ್ಣನಗರ), ಸ್ವರ ಸಂಗಮ ಭಜನಾಮಂಡಳಿ, ಸೀತಾರಾಮ ಭಜನಾ ಮಂಡಳಿ, ಭುವನೇಶ್ವರಿ ಭಜನಾ ಮಂಡಳಿ, ಪ್ರಸನ್ನ ಗಣಪತಿ ಭಜನಾ ಮಂಡಳಿ ಸದಸ್ಯರು ಗಾಯನ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು.

ಈ ವೇಳೆ ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಬಿ.ವಿ.ಮಂಜುನಾಥ್, ಶೃಂಗೇರಿ ಶಂಕರಮಠ ಮೈಸೂರು ಶಾಖೆಯ ಧರ್ಮದರ್ಶಿ ರಾಮಚಂದ್ರ, ವಿಪ್ರ ಮುಖಂಡರಾದ ಭಾಸ್ಕರ್, ಜಿ.ಆರ್.ನಾಗರಾಜು, ವಿಕ್ರಂ ಅಯ್ಯಂಗಾರ್, ಮನು, ದಿಲೀಪ, ಪುನೀತ್ ಕುಡ್ಲೂರು ಸೇರಿದಂತೆ ಇತರೆ ಮುಖಂಡರಿದ್ದರು.

ರಾಹುಲ್ ದ್ರಾವಿಡ್ ಕಾರಿಗೆ ಗೂಡ್ಸ್ ಆಟೋ ಡಿಕ್ಕಿ



ಬೆಂಗಳೂರು, ಫೆ. 4: ಬೆಂಗಳೂರು ಟ್ರಾಫಿಕ್ ನಡುವೆ ವಾಹನಗಳು ಸಣ್ಣ ಪ್ರಮಾಣದಲ್ಲಿ ಡಿಕ್ಕಿಯಾಗುವುದು, ಜಗಳ, ವಾಗ್ವಾದ ಸಾಮಾನ್ಯವಾಗುತ್ತಿದೆ. ಇದಕ್ಕೆ ದಿಗ್ಗಜ ಕ್ರಿಕೆಟಿಗ ರಾಹುಲ್ ದ್ರಾವಿಡ್ ಕೂಡ ಹೊರತಾಗಿಲ್ಲ. ಬೆಂಗಳೂರಿನ ಟ್ರಾಫಿಕ್‌ನಲ್ಲಿ ನಿಂತಿದ್ದ ವೇಳೆ ರಾಹುಲ್ ದ್ರಾವಿಡ್ ಕಾರಿಗೆ ಗೂಡ್ಸ್ ಆಟೋ ಡಿಕ್ಕಿಯಾಗಿದೆ. ಇದರ ಪರಿಣಾಮ ಕಾರಿನಿಂದ ಇಳಿದು ಬಂದ ರಾಹುಲ್ ದ್ರಾವಿಡ್ ಆಟೋ ಚಾಲಕನ ವರ್ತನೆ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಆದರೆ ಗೂಡ್ಸ್ ಆಟೋ ಚಾಲಕ ವಾಗ್ವಾದಕ್ಕೆ ಇಳಿದ ಘಟನೆ ಬೆಂಗಳೂರಿನ ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿ ನಡೆದಿದೆ.

ಕೆಲಸದ ಮುಗಿಸಿ ಕನ್ನಿಂಗ್‌ಹ್ಯಾಮ್ ರಸ್ತೆ ಮೂಲಕ ರಾಹುಲ್ ದ್ರಾವಿಡ್ ತಮ್ಮ ಕಾರಿನಲ್ಲಿ ಹೋಗುತ್ತಿದ್ದರು. ಟ್ರಾಫಿಕ್ ಸಿಗ್ನಲ್‌ನಲ್ಲಿ ರಾಹುಲ್ ದ್ರಾವಿಡ್ ಸೇರಿದಂತೆ ಹಲವು ವಾಹನಗಳು ನಿಂತಿದ್ದವು. ಆದರೆ ಗೂಡ್ಸ್ ಆಟೋ ಚಾಲಕ ನಿಂತಿದ್ದ ರಾಹುಲ್ ದ್ರಾವಿಡ್ ಕಾರಿಗೆ ಗುದ್ದಿದ್ದಾನೆ. ಇದರಿಂದ ರಾಹುಲ್ ದ್ರಾವಿಡ್ ಕಾರಿನ ಲೈಟ್ ಪುಡಿಯಾಗಿದೆ. ಹಾಗೂ ಇತರ ಭಾಗಗಳಿಗೆ ಸ್ಕ್ರಾಚ್ ಬಿದ್ದಿದೆ. ಗೂಡ್ಸ್ ಆಟೋ ಕಾರಿಗೆ ಡಿಕ್ಕಿಯಾಗುತ್ತಿದ್ದಂತೆ ರಾಹುಲ್ ದ್ರಾವಿಡ್ ಕಾರಿನಿಂದ ಇಳಿದಿದ್ದಾರೆ. ಗೂಡ್ಸ್ ಆಟೋ ಚಾಲಕನ ನಡೆಯನ್ನು ಪ್ರಶ್ನಿಸಿದ್ದಾರೆ. ನಿಲ್ಲಿಸಿದ್ದ ಕಾರಿಗೆ ಬಂದು ಗುದ್ದಿದ್ದೀರಿ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಆದರೆ ಗೂಡ್ಸ್ ಆಟೋ ಚಾಲಕ ವಾಗ್ವಾದಕ್ಕೆ ಇಳಿದಿದ್ದಾರೆ. ರಾಹುಲ್ ದ್ರಾವಿಡ್ ವಿರುದ್ಧ ತನ್ನದೇನು ತಪ್ಪಿಲ್ಲ ಎಂದು ಗೂಡ್ಸ್ ಆಟೋ ಚಾಲಕ ವಾದಿಸಲು ಮುಂದಾಗಿದ್ದಾರೆ. ಆದರೆ ದ್ರಾವಿಡ್ ಮಾತುಗಳನ್ನು ಕೇಳಿಸಿಕೊಳ್ಳದ ಆಟೋ ಚಾಲಕ ರಸ್ತೆಯಲ್ಲಿ ಭಾರಿ ವಾಗ್ವಾದಕ್ಕೆ ಇಳಿದಿದ್ದಾರೆ.

ಆಟೋ ಡ್ರೈವರ್ ವಾಗ್ವಾದ

ಗೂಡ್ಸ್ ಆಟೋ ಚಾಲಕನ ಬಳಿ ಮಾತನಾಡಿ ಪ್ರಯೋಜನವಿಲ್ಲ ಎಂದು ಅರಿತ ರಾಹುಲ್ ದ್ರಾವಿಡ್ ತೆರಳಿದ್ದಾರೆ. ಈ ಕುರಿತು ಯಾವುದೇ ದೂರು ದಾಖಲಾಗಿಲ್ಲ. ಘಟನೆಯಲ್ಲಿ ಯಾರಿಗೂ ಯಾವುದೇ ಹಾನಿಯಾಗಿಲ್ಲ. ಆದರೆ ರಾಹುಲ್ ದ್ರಾವಿಡ್ ಜೊತೆ ಆಟೋ ಚಾಲಕ ವಾಗ್ವಾದ ನಡೆಸುತ್ತಿರುವ ದೃಶ್ಯ ಇದೀಗ ಸೋಶಿಯಲ್ ಮೀಡಿಯಾದಲ್ಲಿ ಭಾರಿ ಸದ್ದು ಮಾಡುತ್ತಿದೆ.

ಪಿಹೆಚ್.ಡಿ ಪದವಿ



ಮೈಸೂರು, ಫೆ4– ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಪ್ರಾಧ್ಯಾಪಕರಾದ ಪ್ರೊ.ಎನ್.ಉಷಾರಾಣಿ ಅವರ ಮಾರ್ಗದರ್ಶನದಲ್ಲಿ ಪತ್ರಕರ್ತ ನಾಗರಾಜು ಸಾದರಪಡಿಸಿದ 'ರಂಗಭೂಮಿ, ಮಾಧ್ಯಮ ಮತ್ತು ಸಮಾಜ: ರಂಗಾಯಣದ ಬಹುರೂಪಿ ಮತ್ತು ನೀನಾಸಂ ನಾಟಕಗಳ ವಿಮರ್ಶಾತ್ಮಕ ಅಧ್ಯಯನ' ಮಹಾಪ್ರಬಂಧವನ್ನು ಮೈಸೂರು ವಿವಿಯು ಪಿಎಚ್.ಡಿ ಪದವಿಗೆ ಅಂಗೀಕರಿಸಿದ್ದು, ಇತ್ತೀಚಿಗೆ ನಡೆದ ವಿವಿಯ 105ನೇ ಘಟಿಕೋತ್ಸವದಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಸುಧಾಕರ್ ಪಿಎಚ್.ಡಿ ಪ್ರಮಾಣ ಪತ್ರವನ್ನು ಪ್ರದಾನ ಮಾಡಿದರು.

ವಿಜಯ ವಿಠಲ ಶಾಲೆಯಲ್ಲಿ ವಿದ್ಯಾರ್ಥಿಗಳ ಸೂರ್ಯ ನಮಸ್ಕಾರ


ಮೈಸೂರಿನ ವಿಜಯ ವಿಠಲ ವಿದ್ಯಾಶಾಲೆ ಆವರಣದಲ್ಲಿ ರಥಸಪ್ತಮಿ ಅಂಗವಾಗಿ ವಿದ್ಯಾರ್ಥಿಗಳು ಸೂರ್ಯ ನಮಸ್ಕಾರ ಮಾಡಿದರು.

ಮೈಸೂರು, ಫೆ.4(ಎಸ್‌ಬಿಡಿ)– ರಥಸಪ್ತಮಿ ಅಂಗವಾಗಿ ಮೈಸೂರಿನ ವಿಜಯ ವಿಠಲ ವಿದ್ಯಾಶಾಲೆಯಲ್ಲಿ ಸೂರ್ಯ ನಮಸ್ಕಾರ ನೆರವೇರಿಸಲಾಯಿತು.

ಶಾಲೆಯ ವಿದ್ಯಾರ್ಥಿಗಳು ಹಬ್ಬದ ಸಡಗರದೊಂದಿಗೆ ಶ್ರದ್ಧಾಭಕ್ತಿಯೊಂದಿಗೆ ದಿನ ಬೆಳಗೋ ಸೂರ್ಯನಿಗೆ ನಮಸ್ಕಾರ ಸಮರ್ಪಿಸಿದರು. ಈ ವೇಳೆ ರಥಸಪ್ತಮಿಯ ಪೌರಾಣಿಕ ಹಿನ್ನೆಲೆ, ಸೂರ್ಯ ನಮಸ್ಕಾರದಿಂದ ಆಗುವಂತಹ ಮಾನಸಿಕ ಹಾಗೂ ದೈಹಿಕ ಪ್ರಯೋಜನಗಳು, ಯೋಗ, ಆರೋಗ್ಯ ಹಾಗೂ ಸಂಸ್ಕೃತಿಯ ಮಹತ್ವದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿಕೊಡಲಾಯಿತು.

ಈ ರಥಸಪ್ತಮಿ ದಿನ ಸೂರ್ಯ ನಮಸ್ಕಾರ ಮಾಡುವುದರಿಂದ ಸಕಾರಾತ್ಮಕ ಪರಿಣಾಮ ಉಂಟಾಗಿ, ನವಚೈತನ್ಯ ಮೂಡುತ್ತದೆ. ನಿತ್ಯ ಬೆಳಕು ನೀಡಿ, ಇಡೀ ನಿಸರ್ಗಕ್ಕೆ ಜೀವಕಳೆ ತುಂಬುವ ದಿನಕರನಿಗೆ ಭಕ್ತಿಯಿಂದ ನಮಿಸಿದ ಸಮಾಧಾನವೂ ಪ್ರಾಪ್ತವಾಗುತ್ತದೆ. ಆದ್ದರಿಂದ ಸೂರ್ಯ ನಮಸ್ಕಾರ ಮಾಡುವುದನ್ನು ನಿತ್ಯ ರೂಢಿಸಿಕೊಳ್ಳಬೇಕೆಂದು ಶಿಕ್ಷಕರು ತಿಳಿಹೇಳಿದರು.

ಪ್ರಗತಿಯಲ್ಲಿದೆ ಮೈಸೂರು ಪಾಲಿಕೆ ಪ್ರಧಾನ ಕಚೇರಿಯ ಪಾರಂಪರಿಕ ಕಟ್ಟಡದ ತಾರಸಿ ದುರಸ್ತಿ ಕಾಮಗಾರಿ

ಮೈಸೂರು,ಫೆ.4(ಪಿಎಂ)– ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮೈಸೂರು ಮಹಾನಗರ ಪಾಲಿಕೆಯ ಪ್ರಧಾನ ಕಚೇರಿಯ ಪಾರಂಪರಿಕ ಕಟ್ಟಡದ ತಾರಸಿ ದುರಸ್ತಿ ಕಾಮಗಾರಿ ಭರದಿಂದ ಸಾಗಿದೆ.

> ಪಾಲಿಕೆ ಕೌನ್ಸಿಲ್ ಸಭಾಂಗಣದ ಪ್ಲಾಸ್ಟರ್ ಆಫ್ ಪ್ಯಾರೀಸ್ ಅಲಂಕಾರಿಕ ಮೇಲ್ಪದರ (ಫಾಲ್ಸ್ ಸೀಲಿಂಗ್) ದುರಸ್ತಿ ಕಾಮಗಾರಿಯನ್ನು ಈಗಾಗಲೇ ಪೂರ್ಣಗೊಳಿಸಲಾಗಿದೆ. ಇಡೀ ಕಟ್ಟಡದ ತಾರಸಿಯ ದುರಸ್ತಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ತಾರಸಿಯಲ್ಲಿರುವ ಮೇಲ್ಪದರವನ್ನು ಕಟ್ಟಡಕ್ಕೆ ತೊಂದರೆಯಾಗದಂತೆ ತೆಗೆದು ಪಾರಂಪರಿಕ ವಿಧಾನದಲ್ಲಿಯೇ ದುರಸ್ತಿ ಮಾಡಲಾಗುತ್ತಿದೆ. ಅಂದಾಜು ಕೋಟಿ ವೆಚ್ಚದಲ್ಲಿ ಕಾಮಗಾರಿ ನಡೆಯುತ್ತಿದೆ.
> -ಕೆ.ಜೆ.ಸಿಂಧು, ಉಪ ಆಯುಕ್ತರು (ಅಭಿವೃದ್ಧಿ), ಮೈಸೂರು ಮಹಾನಗರ ಪಾಲಿಕೆ.

ಕಳೆದ ವರ್ಷದ ಡಿಸೆಂಬರ್ ಆರಂಭದಲ್ಲಿ ನಿರಂತರವಾಗಿ ಸುರಿದ ಮಳೆಯಿಂದ ಪಾಲಿಕೆ ಪ್ರಧಾನ ಕಚೇರಿಯ ಪಾರಂಪರಿಕ ಕಟ್ಟಡದ ಮಾಳಿಗೆಯಲ್ಲಿ ಸೋರುವುದು ಕಂಡು ಬಂದಿತ್ತು ಮೊದಲ ಮಹಡಿಯ ಎಲ್ಲಾ ಕಚೇರಿಯ ತಾರಸಿಯಲ್ಲಿ ಮಳೆ ನೀರು ಸೋರಿಕೆ ಕಂಡು ಬಂದಿತ್ತು.

ಅದಾಗಲೇ ತಾರಸಿ ದುರಸ್ತಿಗೆ ಕಾರ್ಯಾದೇಶ ಪ್ರಕ್ರಿಯೆ ಪೂರ್ಣಗೊಂಡಿದ್ದರೂ ಮಳೆ ಕಾರಣಕ್ಕೆ ದುರಸ್ತಿ ಕಾಮಗಾರಿ ಆರಂಭಿಸಿರಲಿಲ್ಲ. ಇದಾದ ಕೆಲವೇ ದಿನಗಳಲ್ಲಿ ತಾರಸಿ ದುರಸ್ತಿ ಕಾಮಗಾರಿಗೆ ಚಾಲನೆ ದೊರೆತಿತ್ತು ಇದೀಗ ಕಾಮಗಾರಿ ಭರದಿಂದ ಸಾಗುತ್ತಿದೆ.

ಪಾರಂಪರಿಕ ವಿಧಾನವೇ ಬಳಕೆ: ಹಳೆಯ ಕಟ್ಟಡ ಆಗಿರುವ ಕಾರಣ ತಾರಸಿ ದುರಸ್ತಿಗೆ ಬಂದಿದೆ. ಪಾರಂಪರಿಕ ಕಟ್ಟಡವಾದ್ದರಿಂದ ಅಂದು ಬಳಸಿರುವ ಸಾಮಗ್ರಿಗಳನ್ನೇ ಬಳಸಿಕೊಂಡು ಅದೇ ನಿರ್ಮಾಣ ವಿಧಾನದಲ್ಲಿಯೇ ಕೆಲಸ ಮಾಡಬೇಕೆಂದು ಪಾರಂಪರಿಕ ಸಮಿತಿ ದುರಸ್ತಿ ಕಾಮಗಾರಿಗೆ ಅನುಮೋದನೆ ನೀಡಿತ್ತು. ಹೀಗಾಗಿ ಪಾರಂಪರಿಕ ಶೈಲಿ ಮತ್ತು ವಿಧಾನದಲ್ಲೇ ತಾರಸಿಯ ವಾಟರ್ ಪ್ರೂಫಿಂಗ್ ದುರಸ್ತಿ ಕಾಮಗಾರಿ ನಡೆಯುತ್ತಿದೆ ಎಂದು ಪಾಲಿಕೆ ಅಧಿಕಾರಿಯೊಬ್ಬರು ತಿಳಿಸಿದರು.

ಈಗಿನ ಆಧುನಿಕ ವಾಟರ್ ಪ್ರೂಫಿಂಗ್ ದುರಸ್ತಿ ಕಾಮಗಾರಿ ಆಗಿದ್ದಲ್ಲಿ ಈಗಾಗಲೇ ಪೂರ್ಣಗೊಳ್ಳುತ್ತಿತ್ತು. ಆದರೆ ಅದಕ್ಕೆ ಅವಕಾಶವಿಲ್ಲ. ಹೀಗಾಗಿ ಸುರ್ಕಿಗಾರೆ ಸೇರಿದಂತೆ ಪಾರಂಪರಿಕ ಕಟ್ಟಡಕ್ಕೆ ಬಳಕೆಯಾಗಿರುವ ಸಾಮಗ್ರಿಗಳನ್ನು ಬಳಸಿಕೊಳ್ಳಲಾಗುತ್ತಿದೆ. ಸುಮಾರು 10 ಇಂಚು ಪದರ ಇದ್ದು, ಈ ಪೈಕಿ 6 ಇಂಚು ಮೇಲ್ಪದರ ತೆರವುಗೊಳಿಸಿ ವಾಟರ್ ಪ್ರೂಫಿಂಗ್ ದುರಸ್ತಿ ಕಾಮಗಾರಿ ನಡೆಸಲಾಗುತ್ತಿದೆ ಎಂದರು.

ಮಳೆ ಕಾರಣ ಕಾರ್ಯಾದೇಶ ಇದ್ದಾಗ್ಯೂ ಡಿಸೆಂಬರ್ ಮಧ್ಯೆ ಕಾಮಗಾರಿಗೆ ಚಾಲನೆ ನೀಡಲಾಗಿತ್ತು. ಮುಂದಿನ ಮಳೆಗಾಲದ ಒಳಗೆ ಕಾಮಗಾರಿ ಮುಗಿಸಬೇಕಿದೆ. ಸದ್ಯ ಒಂದು ಭಾಗದ ತಾರಸಿಯಲ್ಲಿ ದುರಸ್ತಿ ಕಾಮಗಾರಿ ನಡೆಸುತ್ತಿದ್ದು, ಇದು ಪೂರ್ಣಗೊಳ್ಳುತ್ತಿದ್ದಂತೆ ಮತ್ತೊಂದು ಭಾಗದ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು ಎಂದು ಅವರು ತಿಳಿಸಿದರು.


ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮೈಸೂರು ಮಹಾನಗರ ಪಾಲಿಕೆಯ ಪ್ರಧಾನ ಕಚೇರಿಯ ಪಾರಂಪರಿಕ ಕಟ್ಟಡದ ತಾರಸಿ ದುರಸ್ತಿ ಕಾಮಗಾರಿ ನಡೆಯುತ್ತಿರುವುದು.

ದೆಹಲಿಯಲ್ಲಿ ರಾಜ್ಯ ಬಿಜೆಪಿಯ ಬಂಡಾಯ ಕಹಳೆ

ರಾಜ್ಯಾಧ್ಯಕ್ಷ ವಿಜಯೇಂದ್ರ ವಿರುದ್ಧ ವರಿಷ್ಠರಿಗೆ ದೂರಿನ ಸುರಿಮಳೆ ಸುರಿಸುತ್ತಿರುವ ಯತ್ನಾಳ್ ಬಣ

ಬೆಂಗಳೂರು, ಫೆ.4– ರಾಜ್ಯ ಬಿಜೆಪಿಯ ರೆಬೆಲ್ ನಾಯಕರು ನವದೆಹಲಿಯಲ್ಲಿ ಬೀಡುಬಿಟ್ಟಿದ್ದು, ಪಕ್ಷದ ವರಿಷ್ಠರನ್ನು ಸಂಪರ್ಕಿಸುವಲ್ಲಿ ಸಕ್ರಿಯರಾಗಿದ್ದಾರೆ.



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ಸಿಡಿದೆದ್ದಿರುವ ಬಸನಗೌಡ ಪಾಟೀಲ್ ಯತ್ನಾಳ್ ಬಣದ ಕುಮಾರ ಬಂಗಾರಪ್ಪ, ರಮೇಶ್ ಜಾರಕಿಹೊಳಿ, ಬಿ.ಪಿ.ಹರೀಶ್, ಜಿ.ಎಂ.ಸಿದ್ದೇಶ್ವರ, ಚಂದ್ರಪ್ಪ, ಸಂಸದ ಕೆ.ಸುಧಾಕರ್ ಮತ್ತಿತರರು ದೆಹಲಿಗೆ ತೆರಳಿದ್ದು, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಭೇಟಿಯಾಗಿದ್ದಾರೆ. ಈ ವೇಳೆ ರಾಜ್ಯಾಧ್ಯಕ್ಷ ಸ್ಥಾನದಿಂದ ಬಿ.ವೈ.ವಿಜಯೇಂದ್ರ ಅವರನ್ನು ವಜಾಗೊಳಿಸಿ, ಚುನಾವಣೆ ಮೂಲಕ ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡಲು ಬೇಡಿಕೆಯಿಟ್ಟಿದ್ದಾರೆ ಎನ್ನಲಾಗಿದೆ. ಕೇಂದ್ರ ಗೃಹ ಸಚಿವ ಅಮಿತ್ ಷಾ ಭೇಟಿಗೂ ಪ್ರಯತ್ನಿಸಿದ್ದಾರೆ ಎನ್ನಲಾಗಿದೆ.

ಕರ್ನಾಟಕ ಬಿಜೆಪಿಯ ಆಂತರಿಕ ಕಿತ್ತಾಟ ಪಕ್ಷಕ್ಕೆ ದುಬಾರಿಯಾಗಿ ಪರಿಣಮಿಸಿದ್ದು, ದೆಹಲಿ ನಾಯಕರಿಗೂ ತಲೆನೋವಾಗಿ ಪರಿಣಮಿಸಿದೆ. ದೆಹಲಿ ದಂಡಯಾತ್ರೆಯಲ್ಲಿರುವ ಅಸಮಾಧಾನಿತರ ಮನವೊಲಿಸುವ ಕೊನೇ ಹಂತದ ಪ್ರಯತ್ನವೂ ನಡೆದಿದೆಯಾದರೂ ಬಿ.ವೈ.ವಿಜಯೇಂದ್ರ ಬದಲಾವಣೆಗೆ ಪಟ್ಟು ಹಿಡಿದಿದ್ದಾರೆ ಎಂದು ಹೇಳಲಾಗುತ್ತಿದೆ.

ದೆಹಲಿ ವಿಧಾನಸಭೆ ಚುನಾವಣೆ ಮುಕ್ತಾಯವಾದ ಬಳಿಕ ರಾಜ್ಯ ಬಿಜೆಪಿಗೆ ಹೊಸ ಸಾರಥಿಯನ್ನು ವರಿಷ್ಠರು ಘೋಷಿಸುವ ಸಾಧ್ಯತೆ ಇರುವುದರಿಂದ ಯತ್ನಾಳ್ ಬಣದ ಚಟುವಟಿಕೆಗಳು ಚುರುಕುಗೊಂಡಿವೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಸೋದರ ಸಂಬಂಧಿ ಎನ್.ಆರ್.ಸಂತೋಷ್ ಕೂಡ ಯತ್ನಾಳ್ ಪಾಳಯಕ್ಕೆ ನಿಷ್ಠಾವಂತರಾಗಿದ್ದು, ಅವರೂ ನವದೆಹಲಿಯಲ್ಲಿದ್ದಾರೆ. ಹಿರಿಯ ನಾಯಕ ಅರವಿಂದ ಲಿಂಬಾವಳಿ ಈಗಾಗಲೇ ಬಂಡಾಯವೆದ್ದಿದ್ದು, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ಅವರೊಂದಿಗೆ ಒಂದು ಸುತ್ತಿನ ಮಾತುಕತೆ ನಡೆಸಿ, ಕೇಂದ್ರಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡುವ ಪ್ರಯತ್ನದಲ್ಲಿದ್ದಾರೆ.

ಹಲವು ದಿನಗಳಿಂದ ಯತ್ನಾಳ್ ಹಾಗೂ ರಮೇಶ್ ಜಾರಕಿಹೊಳಿ ಬಹಿರಂಗವಾಗಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದಾರೆ. ಯತ್ನಾಳ್, ಮಾಜಿ ಸಿಎಂ ಯಡಿಯೂರಪ್ಪನವರಿಗೂ ಚಾಟಿ ಬೀಸುವುದನ್ನು ನಿಲ್ಲಿಸಿಲ್ಲ. ದಿನ ಕಳೆದಂತೆ ಒಬ್ಬೊಬ್ಬರೇ ಯತ್ನಾಳ್ ಬಣ ಸೇರಿಕೊಳ್ಳುತ್ತಿದ್ದಾರೆ. ಅದರಲ್ಲೂ ಬಿಜೆಪಿ ಜಿಲ್ಲಾಧ್ಯಕ್ಷರುಗಳ ನೇಮಕದ ನಂತರ ಅಸಮಾಧಾನ ಮತ್ತಷ್ಟು ಭುಗಿಲೆದ್ದಿದೆ. ಬಿ.ವೈ.ವಿಜಯೇಂದ್ರ ಅವರನ್ನು ಕೆಳಗಿಳಿಸಿ, ಚುನಾವಣೆ ಮೂಲಕವೇ ಹೊಸ ರಾಜ್ಯಾಧ್ಯಕ್ಷರ ನೇಮಿಸಬೇಕೆಂಬ ಒತ್ತಾಯ ಹೆಚ್ಚಾಗಿದೆ. ಚುನಾವಣೆಯಲ್ಲಿ ನಾವೂ ಸ್ಪರ್ಧಿಸುವುದಾಗಿ ಯತ್ನಾಳ್ ಘೋಷಿಸಿದ್ದಾರೆ. ಇದೀಗ ರಾಜ್ಯ ಬಿಜೆಪಿ ಬೇಗುದಿ ದೆಹಲಿ ಅಂಗಳ ತಲುಪಿದ್ದು, ರಾಜಕೀಯ ವಲಯದಲ್ಲಿ ಕುತೂಹಲ ಹೆಚ್ಚಿಸಿದೆ.

ವರಿಷ್ಠರೊಂದಿಗೆ ಸಂಪರ್ಕದಲ್ಲಿದ್ದೇನೆ: ನಿರಂತರವಾಗಿ ವಾಗ್ದಾಳಿ ನಡೆಸುತ್ತಿರುವ ಯತ್ನಾಳ್ ಹಾಗೂ ಸ್ನೇಹಿತರು ದೆಹಲಿಗೆ ತೆರಳಿರುವ ಬಗ್ಗೆ ಪ್ರತಿಕ್ರಿಯಿಸಿರುವ ಬಿ.ವೈ.ವಿಜಯೇಂದ್ರ, ಭ್ರಷ್ಟ ಕಾಂಗ್ರೆಸ್ ಸರ್ಕಾರ ಮತ್ತು ಸಿಎಂ ಸಿದ್ದರಾಮಯ್ಯ ವಿರುದ್ಧ ನಡೆದ ಹೋರಾಟದಲ್ಲಿ ನೇತೃತ್ವ ವಹಿಸಿದ್ದು ನಾನು. ಅವರ ಇಂಥ ಹೇಳಿಕೆಗಳಿಂದ ಕಾರ್ಯಕರ್ತರೆಲ್ಲ ನೊಂದಿದ್ದಾರೆ. ದೆಹಲಿ ವರಿಷ್ಠರ ಮುಂದೆ ಏನು ಹೇಳಬೇಕಾಗಿದೆಯೋ ಹೇಳಿಕೊಳ್ಳಲಿ. ತಾನು ವರಿಷ್ಠರೊಂದಿಗೆ ಸಂಪರ್ಕದಲ್ಲಿದ್ದೇನೆ ಎಂದು ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ...complete ಗೂ finishಗೂ ವ್ಯತ್ಯಾಸವೇನು?
ಗಂಡ : ಏನಿಲ್ಲ ಕಣೇ...ನೀನು ನನಗೆ ಸಿಕ್ಕಿದೆ,
ನಿನ್ನ ಜೀವನ complete ಆಯ್ತು.
ನಾನು ನಿನಗೆ ಸಿಕ್ಕಿದೆ, ನನ್ನ ಜೀವನ finish ಆಯ್ತು

ಮೈಸೂರು ಮಿತ್ರ

ಬುಧವಾರ, 5 ಫೆಬ್ರವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಕುಡುಕನಿಗೆ ಹೇಗೆ ಒಳ್ಳೆಯದು ಕೆಟ್ಟದ್ದು ಗೊತ್ತಾಗುವುದಿಲ್ಲವೋ,
ಅದೇ ರೀತಿ ಒಬ್ಬ ಸ್ವಾರ್ಥ ಆಸೆಗಳ ಸಾಧಕನಿಗೆ
ಸರಿ ಕೆಟ್ಟದ್ದು ಗೊತ್ತಾಗುವುದೇ ಇಲ್ಲ. – ಚಾಣಕ್ಯ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ರಾವಣನ ಮಾತಿಗೆ ಮನಸೋತವ,
ರಾಮನ ಮಾತಿಗೆ ಜಾಣನಾಗುವನೇ?

ನಿಮ್ಮ ಪತ್ರಗಳು

■ ಮುಜರಾಯಿ ದೇವಾಲಯಗಳ ಹುಂಡಿಗಳ ಮೇಲೆ ಸರ್ಕಾರದ ಕಾಕದೃಷ್ಟಿ

ಮಾನ್ಯರೆ,

ಇದೀಗ ಮುಜರಾಯಿ ದೇವಾಲಯಗಳ ಹುಂಡಿಗಳ ಮೇಲೆ ಕರ್ನಾಟಕ ಸರ್ಕಾರದ ಕಣ್ಣು ಬಿದ್ದಿದೆ ಎಂದು ದೃಶ್ಯ ಮಾಧ್ಯಮ ಮತ್ತು ಪತ್ರಿಕಾ ಮಾಧ್ಯಮಗಳಲ್ಲಿಯೂ ಪ್ರಕಟವಾಗಿರುವುದು ಸರಿಯಷ್ಟೆ, ಅಲ್ಲಿಗೆ ಸರ್ಕಾರಕ್ಕೆ ವಿವಿಧ ಮೂಲಗಳಿಂದ ಬರಬೇಕಾಗಿರುವ ಆದಾಯ ಗಣನೀಯವಾಗಿ ಕಡಿಮೆ ಆಗಿದೆ ಎಂದು ಅರ್ಥ ತಾನೆ?

ಹಾಗಾದರೆ ಸರ್ಕಾರಕ್ಕೆ ಜನಸಾಮಾನ್ಯರು ತೆರಿಗೆಗಳನ್ನು ಕಟ್ಟುತ್ತಿಲ್ಲವೇ ಎಂಬ ಪ್ರಶ್ನೆ ಎದುರಾಗುತ್ತದೆ. ಜನರು ತಮ್ಮ ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಸರ್ಕಾರಕ್ಕೆ ತೆರಿಗೆಯನ್ನು ಕಟ್ಟುತ್ತಾರೆ. ಇದು ಅವರಿಗೆ ಸ್ವಾಭಿಮಾನದ ಪ್ರಶ್ನೆಯಾಗಿರುತ್ತದೆ.

ದೇವಾಲಯಗಳ ಹುಂಡಿಗಳ ಹಣವನ್ನು ಬೇಕಾದರೆ ಸರ್ಕಾರ ಬಳಸಿಕೊಂಡು ರಾಜ್ಯದ ಅಭಿವೃದ್ಧಿ ಕಾರ್ಯಗಳನ್ನು ಮಾಡಲಿ. ಅದು ಬಿಟ್ಟು ಬಡ ಪೂಜಾರಿಗಳ ಹೊಟ್ಟೆಯ ಮೇಲೆ ಹೊಡೆಯುವುದು ಅದೆಷ್ಟು ಸರಿ ಎಂದು ಎಲ್ಲಾ ಪೂಜಾರಿಗಳ ಪ್ರಶ್ನೆಯಾಗಿದೆ.

ಇಲ್ಲಿ ಇನ್ನೂ ಒಂದು ಪ್ರಶ್ನೆ ಜನರಿಗೆ ಎದುರಾಗುತ್ತದೆ. ಅದೇನೆಂದರೆ ಈ ಸರ್ಕಾರ ಮುಸ್ಲಿಂ ದರ್ಗಾಗಳ ಮತ್ತು ಕ್ರಿಶ್ಚಿಯನ್ನರ ಪವಿತ್ರ ಸ್ಥಳಗಳ ಆದಾಯದ ಮೇಲೂ ತನ್ನ ಕಣ್ಣು ಹಾಯಿಸಿ ಅವರ ಆದಾಯವನ್ನೂ ಸಹ ತನ್ನ ಕೈವಶ ಮಾಡಿಕೊಳ್ಳುತ್ತದೆಯೇ? ಹೀಗೆ ಮಾಡಲು ಸರ್ಕಾರಕ್ಕೆ ಧೈರ್ಯವಿಲ್ಲ. ಏಕೆಂದರೆ ಚುನಾವಣೆಗಳಲ್ಲಿ ಆ ಪಂಗಡಗಳ ಮತಗಳು ಕೈಜಾರಿ ಹೋಗಬಹುದೆಂಬ ಅನುಮಾನ.

ಇದನ್ನೆಲ್ಲಾ ಗಮನಿಸಿದರೆ ಸರ್ಕಾರ ದಿವಾಳಿಯ ಅಂಚಿನಲ್ಲಿದೆ ಎಂದು ಹೇಳಬೇಕಾಗುತ್ತದೆ. ಇದನ್ನು ಅರಿತು ಸರ್ಕಾರವು ಸೂಕ್ತ ಕ್ರಮಗಳನ್ನು ಕೈಗೊಂಡು, ಶ್ರೀಸಾಮಾನ್ಯನ ಆಶೋತ್ತರಗಳನ್ನು ಈಡೇರಿಸಲಿ ಎಂಬುದೇ ಶ್ರೀಸಾಮಾನ್ಯನ ಹಕ್ಕೊತ್ತಾಯ ಹಾಗೂ ಬೇಡಿಕೆ. –ಬೇಲೂರು ದ.ಶಂ. ಪ್ರಕಾಶ್, ಮೈಸೂರು

■ ತೆರಿಗೆಯ ಭಾರ

ಮಾನ್ಯರೆ,

ಬ್ಯಾಂಕು ಠೇವಣಿಗಳ ಮೇಲೆ ದೊರಕುವ ಬಡ್ಡಿಯನ್ನೂ ವ್ಯಕ್ತಿಯ ಒಟ್ಟಾರೆ ಆದಾಯಕ್ಕೆ ಸೇರಿಸಿ ಅದನ್ನೂ ಆದಾಯ ಎಂದು ಪರಿಗಣಿಸುವ ಕಾರಣ ಜನರ ಉಳಿತಾಯದ ಬಡ್ಡಿಯ ಮೊತ್ತದ ಮೇಲೂ ಆದಾಯ ತೆರಿಗೆ ಕಟ್ಟಬೇಕಾಗುವುದು. ಇಂತಹ ತೆರಿಗೆಗಳ ಭಾರದಿಂದ ರೋಸಿಹೋದ ಜನಸಾಮಾನ್ಯರು ಬೇರೆ ಬೇರೆ ಕಡೆಗಳಲ್ಲಿ ಹಣ ಹೂಡುವುದು, ಕೆಲವೊಮ್ಮೆ ಹೆಚ್ಚಿನ ಬಡ್ಡಿಯ ಆಮಿಷದಿಂದ ಭದ್ರತೆ ಇರದ ಕಡೆಯೂ ಹಣ ಹೂಡುವಂತಾಗಬಹುದು. ವ್ಯಕ್ತಿಯು ಕಷ್ಟಪಟ್ಟು ದುಡಿದು ಉಳಿತಾಯ ಮಾಡಿದ ಮೊತ್ತವನ್ನು ಸುರಕ್ಷತೆಗಾಗಿ ಬ್ಯಾಂಕಲ್ಲಿ ಇಡುವ ಕಾರಣ ಇದಕ್ಕೆ ತೆರಿಗೆಯನ್ನೇ ವಿಧಿಸಬಾರದು. ಅಥವಾ ಕಡಿಮೆ ತೆರಿಗೆಯನ್ನು ವಿಧಿಸಿದರೆ ಉತ್ತಮ.

–ಚೇತನ್ ಎನ್, ಆರ್,. ನಗರ್ಲೆ, ನಂಜನಗೂಡು.

■ ಕಾರ್ಗತ್ತಲಲ್ಲಿ ಮುಳುಗುತ್ತಿವೆ ಹೆದ್ದಾರಿಗಳು!



ಮಾನ್ಯರೆ,

ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಒಂದಾಗಿರುವ ಮೈಸೂರು– ಹುಣಸೂರು ರಸ್ತೆಯಲ್ಲಿರುವ ಹಿನಕಲ್ ಭಾಗದಲ್ಲಿ ಬೀದಿದೀಪಗಳು ಕೆಟ್ಟು ಹಲವಾರು ದಿನಗಳೇ ಆದರೂ ನಗರಪಾಲಿಕೆ ಆಗಲಿ, ಚಾ.ವಿ.ಸ.ನಿ.ನಿ ಅಥವಾ ಗ್ರಾಮ ಪಂಚಾಯಿತಿ ಅಧಿಕಾರಿಗಳಾಗಲಿ ಗಮನ ಕೊಡದೆ ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಐಶ್ವರ್ಯ ಪೆಟ್ರೋಲ್ ಬಂಕ್‌ನಿಂದ ಹೂಟಗಳ್ಳಿ ಸಿಗ್ನಲ್‌ವರೆಗೂ ಇದೇ ಪರಿಸ್ಥಿತಿ. ಈ ರಸ್ತೆಯಲ್ಲಿ ಸಂಚಾರ ದಟ್ಟಣೆ ಸದಾಕಾಲ ಹೆಚ್ಚಾಗಿಯೇ ಇರುವುದರಿಂದ ಬಡಾವಣೆ ನಿವಾಸಿಗಳು ಹಾಗೂ ಗ್ರಾಮಸ್ಥರು ಹಿನಕಲ್, ಹೂಟಗಳ್ಳಿ ಅಥವಾ ಬೆಳವಾಡಿಯ ಕಡೆ ತೆರಳಬೇಕೆಂದರೆ ಈ ಹೆದ್ದಾರಿಯನ್ನು ದಾಟಿಕೊಂಡು ಹೋಗಲೇಬೇಕಿರುವ ಪರಿಸ್ಥಿತಿಯಿರುವುದ ರಿಂದ ಜನರು ತಮ್ಮ ಜೀವ ಕೈಯಲ್ಲಿಟ್ಟುಕೊಂಡು ಆತಂಕದಲ್ಲಿ ಈ ರಸ್ತೆಯನ್ನು ದಾಟಬೇಕಾದ ಸನ್ನಿವೇಶ ಎದುರಾಗಿದೆ. ಹೆದ್ದಾರಿಯಲ್ಲೇ ಬೀದಿ ದೀಪಗಳು ಈ ರೀತಿ ಕೆಟ್ಟು ನಿಂತರೆ ನಾವು ಎಲ್ಲಿ ಹೋಗಬೇಕು ಸ್ವಾಮೀ? ಗ್ರಾಮಸ್ಥರು ಹಾಗೂ ಬಡಾವಣೆ ನಿವಾಸಿಗಳ ಹಿತರಕ್ಷಣೆಗಾಗಿ ಕೂಡಲೇ ಬೀದಿದೀಪಗಳನ್ನು ದುರಸ್ತಿಗೊಳಿಸಿ ಜೀವಗಳನ್ನು ಕಾಪಾಡಬೇಕಾಗಿ ಈ ಮೂಲಕ ಮನವಿ.

–ಯಶಸ್. ಆರ್, ಲೇಖಕ ಹಾಗೂ ಸಾಮಾಜಿಕ ಕಾರ್ಯಕರ್ತ, ಮೈಸೂರು.


■ ಟೆಂಪಲ್ ರಸ್ತೆಗೆ 'ವಾಸು' ಹೆಸರು ನಾಮಕರಣ ಮಾಡಿ

ಮಾನ್ಯರೆ,

ಮೈಸೂರಿನ ಪಡುವಾರಹಳ್ಳಿಯ ಮಹಾರಾಣಿ ಕಾಲೇಜು ಸೇರಿದಂತೆ ಕೆಆರ್‌ಎಸ್ ರಸ್ತೆಯಲ್ಲಿರುವ, ಜಯದೇವ ಹೃದ್ರೋಗ ಮತ್ತು ಸಂಶೋಧನಾ ಕೇಂದ್ರ, ಟ್ರಾಮಾ ಕೇರ್ ಸೆಂಟರ್, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ ಸೇರಿದಂತೆ, ತಮ್ಮ ಅವಿರತ ಶ್ರಮದಿಂದಾಗಿ ಮೈಸೂರಿನ ಜನಮಾನಸದಲ್ಲಿ ಉಳಿಯುವಂತೆ ಕೆಲಸ ಮಾಡಿದವರು ಅಂದಿನ ಚಾಮರಾಜ ಕ್ಷೇತ್ರದ ಶಾಸಕರಾದ ವಾಸು ಅವರು. ಇವರ ಪ್ರಾಮಾಣಿಕತೆಯಿಂದಾಗಿಯೇ ಇವರು ಶಾಸಕರಾಗಿದ್ದ ಅವಧಿಯಲ್ಲಿ ಹೆಚ್ಚು ಅನುದಾನವನ್ನು ಅವರ ಕ್ಷೇತ್ರಕ್ಕೆ ತಂದವರು. ಈ ಕಾರಣಕ್ಕಾಗಿ ಅವರ ಹೆಸರು ಮೈಸೂರು ನಗರದಲ್ಲಿ ಚಿರಸ್ಥಾಯಿಯಾಗಿ ಉಳಿಯುವ ಕೆಲಸವಾಗಬೇಕು.

ಮೈಸೂರಿನ ಹುಣಸೂರು ರಸ್ತೆಯ, ಸೆಂಟ್ ಜೋಸೆಫ್ ಶಾಲೆಯಿಂದ ಕೆ.ಆರ್.ಎಸ್. ರಸ್ತೆಯ ವೆಂಕಟರಮಣಸ್ವಾಮಿ ದೇವಸ್ಥಾನದವರೆಗಿನ 'ಟೆಂಪಲ್ ರಸ್ತೆಗೆ ದಿವಂಗತ 'ವಾಸು' ಅವರ ಹೆಸರನ್ನು ನಾಮಕರಣ ಮಾಡಬೇಕಿದೆ. ಇದು ವಾಸು ಅವರಿಗೆ ಮೈಸೂರಿನ ಜನತೆ ಸಲ್ಲಿಸುವ ಗೌರವ, ನಗರಪಾಲಿಕೆ ಈ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳುವಂತಾಗಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಮಂಕುತಿಮ್ಮನು ಕಂಡ ಯೋಗ

ಡಿವಿಜಿ (ಡಿ.ವಿ. ಗುಂಡಪ್ಪ) ಇಪ್ಪತ್ತನೆಯ ಶತಮಾನದಲ್ಲಿ ಕನ್ನಡ ನಾಡು ಕಂಡ ಮಹಾನ್ ಚಿಂತಕರು. ಕನ್ನಡದಲ್ಲೂ ಇಂಗ್ಲೀಷ್‌ನಲ್ಲೂ ಅವರು ಸೃಷ್ಟಿಸಿದ ಸಾಹಿತ್ಯ ಮಹತ್ತ್ವದಲ್ಲೂ ಬೃಹತ್ತ್ವದಲ್ಲೂ ಪ್ರಥಮ ಸ್ಥಾನವನ್ನು ಪಡೆಯುತ್ತದೆ. ಅವರು ಶ್ರೇಷ್ಠ ನುಡಿಗಳನ್ನು ಆಡಿದ್ದು ಮಾತ್ರವಲ್ಲ, ಆ ನುಡಿಗಳಿಗೆ ತಕ್ಕ ಬದುಕನ್ನು ಬಾಳಿದರು. ಅವರ ಅನುಭವಗಳೇ ಅವರ ಸಾಹಿತ್ಯದ ಬಂಡವಾಳ. ಅವರ ಕೃತಿಗಳಲ್ಲಿ ಅತ್ಯಂತ ಪ್ರಸಿದ್ಧವಾದದ್ದು, ಕನ್ನಡಿಗರ ಮನೆಗಳಲ್ಲೂ ಮನಗಳಲ್ಲೂ ನೆಲೆಸಿರುವುದು ಮಂಕುತಿಮ್ಮನ ಕಗ್ಗ. ಡಿವಿಜಿಗೂ ಮಂಕುತಿಮ್ಮನಿಗೂ ಇರುವುದು ಅವಿನಾಭಾವ ಸಂಬಂಧ. ಕಗ್ಗದಲ್ಲಿ ಯಾವ ಯಾವ ವಿಷಯಗಳು ಇವೆ ಎಂದು ಹೇಳುವುದು ಕಷ್ಟ, ಏಕೆಂದರೆ ಅವು ಅಷ್ಟೊಂದಿವೆ. ಯಾವ ವಿಷಯವಿಲ್ಲ ಎಂಬ ಪ್ರಶ್ನೆಗೂ ಉತ್ತರ ಕಷ್ಟವೇ. ಎಲ್ಲಾ ವಿಷಯಗಳನ್ನೂ, ನೇರವಾಗಿ ಅಥವಾ ವಕ್ರವಾಗಿ ಕಗ್ಗವು ಮುಟ್ಟಿಯೇ ಇರುತ್ತದೆ. ಆದ್ದರಿಂದಲೇ ಯಾವ ವಿಷಯದ ಮೇಲಾದರೂ ಭಾಷಣ ಮಾಡುವವರು ಕಗ್ಗವನ್ನು ತಿರುವಿ ಹಾಕಿ ತಮಗೆ ಅನುಕೂಲವಾದ ಪದ್ಯಗಳನ್ನು ಹುಡುಕಿ ಬಳಸಿಕೊಳ್ಳುತ್ತಾರೆ. ಈಗ ಯೋಗದ ವಿಷಯಕ್ಕೆ ಬರೋಣ.


ಯೋಗ ಎಂದರೆ ಯೋಗಾಸನ ಎಂಬ ಭ್ರಾಂತಿ ಈಚಿನ ದಿನಗಳಲ್ಲಿ ಬೇರೂರಿದೆ. ಆಸನವು ಯೋಗದ ಒಂದು ಅಂಗ ಮಾತ್ರ, ಸಮಗ್ರ ಯೋಗವು ಒಂದು ಜೀವನ ವಿಧಾನ. ಯೋಗ ಸೂತ್ರಗಳು ನೂರ ತೊಂಬತ್ತಾರು ಇವೆ. ಅವುಗಳಲ್ಲಿ ಎರಡು ಮಾತ್ರ ಆಸನಗಳ ಬಗೆಗೆ ಇವೆ. ಪದ್ಮಾಸನ, ವೀರಾಸನ ಇತ್ಯಾದಿ. ಯಾವ ಆಸನಗಳನ್ನೂ ಪತಂಜಲಿಯು ಹೆಸರಿಸಿಲ್ಲ. ಡಿವಿಜಿ ಆಸನಾಭ್ಯಾಸದಲ್ಲಿ ಎಷ್ಟು ನಿರತರಾಗಿದ್ದರೋ ನನಗೆ ತಿಳಿಯದು. ಆದರೆ ಅವರದು ನಿಜಾರ್ಥದಲ್ಲಿ ಯೋಗಿಯ ಬದುಕೇ ಆಗಿತ್ತು. ಯೋಗ ಎಂದರೇನು, ಯೋಗಿಯು ಹೇಗೆ ಜೀವನವನ್ನು ನಡೆಸಿ ಬದುಕನ್ನು ಸಾರ್ಥಕ ಮಾಡಿಕೊಳ್ಳುತ್ತಾನೆ ಎಂಬುದನ್ನು ಕಗ್ಗದ ಕೆಲವು ಪದ್ಯಗಳು ತಿಳಿಸಿಕೊಡುತ್ತವೆ. ಅವು ಪಾಂಡಿತ್ಯದ ರಚನೆ ಅಲ್ಲ, ಅನುಭವದ ವಚನಗಳು. ಅಂತಹ ಒಂದು ಪದ್ಯ–

ಹೊರಗೆ ಲೋಕಾಸಕ್ತಿಯೊಳಗೆ ಸಕಲವಿರಕ್ತಿ
ಹೊರಗೆ ಲೋಕಧ್ಯಾನವೊಳಗುದಾಸೀನ.
ಹೊರಗೆ ಸಂಸ್ಕೃತಿ ಭಾರವೊಳಗದರ ತಾತ್ಸಾರ
ವರಯೋಗಮಾರ್ಗವಿದು ಮಂಕುತಿಮ್ಮ॥

ಹೊರಗಿನ ಪ್ರಪಂಚಕ್ಕಾಗಿ ಯೋಗಿಯೂ ಸಾಮಾನ್ಯ ಜನರಂತೆ ಲೋಕದ ಕಾರ್ಯಗಳಲ್ಲಿ ಆಸಕ್ತಿ ಹೊಂದಿದವನಂತೆ ಕಾಣಿಸುತ್ತಾನೆ. ಲೋಕದ ಕಾರ್ಯಗಳಲ್ಲಿ ಆಸಕ್ತಿ ಹೊಂದಿದ್ದವನಂತೆ ನಟಿಸುತ್ತಾನೆ. ಮದುವೆ, ಮುಂಜಿ, ದೇವರ ಜಾತ್ರೆ, ತೀರ್ಥಯಾತ್ರೆಗಳಲ್ಲಿ ಭಾಗವಹಿಸಿ ಉತ್ಸಾಹವಂತನಂತೆ ಗೋಚರಿಸುತ್ತಾನೆ. ಆದರೆ ಒಳಗೆ ಅವನಿಗೆ ಅವುಗಳಲ್ಲಿ ಆಸಕ್ತಿಯಿಲ್ಲ. ಅವನ ಮನಸ್ಸು ನಿರ್ಲಿಪ್ತ ಸಾಮಾನ್ಯ ಜನರ ಶ್ರದ್ಧೆಯನ್ನು ಕೆಡಿಸಬಾರದು ಎಂಬ ದೃಷ್ಟಿಯಿಂದ ಮಾತ್ರ ಅವನು ಆ ಕಾರ್ಯಗಳಲ್ಲಿ ಆಸಕ್ತನಂತೆ ಭಾಗವಹಿಸುವುದು.

ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಮ್ ।
ಜೋಷಯೇತ್ ಸರ್ವಕರ್ಮಾಣಿ ವಿದ್ವಾನ್ ಯುಕ್ತಃಸಮಾಚರನ್ ॥

ಎಂಬ ಗೀತಾ ವಾಕ್ಯವಿದೆ. ಸಕಾಮ ಕರ್ಮದಲ್ಲಿ ಆಸಕ್ತರಾದ ಅಜ್ಞಾನಿಗಳ ಶ್ರದ್ಧೆಯನ್ನು ಕೆಡಿಸಿ ಅವರಲ್ಲಿ ಬುದ್ಧಿವಿಕಲ್ಪವನ್ನು ಪ್ರಾಜ್ಞನು ಹುಟ್ಟಿಸಬಾರದು. ಜನಸಮೂಹದಲ್ಲಿ ಸೇರುವ ಜ್ಞಾನಿಯೂ ಅವರಂತೆ ಕರ್ಮಗಳನ್ನು ಆಚರಿಸಿ ಪ್ರೋತ್ಸಾಹಿಸಬೇಕು ಎಂದು ಶ್ರೀಕೃಷ್ಣನು ಹೇಳಿರುವಂತೆ ಯೋಗಿಯು ಹೊರಗೆ ಲೋಕಧ್ಯಾನದಲ್ಲಿರುತ್ತಾನೆ. ಒಳಗೆ ಉದಾಸೀನನಾಗಿರುತ್ತಾನೆ. ಈ ಬಾಹ್ಯ ಪೂಜೆ, ಮಂತ್ರ ಪಠನ, ಗಂಟೆ ಜಾಗಟೆಗಳ ಸದ್ದು ಅರ್ಥಹೀನವೆಂದು ಅವನ ಅರಿವಿನಲ್ಲಿರುತ್ತದೆ. ಹೊರಗೆ ಸಂಸ್ಕೃತಿ ಭಾರ. ಹಾರ, ತುರಾಯಿ, ಪೇಟ, ಶಾಲು, ಇವೆಲ್ಲ ಕೇವಲ ಭಾರ ಎಂದವನಿಗೆ ಗೊತ್ತು. ಲೋಕದ ಜನರಿಗಾಗಿ



ಅವುಗಳನ್ನು ಸಹಿಸಿಕೊಂಡು ಸುಮ್ಮನೆ ಇರುತ್ತಾನೆ. ಜನರು ಮಾಡುವ ಸಮ್ಮಾನಗಳು ಸ್ವಾರ್ಥಪ್ರೇರಿತ ಎಂದು ಯೋಗಿಗೆ ಗೊತ್ತು. ಅವುಗಳ ಬೆಲೆ ತಾತ್ಕಾಲಿಕ ಎಂಬುದೂ ತಿಳಿದಿದೆ. ಹೃದಯದಲ್ಲಿ ಅವುಗಳ ಬಗೆಗೆ ತಾತ್ಸಾರ. ಇದು ಉತ್ತಮ ಯೋಗ ಮಾರ್ಗವನ್ನು ಆಶ್ರಯಿಸಿದವರ ರೀತಿ ಎಂಬುದನ್ನು ಮಾರ್ಮಿಕವಾಗಿ ಡಿವಿಜಿ ತಿಳಿಸಿಕೊಟ್ಟಿದ್ದಾರೆ.

ಯೋಗಿಯು ಪ್ರಪಂಚದಲ್ಲಿ ಹೇಗಿರುವನೆಂಬುದನ್ನು ಇನ್ನೊಂದು ಪದ್ಯದಲ್ಲಿ ಡಿವಿಜಿ ಹೇಳಿದ್ದಾರೆ –

ಕಾಗೆಯೂ ಕೋಗಿಲೆಯೂವೊಂದೆ ಮೇಲ್ ನೋಟಕ್ಕೆ
ಯೋಗಿಯುಂ ಸಂಸಾರಭೋಗಿಯೇ ಹೊರಕೆ
ಲೋಗರವೊಲಿರುತೆ ಸುಖ ದುಃಖ ಸಂಭ್ರಮಗಳಲಿ
ತ್ಯಾಗಿಯವನಂತರದಿ ಮಂಕುತಿಮ್ಮ ॥

ಮೇಲುನೋಟಕ್ಕೆ ಕಾಗೆಯೂ ಕೋಗಿಲೆಯೂ ಒಂದೇ ರೀತಿಯಾಗಿ ಕಾಣಿಸುತ್ತವೆ. ಎರಡರ ಆಕಾರ ಸಮಾನ. ಎರಡರ ಬಣ್ಣವೂ ಕಪ್ಪು. ಈ ಬಗೆಗೆ ಸಂಸ್ಕೃತದಲ್ಲಿ ಒಂದು ಶ್ಲೋಕವೇ ಇದೆ.

ಕಾಕಃ ಕೃಷ್ಣಃ ಪಿಕಃ ಕೃಷ್ಣಃ ಕೋ ಭೇದಃ ಪಿಕ ಕಾಕಯೋಃ।
ವಸಂತಕಾಲೇ ಸಂಪ್ರಾಪ್ತೇ ಕಾಕಃ ಕಾಕಃ ಪಿಕಃ ಪಿಕಃ ॥

ಕಾಗೆಯೂ ಕಪ್ಪು ಕೋಗಿಲೆಯೂ ಕಪ್ಪು. ಕಾಗೆ–ಕೋಗಿಲೆಗಳಿಗೆ ಅಂತರ ವೇನು? ವಸಂತ ಕಾಲವು ಬಂದಾಗ ಕಾಗೆ ಕಾಗೆಯೇ, ಕೋಗಿಲೆ ಕೋಗಿಲೆಯೇ ವಸಂತ ಕಾಲದಲ್ಲೂ ಕಾಗೆಯ ಧ್ವನಿ ಕರ್ಕಶ. ಆದರೆ ಕೋಗಿಲೆ ಆಗ ಇಂಪಾದ ಪಂಚಮಸ್ವರದಲ್ಲಿ ಕೂಗುತ್ತದೆ. ಇದೇ ಅವುಗಳ ಅಂತರ.

ಹಾಗೆ ಯೋಗಿಯೂ ಸಂಸಾರಿಯೂ ಮೇಲು ನೋಟಕ್ಕೆ ಸಮಾನರಾಗಿರುತ್ತಾರೆ. ಯೋಗಿಯೂ ಸುಖ ದುಃಖ ಸಂಭ್ರಮಗಳಲ್ಲಿ ಸಾಮಾನ್ಯ ಜನರಂತೆಯೇ ಇರುತ್ತಾನೆ. ಅವನ ತಲೆಯ ಮೇಲೆ ಕೋಡು ಮೂಡಿರುವುದಿಲ್ಲ. ಆದರೆ ಅಂತರಂಗದಲ್ಲಿ ಯೋಗಿಯು ತ್ಯಾಗಿ ಯಾವುದಕ್ಕೂ ಅವನು ಅಂಟಿಕೊಂಡಿರುವುದಿಲ್ಲ. ಭಗವದ್ಗೀತೆಯು ಹೇಳುವಂತೆ –

ಸಕ್ತಾಃ ಕರ್ಮಣ್ಯವಿದ್ವಾಂಸೋ ಯಥಾ ಕುರ್ವಂತಿ ಭಾರತ ।
ಕುರ್ಯಾದ್ ವಿದ್ವಾಂಸ್ತಥಾಸಕ್ತಃ ಚಿಕೀರ್ಷುರ್ಲೋಕಸಂಗ್ರಹಮ್ ॥

ಅಜ್ಞಾನಿಗಳು ಕರ್ಮಕ್ಕೆ ಸ್ವಾರ್ಥದಿಂದ ಅಂಟಿಕೊಂಡು ಹೇಗೆ ಕೆಲಸ ಮಾಡುವರೋ ಹಾಗೆ ಜ್ಞಾನಿಯು ಲೋಕ ಸಂಗ್ರಹವನ್ನು ಮಾಡುವುದಕ್ಕಾಗಿ ಯಾವುದೇ ಸ್ವಾರ್ಥದ ಸೋಂಕು ಇಲ್ಲದೆ ತನ್ನ ಕರ್ತವ್ಯಗಳನ್ನು ಮಾಡುವನು. ಬಾಹ್ಯದಲ್ಲಿ ಯೋಗಿಯೂ ಸಂಸಾರಿಯೂ ಸಮಾನ. ಅಂತರಂಗದಲ್ಲಿ ಯೋಗಿಯು ತ್ಯಾಗಿ, ಸಂಸಾರಿಯು ಅನುರಾಗಿ. ಇದೇ ಅವರಿಬ್ಬರ ಅಂತರ.

ಮಾನವ ಜೀವನಕ್ಕೆ ಒಂದು ಸೂಕ್ಷ್ಮ ಹದವು ಬೇಕು, ಎಚ್ಚರಿಕೆಯೂ ಬೇಕು. ಇದನ್ನು ಅರಿತುಕೊಂಡವನೇ ಯೋಗಿ. ಅದನ್ನು ಡಿವಿಜಿ ಹೇಳುತ್ತಾರೆ–

ಬೇಕು ಜೀವನ ಯೋಗಕ್ಕೊಂದು ಬಹುಸೂಕ್ಷ್ಮನಯ
ಬೇಕೊಂದು ಜಾಗರೂಕತೆ ಬುದ್ಧಿಸಮತೆ
ತಾಕನೊಂದನು ಯೋಗಿ ನೂಕನೊಂದನು ಜಗದಿ
ಏಕಾಕಿ ಸಹವಾಸಿ ಮಂಕುತಿಮ್ಮ ॥

ಇಡೀ ಜೀವನವನ್ನೇ ಯೋಗವನ್ನಾಗಿ ಮಾಡಿಕೊಂಡರೆ ಅದು ಜೀವನ ಯೋಗ. ಅದನ್ನು ಗಳಿಸಲು ಅತ್ಯಂತ ಸೂಕ್ಷ್ಮವಾದ ನೀತಿಯು ಬೇಕಾಗುವುದು. ಜಾಗರೂಕತೆಯೂ ಬುದ್ಧಿಯ ಸಮತ್ವವೂ ಬೇಕು. ಇದನ್ನೇ ಭಗವದ್ಗೀತೆ 'ಸಮತ್ವಂ ಯೋಗ ಉಚ್ಯತೇ' ಎಂದು ಘೋಷಿಸಿದೆ. ಇಂತಹ ಜೀವನ ಯೋಗವನ್ನು ಅಳವಡಿಸಿಕೊಂಡ ಯೋಗಿಯು 'ತಾಕನೊಂದನು' ಎಂದರೆ ಪ್ರಪಂಚದ ಯಾವ ವಸ್ತುವನ್ನು ಯಾವ ವ್ಯಕ್ತಿಯನ್ನೂ ತಾಕಿಸಿಕೊಳ್ಳುವುದಿಲ್ಲ. ಹಾಗೆಂದರೇನು? ಯಾವುದರಲ್ಲೂ ಯಾರಲ್ಲೂ ಮಮತ್ವವನ್ನು ಬೆಳೆಸಿಕೊಳ್ಳುವುದಿಲ್ಲ. ಈ ಮಮತ್ವವನ್ನೇ ರಾಗ ಎಂದು ಕರೆದಿದ್ದಾರೆ. ಅದನ್ನು ಕತ್ತರಿಸಿಕೊಂಡವನು ವೀತರಾಗ. ರಾಗವು ಹೋದಾಗ ಭಯವೂ ಕ್ರೋಧವೂ ತಾವಾಗಿ ಮಾಯವಾಗುತ್ತವೆ. ಮಾನವನು ವೀತರಾಗಭಯ ಕ್ರೋಧನಾಗುತ್ತಾನೆ. ಮತ್ತೆ ಹೇಳಿದ್ದಾರೆ ಡಿವಿಜಿ. 'ನೂಕನೊಂದನು ಜಗದಿ' ಯೋಗಿಯು ಜಗತ್ತಿನಲ್ಲಿರುವ ಯಾವುದನ್ನೂ ಆಚೆಗೆ ನೂಕುವುದಿಲ್ಲ. ಇದು ಹೇಗೆ ಸಾಧ್ಯ? ಯಾವುದನ್ನೂ ತಾಕಿಸಿಕೊಳ್ಳುವುದಿಲ್ಲ. ಯಾವುದನ್ನೂ ನೂಕಿ ತಳ್ಳುವುದಿಲ್ಲ? ಅದೇ ಸೂಕ್ಷ್ಮನಯ. ತಾವರೆ ಗಿಡವು ಸದಾ ನೀರಿನಲ್ಲೇ ನಿಂತಿರುತ್ತದೆ. ಅದರ ಎಲೆಗಳ ಮೇಲೆ ನೀರು ಬೀಳುವುದು ಅನಿವಾರ್ಯ. ಆದರೆ ತಾವರೆ ಎಲೆಯು ನೀರಿನ ಒಂದು ಹನಿಯನ್ನೂ ಅಂಟಿಸಿಕೊಳ್ಳದೆ ನಿರ್ಲಿಪ್ತವಾಗಿ ಇದ್ದು ಬಿಡುತ್ತದೆ. ಹಾಗೆ ಯೋಗಿಯೂ ಸಮಾಜದಲ್ಲಿ ಇದ್ದರೂ ಏನನ್ನೂ ಮುಟ್ಟದೆ, ಯಾವುದಕ್ಕೂ ಅಂಟಿಕೊಳ್ಳದೆ ನಿರ್ಲಿಪ್ತನಾಗಿರುತ್ತಾನೆ ಎಂಬುದು ಈ ಪದ್ಯದ ತಾತ್ಪರ್ಯ. ಆ ಯೋಗಿಯು ಎಲ್ಲರ ಸಹವಾಸಿ, ಆದರೂ ಏಕಾಕಿ. ವ್ಯವಹಾರದಲ್ಲಿ ಎಲ್ಲರ ಮಿತ್ರ, ಎಲ್ಲರ ಬಂಧು. ಧ್ಯಾನಕ್ಕೆ ಕುಳಿತಾಗ ಎಲ್ಲರನ್ನೂ ಬಿಟ್ಟ ಏಕಾಕಿ.

ಹಾಗಾದರೆ ಯೋಗಿ ಜಗತ್ತಿನ ಸೌಂದರ್ಯವನ್ನು ಕಾಣದ ಕುರುಡನೆ? ಸಂಗೀತದ ಮಾಧುರ್ಯವನ್ನು ಅರಿಯದ ಕುರುಡನೆ? ಸ್ನೇಹದ ಆರ್ದ್ರತೆಯನ್ನು ತಿಳಿಯದ ಕಲ್ಲೆ? ಅಲ್ಲ ಎನ್ನುತ್ತಾರೆ ಡಿವಿಜಿ.

ಚೆಲುವು ನಗುವುಗಳ ಕಂಡವನ ಕಣ್ಣರಳುವುದು
ಅಳುವು ನೋವುಗಳ ಕಂಡೊದ್ದೆಯಾಗುವುದು
ಇಳೆಯ ದನಿಗವನೆದೆಯೊಳೊಪ್ಪು ಮರುದನಿಯಹುದು
ಶಿಲೆಯಲ್ಲ ಯೋಗಿಯದೆ ಮಂಕುತಿಮ್ಮ॥

ಮೂಡಣದಲ್ಲಿ ಮೂಡುವ ನೇಸರಿನ ಬಣ್ಣಗಳ ಸೊಬಗನ್ನು, ಹಿಮಾಲಯ ಶೈಲದ ಉನ್ನತೋನ್ನತ ಶಿಖರಗಳನ್ನು, ಸಮುದ್ರದ ಅಲೆಗಳ ವೇಗವನ್ನು, ಅರಳುವ ಹೂವುಗಳ ಸೊಬಗನ್ನು ಕಂಡು ಯೋಗಿಯ ಕಣ್ಣು ವಿಸ್ಮಯಾನಂದಗಳಿಂದ ಅರಳುವುದು. ದುಃಖಿತರ ಅಳುವನ್ನು ಕೇಳಿ, ನೋವನ್ನು ನೋಡಿ ಯೋಗಿಯ ಕಣ್ಣೂ ಒದ್ದೆಯಾಗುವುದು. ಭೂಮಿಯಲ್ಲಿರುವವರ ಧ್ವನಿಗೆ ಅವನ ಎದೆಯ ಗುಹೆಯಲ್ಲಿ ಪ್ರತಿ ಧ್ವನಿ ಉಂಟಾಗುವುದು. ಯಾವುದಕ್ಕೂ ಸ್ಪಂದಿಸದ ಯಾವುದರಿಂದಲೂ ಕರಗದ ಕಗ್ಗಲ್ಲು ಯೋಗಿಯ ಎದೆಯಲ್ಲ. ಜಗತ್ತಿನ ಒಳಿತು ಕೆಡಕುಗಳ ಬಗೆಗೆ ಯೋಚಿಸದೆ ತಾನು ಮಾತ್ರ ಮೋಕ್ಷಾನಂದವನ್ನು ಪಡೆಯಬೇಕೆಂಬ ಸ್ವಾರ್ಥಿ ಯೋಗಿಯಲ್ಲ. ಜಗತ್ತಿನ ನೋವು ನಲಿವುಗಳಿಗೆ ಸ್ಪಂದಿಸುತ್ತಲೇ ಅದರ ಹಿತವನ್ನು ಸಾಧಿಸುವ ಸಾಧಕನೇ ಯೋಗಿ ಎಂಬುದು ಮಂಕುತಿಮ್ಮನ ಸಿದ್ಧಾಂತ.

ಅಂತಹ ಯೋಗಿಗೆ ಉದಾಹರಣೆಯೆಂದು ಡಿವಿಜಿ ಭರತನನ್ನು ಸೂಚಿಸುತ್ತಾರೆ.

ಒಡರಿಸುವನೆಲ್ಲವನ್ ಅದಾವುದುಂ ತನದಲ್ಲಿ
ಬಿಡನೊಂದನುಂ ರಾಜ್ಯ ತನದಲ್ಲವೆಂದು ।
ನಡೆವಂ ಸ್ವತಂತ್ರದಲಿ ಸಲಿಸುತೆ ವಿಧೇಯತೆಯ
ಕಡುಯೋಗಿ ಭರತನಲ ಮಂಕುತಿಮ್ಮ ॥

ಹದಿನಾಲ್ಕು ವರ್ಷ ಭರತ ರಾಜ್ಯಭಾರವನ್ನು ವಹಿಸಿಕೊಂಡ. ಆದರೆ ರಾಜ್ಯ ತನ್ನದಲ್ಲ. ಅದು ಅಣ್ಣ ರಾಮನದೇ ಎಂಬ ಭಾವನೆ ಅವನಲ್ಲಿ ದೃಢವಾಗಿತ್ತು. ರಾಜ್ಯದ ಯಾವ ಕರ್ತವ್ಯವನ್ನೂ ಅವನು ಬಿಡಲಿಲ್ಲ. ರಾಮಪಾದುಕೆಗಳಿಗೆ ವಿಧೇಯನಾಗಿದ್ದುಕೊಂಡೇ ಸ್ವತಂತ್ರದಲ್ಲಿ ರಾಜ್ಯ ಶಾಸನವನ್ನು ನೋಡಿಕೊಂಡ. ಆದ್ದರಿಂದ ಭರತನೇ ಶ್ರೇಷ್ಠಯೋಗಿ ಎಂಬುದು ಡಿವಿಜಿ ಅವರ ನಿಶ್ಚಿತಾಭಿಪ್ರಾಯ. ಅದೇ ಆದರ್ಶವನ್ನು ಪಾಲಿಸಿ ಬದುಕಿದ ಡಿವಿಜಿ ಸ್ವಯಂ ಯೋಗಿವರ್ಯನಂತೆಯೇ ಬಾಳಿದರು.



'ನಿತ್ಯೋತ್ಸವ'ದ ನಿಸಾರ್ ಅಹಮದ್

ಇಂದು ಖ್ಯಾತ ಕವಿ ನಾಡೋಜ ಕೆ.ಎಸ್.ನಿಸಾರ್ ಅಹಮದ್ ಅವರ ಜನ್ಮದಿನ. ತನ್ನಿಮಿತ್ತ ಲೇಖನ.

ನಾನು ಯಾವುದೇ ಪಂಥಕ್ಕೆ ಬಂಧಿಯಾಗಿಲ್ಲ. ಆ ಪಂಥಗಳನ್ನೆಲ್ಲಾ ಹಾಯ್ದು ಬಂದಿದ್ದೀನಿ. ನನಗೆ ಈ ಪಂಥಗಳು, ಇಸಂಗಳು, ಮಾರ್ಗಗಳು ಇವೊಂದು ರೀತಿ ವಾಹಕಗಳಿದ್ದ ಹಾಗೆ. ಪ್ರಣಾಳಿಕೆಗಳಿದ್ದ ಹಾಗೆ. ನದಿಯ ಪಾತ್ರ ಇದ್ದ ಹಾಗೆ ಅಷ್ಟೇನೆ. ಸತ್ಯ ಮಾತ್ರ ಒಂದೇ. ಕಾವ್ಯತ್ವ ಇಲ್ಲದ ಯಾವುದೇ ಪಂಥ ವ್ಯರ್ಥ. ಅವುಗಳ ಹಿಂದೆ ಇರುವ ಸೃಜನಶೀಲ ಸಂವೇದನೆ ಬಹಳ ಮುಖ್ಯ ಅಂಥ ನಂಬಿರುವವನು ನಾನು. ಕಾವ್ಯ ಅನುಭವದ ಪರಿಧಿಯೊಳಗೇ ಬರಬೇಕು. ಇಂದ್ರಿಯಾನುಭವಗಳು ಕಲಾತ್ಮಕ ಸ್ವರೂಪವನ್ನು ಪಡೆದು ಕಾವ್ಯದಲ್ಲಿ ಬರಲೇಬೇಕು. ಅನುಭವ, ಲೋಕಾನುಭವ, ಭಾವವಾಗಿ ಪರಿವರ್ತಿತವಾಗಿ ಕಾವ್ಯವಾಗಬೇಕು. ಲೌಕಿಕ ಅನುಭವ ಯಾವಾಗ ಫಲಾನುಭವ ಆಗುತ್ತೋ ಆಗ ಭಾವ ಅಂತ ಕರಿತೀವಿ. ಆ ಭಾವ ಸ್ಪರ್ಶ ಇಲ್ಲದಿದ್ರೆ ಕಾವ್ಯವಾಗೋಲ್ಲ...

ಇದು ನಿತ್ಯೋತ್ಸವ ಖ್ಯಾತಿಯ ಕವಿ ಪ್ರೊ. ಕೆ.ಎಸ್.ನಿಸಾರ್ ಅಹಮದ್‌ರವರು 2006ರಲ್ಲಿ ಶಿವಮೊಗ್ಗದಲ್ಲಿ ನಡೆದ 73ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದ ಸಂದರ್ಭದಲ್ಲಿ ಹೇಳಿದ್ದ ಮಾತುಗಳು. ಇವು ಬರೀ ಮಾತುಗಳಷ್ಟೇ ಅಲ್ಲದೆ ಇಲ್ಲಿನ ಪ್ರತಿಯೊಂದು ಅಕ್ಷರಗಳೂ ಕವಿ ನಿಸಾರರ ಸಾರ್ಥಕ ಬದುಕು ಮತ್ತು ಸಶಕ್ತ ಬರಹಕ್ಕೆ ಹಿಡಿದ ಕನ್ನಡಿಯೂ ಹೌದು. ಅದೇ ಸಂದರ್ಭದಲ್ಲಿ "ಕನ್ನಡದಲ್ಲಲ್ಲದೆ ಬೇರೆ ಇನ್ನಾವ ಭಾಷೆಯಲ್ಲಿ ಬರೆದಿದ್ರೂ ಕೂಡ ಇಂಥ ಒಂದು ಶ್ರೇಷ್ಠ ಮಾನ್ಯತೆ ಸಿಗುತ್ತಿರಲಿಲ್ಲ' ಎಂದು ಅಭಿಮಾನ ಮೆರೆದಿದ್ದರು. ಕನ್ನಡ ನಾಡಿನಲ್ಲಿ ಹುಟ್ಟಿದ್ದಕ್ಕೆ, ಕನ್ನಡ ಭಾಷೆಯಲ್ಲಿ ಬರೆದಿದ್ದಕ್ಕೆ ತಾವು ಧನ್ಯರೆಂದು ಕೊಂಡರೆ ಇಡೀ ಕನ್ನಡನಾಡು ಇಂಥ ಕವಿಯನ್ನು ಪಡೆದಿರುವುದಕ್ಕೆ ಸಾರ್ಥಕಭಾವ ಹೊಂದಿದೆ. ಇವರು ಯಾವುದೇ ಜಾತಿಯ ಕವಿಯಲ್ಲ, ಯಾವುದೇ ಧರ್ಮದ ಕವಿಯಲ್ಲ, ಪಂಥವಂತೂ ಇಲ್ಲವೇ ಇಲ್ಲ. ಇದನ್ನು ಇವರ ಬದುಕಿನ ರೀತಿ, ಬರಹದ ನೀತಿಯೇ ಹೇಳುತ್ತದೆ.

"ಜೋಗದ ಸಿರಿ ಬೆಳಕಿನಲ್ಲಿ । ತುಂಗೆಯ ತೆನೆ ಬಳುಕಿನಲ್ಲಿ । ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ । ನಿತ್ಯಹರಿದ್ವರ್ಣವನದ ತೇಗ ಗಂಧ ತರುಗಳಲ್ಲಿ । ನಿತ್ಯೋತ್ಸವ ತಾಯಿ, ನಿತ್ಯೋತ್ಸವ ನಿನಗೆ ...." ಎಂದು ತಾಯಿ ಭುವನೇಶ್ವರಿಯನ್ನು ಹಾಡಿ ಹೊಗಳಿದ ಕವಿ ನಿಸಾರ್ ಅಹಮದ್‌ರ ಇದೊಂದು ಕವಿತೆಯೇ ಸಾಕು ಅವರು ಎಂಥಾ ಅದ್ಭುತ ಕವಿ ಎನ್ನುವುದಕ್ಕೆ. ರಸಋಷಿ ಕವಿ ಕುವೆಂಪು ಅವರ "ಜಯ ಭಾರತ ಜನನಿಯ ತನುಜಾತೆ ಜಯಹೇ ಕರ್ಣಾಟಕ ಮಾತೆ......" ಗೀತೆಯಷ್ಟೇ ನಿಸಾರರ ಜೋಗದ ಸಿರಿ ಗೀತೆ ಕನ್ನಡ ಕಾವ್ಯ ಜಗತ್ತಿನಲ್ಲಿ, ಗೀತ ಪ್ರಪಂಚದಲ್ಲಿ ಜನಪ್ರಿಯತೆ ಗಳಿಸಿದೆ. ಈ ಗೀತೆ ಗೊತ್ತಿಲ್ಲದವರು ಬಹಳ ವಿರಳ. ಅಂಥಾ ಅದ್ಭುತ ಗೀತೆ ಇದು. ಅಂದಹಾಗೆ ನಿಸಾರರು ಬಾಲ್ಯದಿಂದಲೂ ಹೆಚ್ಚು ಕುವೆಂಪು ಅವರಿಂದ ಪ್ರಭಾವಿತರಾದವರು. ಇವರಷ್ಟು ಕುವೆಂಪು ಅವರನ್ನು ಓದಿಕೊಂಡವರು ಬಹಳ ಅಪರೂಪ. ಹಾಗಾಗಿ ಇವರು ದೇವನಹಳ್ಳಿಯಲ್ಲಿ ಜನಿಸಿ ಬೆಂಗಳೂರಿನಲ್ಲಿ ಬೆಳೆದರೂ ಇವರ ಬರಹಗಳಲ್ಲಿ ಮಲೆನಾಡಿನ ಪ್ರಕೃತಿಯ ದಟ್ಟ ಛಾಯೆ ತುಂಬಿ ತುಳುಕುತ್ತದೆ. ಇದು ಇವರು ಕುವೆಂಪು ಅವರಿಂದ ಪಡೆದುಕೊಂಡ ಬಳುವಳಿ. ಆದ್ದರಿಂದಲೇ ಇವರು ಇನ್ನೂ ಪ್ರೌಢಶಾಲೆಯಲ್ಲಿದ್ದಾಗಲೇ ಜಲಪಾತವನ್ನೇ ನೋಡದೆ ಜಲಪಾತ ಕವಿತೆ ಬರೆದಿದ್ದರು. ಇದು ನಿಸಾರರ ಮೊದಲ ಕವಿತೆಯೂ ಹೌದು. ಅಂದಹಾಗೆ ಅವರಿಗೆ ಓದಿನ ಗೀಳು ಹಚ್ಚಿದ್ದು ತಂದೆ ಕೆ.ಎಸ್.ಹೈದರ್. ಶಿಸ್ತು ಬೆಳೆಸಿದ್ದು ತಾಯಿ ಹಮೀದಾ ಬೇಗಂ.

ಹಾಗೆಯೇ ನಿಸಾರರ ಕುರಿಗಳು ಸಾರ್ ಕುರಿಗಳು ಯಾರಿಗೆ ತಾನೆ ಗೊತ್ತಿಲ್ಲ? ಗೊತ್ತಿಲ್ಲವೆಂದರೆ ಕುರಿಗಳೆನಿಸಿಕೊಳ್ಳಬೇಕಾದೀತು. ಮೌಢ್ಯವನ್ನು ಅಣಕಿಸುವ ಬಹು ವಿಡಂಬನಾತ್ಮಕ ಕವಿತೆಯಿದು. ನಿಸಾರ್‌ಗೆ ಹೆಚ್ಚು ಹೆಸರನ್ನು ತಂದಿತ್ತದ್ದೂ ಈ ಕುರಿಗಳೇ! ಈ ಕವಿತೆ ಆ ಕಾಲದಲ್ಲೇ ಎಷ್ಟೊಂದು ಸುದ್ದಿ ಮಾಡಿತ್ತೆಂದರೆ ಖ್ಯಾತ ಸಮಾಜವಾದಿ ನಾಯಕ ಶಾಂತವೇರಿ ಗೋಪಾಲ ಗೌಡರು ಇಡೀ ಕವಿತೆಯನ್ನು ಅಂದಿನ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಅವರ ಎದುರು ವಿಧಾನಸಭೆಯಲ್ಲಿ ಓದಿ ಗಮನ ಸೆಳೆದಿದ್ದರು. ಅಷ್ಟೇ ಅಲ್ಲ, ಈ ಕವಿತೆಯ ಜನಪ್ರಿಯತೆ ಹಾಗೆಯೇ ಮುಂದುವರೆದುಕೊಂಡು ಬಂದಿದ್ದು ಇದರ ಪ್ರಭಾವದಿಂದಲೇ 'ಕುರಿಗಳು ಸಾರ್ ಕುರಿಗಳು' ಹೆಸರಿನ ಚಲನಚಿತ್ರವೂ ನಮ್ಮಲ್ಲಿ ಬಂದಿದೆ ಎಂದರೆ ನಿಸಾರರ ಕುರಿಗಳ ಮಹಿಮೆ ಎಂಥವರಿಗೂ ಅರಿವಾದೀತು!

> **"** ಬಹುಮುಖ್ಯವಾಗಿ ನಾಡಭಕ್ತಿಗೆ, ದೇಶಭಕ್ತಿಗೆ, ಮಾನವೀಯತೆಗೆ, ಭಾವೈಕ್ಯತೆಗೆ, ನಿಸರ್ಗ ಪ್ರೇಮಕ್ಕೆ, ಸಾಮಾಜಿಕ ಕಾಳಜಿಗೆ, ಜನಪರ ಕಳಕಳಿಗೆ ಸಾಕ್ಷಿಯಂತಿರುವ ನಿಸಾರರ ಬಹುತೇಕ ಕವಿತೆಗಳು ಚಿಕಿತ್ಸಕ ಗುಣವುಳ್ಳ ಸದ್ಭಾವಗೀತೆಗಳಾಗಿವೆ. ಈ ದಿಶೆಯಲ್ಲಿ ಅವರ 'ನಾಡದೇವಿಯೆ' ಕವಿತೆಯೇ ಒಂದು ವಿಶಿಷ್ಟ ಬಗೆಯದು. "ಒಂದೆದೆಯ ಹಾಲ ಕುಡಿದವರ ನಡುವೆ ಎಷ್ಟೊಂದು ಭೇದ ತಾಯಿ ..." ಎನ್ನುವ ಸಾಲೊಂದೇ ಸಹಸ್ರ ಸಹಸ್ರ ಹೃದಯಗಳನ್ನೂ ಒಮ್ಮೆಗೇ ತಾಕಬಲ್ಲದು. ಈ ಕವಿತೆ ಸಿ.ಅಶ್ವಥ್ ಅವರ ಕಂಠಸಿರಿಯಲ್ಲಿ ತೇಲಿ ಬಂದಿರುವ ಪರಿಯಂತೂ ರೋಮಾಂಚನವಾಗುತ್ತದೆ.


ಅಂತೆಯೇ ಎಲ್ಲರ ಮೆಚ್ಚಿನ ಗೀತೆಯಾಗಿ ಅದರಲ್ಲೂ ವಿಶೇಷವಾಗಿ ದೇಶ ವಿದೇಶಗಳ ಆಸ್ತಿಕ ಬಂಧುಗಳ ನಾಲಿಗೆಯಲ್ಲಿ ಭಕ್ತಿಗೀತೆಯಾಗಿ ಹರಿದಾಡುತ್ತಿರುವ ನಿಸಾರರ "ಬೆಣ್ಣೆ ಕದ್ದ ನಮ್ಮ ಕೃಷ್ಣ ಬೆಣ್ಣೆ ಕದ್ದನಮ್ಮ..." ಪದ್ಯವಂತೂ ಜನಮಾನಸದಲ್ಲಿ ಎಂದೂ ಮರೆಯದ ಮಧುರ ಗೀತೆಯಾಗಿ ಅಚ್ಚೊತ್ತಿಬಿಟ್ಟಿದೆ. ಒಂದು ಕಾಲದಲ್ಲಿ ಸಾರ್ವಜನಿಕ ವೇದಿಕೆಗಳಲ್ಲಿ ತಮ್ಮ ವಾದ್ಯಗೋಷ್ಠಿಯ ಮೂಲಕ ಇಂತಹ ಹಾಡುಗಳನ್ನು ಹೆಚ್ಚು ಹೆಚ್ಚು ಹಾಡುತ್ತಿದ್ದ ಗಾಯಕ ಮೈಸೂರು ಅನಂತಸ್ವಾಮಿ ಅವರಿಗಾಗಿ ನಿಸಾರ್ ಅವರು ರಚಿಸಿಕೊಟ್ಟ ಹಾಡಿದು. ಹಿಂದೋಳದಲ್ಲಿ ರಾಗ ಸಂಯೋಜಿಸಿ ಈ ಹಾಡಿಗೆ ಹೊಸ ದನಿಯನ್ನು ಅನಂತಸ್ವಾಮಿ ನೀಡಿದಾಗ ಆ ಕಾಲಕ್ಕೆ ಈ ಹಾಡು ಯಾವ ಮಟ್ಟಕ್ಕೆ ಪ್ರಸಿದ್ಧಿಯ ಶಿಖರ ಏರಿತ್ತೆಂದರೆ ಸ್ವತಃ ಇದನ್ನು ಬರೆದ ನಿಸಾರ್ ಅವರಾಗಲಿ, ಸಂಗೀತ ಸಂಯೋಜಿಸಿದ ಅನಂತಸ್ವಾಮಿ ಅವರಾಗಲಿ ಆ ಮಟ್ಟದ ಯಶಸ್ಸನ್ನು ನಿರೀಕ್ಷಿಸಿಯೇ ಇರಲಿಲ್ಲ. ಅಂಥ ಅದ್ಭುತ ಗೀತೆ ನಿಸಾರರ 'ಬೆಣ್ಣೆ ಕದ್ದ ನಮ್ಮ ಕೃಷ್ಣ ಬೆಣ್ಣೆ ಕದ್ದನಮ್ಮ'.

ಹೀಗೆ ಅನೇಕ ಅಪೂರ್ವ, ಅತ್ಯಪೂರ್ವ ಗೀತೆಗಳನ್ನು ಕನ್ನಡಕ್ಕೆ ಕೊಟ್ಟು ಚಿರಂಜೀವಿಯಾಗಿರುವ ಜನಾದರಣೀಯ ಮಹತ್ವದ ಕವಿ ಪ್ರೊ. ನಿಸಾರ್ ಅಹಮದ್. ಅಷ್ಟೇ ಅಲ್ಲ, ತಮ್ಮ ಕಾವ್ಯ ಕೃಷಿಯಲ್ಲಿ ಕನ್ನಡ, ಸಂಸ್ಕೃತ, ಇಂಗ್ಲೀಷ್, ಉರ್ದು, ಪರ್ಷಿಯನ್ ಭಾಷೆಗಳ ಸಮ್ಮಿಶ್ರಣದ ಅಪೂರ್ವವೂ, ಅನನ್ಯವೂ ಆದ ನೂತನ ಪ್ರಯೋಗದೊಂದಿಗೆ ಕನ್ನಡ ಭಾಷೆಗೊಂದು, ಕನ್ನಡ ಸಾಹಿತ್ಯಕ್ಕೊಂದು ಹೊಸ ಮೆರುಗು ತಂದವರು.

ಹಾಗೆಯೇ ತಮ್ಮ 'ನಿತ್ಯೋತ್ಸವ' ಗೀತ ಸಂಕಲನದ ಮೂಲಕ ಚಲನಚಿತ್ರ ಗೀತೆಗಳಂತೆಯೇ ಭಾವಗೀತೆಗಳೂ ಧ್ವನಿ ಸುರುಳಿಯಲ್ಲಿ ಸ್ವರಗೈದು ಕೇಳುಗರ ಹೃದಯ ತಟ್ಟಬಲ್ಲವೆಂಬುದನ್ನು ತೋರಿಸಿಕೊಟ್ಟವರು. ಕ್ಯಾಸೆಟ್ ಲೋಕದಲ್ಲೊಂದು ಕ್ರಾಂತಿಯನ್ನೇ ಮಾಡಿದ ನಿಸಾರರ 'ನಿತ್ಯೋತ್ಸವ' (1978) ಈ ದಿಸೆಯಲ್ಲಿ ಮೊಟ್ಟ ಮೊದಲ ಪ್ರಯೋಗವಾಗಿ ಯಶಸ್ವಿಯೂ ಆಗಿರುವುದು ಈಗ ಇತಿಹಾಸ. ಕನ್ನಡದ ಮೊದಲ ಸುಗಮ ಸಂಗೀತದ ಧ್ವನಿಸುರುಳಿ ಎಂಬ ಖ್ಯಾತಿ ಹೊಂದಿರುವ 'ನಿತ್ಯೋತ್ಸವ' ಕವನ ಸಂಕಲನ ಕೂಡ ಇದುವರೆಗೆ 35ಕ್ಕೂ ಹೆಚ್ಚು ಆವೃತ್ತಿಯಲ್ಲಿ ಮುದ್ರಣ ಕಂಡಿದ್ದು ಸಾರಸ್ವತ ಲೋಕದಲ್ಲೊಂದು ದಾಖಲೆ ಬರೆದಿದೆ.

ಸಾಹಿತ್ಯದ ಮೂಲಕ ಕನ್ನಡವನ್ನು ಮೇರು ಸದೃಶವಾಗಿ ಮೆರೆಸಿರುವ ಇಂಥ ಮೇರುಕವಿ, ಸಾಹಿತಿ, ವಿಮರ್ಶಕ, ಸಂಪಾದಕ, ಅನುವಾದಕ, ಪ್ರಾಧ್ಯಾಪಕ, ನಾಡೋಜ ಕೆ.ಎಸ್.ನಿಸಾರ್ ಅಹಮದ್ ಜನಿಸಿದ್ದು ಮುಸ್ಲಿಂ ಮನೆತನದಲ್ಲಿ. ಮನೆ ಮಾತು ಉರ್ದು. ಕನ್ನಡ ಸರ್ವಸ್ವ ಜನನ 1936 ಫೆಬ್ರವರಿ 5. ಜನ್ಮಸ್ಥಳ ಬೆಂಗಳೂರು ಜಿಲ್ಲೆಯ ದೇವನಹಳ್ಳಿ. ತಂದೆ ಕೊಕ್ಕರೆ ಹೊಸಹಳ್ಳಿಯ ಶೇಖ್ ಹೈದರ್. ಹಳೆಯ ಮೈಸೂರು ಸಂಸ್ಥಾನದಲ್ಲಿ ಕಂದಾಯಾಧಿಕಾರಿಯಾಗಿದ್ದವರು. ತಾಯಿ ಹಮೀದಾಬೇಗಂ. ಮಡದಿ ಷಾನವಾಜ್‌ಬೇಗಂ. ಗೃಹ ವಿಜ್ಞಾನ ಪದವೀಧರೆ, ಶಾಲಾ ಮುಖ್ಯೋಪಾಧ್ಯಾಯಿನಿಯಾಗಿ ಸೇವೆ ಸಲ್ಲಿಸಿದ್ದಾರೆ. ಮಕ್ಕಳು ನವೀದ್ ನಿಸಾರ್, ಘಮೀದ್ ನಿಸಾರ್, ತನ್ವೀರ್ ಫಾತಿಮಾ ನಿಸಾರ್, ಪರ್ವೀನ್ ಫಾತಿಮಾ ನಿಸಾರ್. ಇದು ನಿಸಾರ್ ಅಹಮದ್ ಕುಟುಂಬ. ವಾಸವಾಗಿದ್ದದ್ದು ಬೆಂಗಳೂರು. ಮನೆಯ ಹೆಸರು 'ಹಮೀದಾ ಹೈದರ್'. ಇದರಲ್ಲಿ ನಿಸಾರರ ತಾಯಿ–ತಂದೆಯರಿಬ್ಬರ ಹೆಸರೂ ಉಂಟು. ತಾಯಿ–ತಂದೆಯರೆಂದರೆ ನಿಸಾರರಿಗೆ ಅಷ್ಟು ಪ್ರೀತಿ, ಅಷ್ಟೇ ಭಕ್ತಿ. ಅದರ ಸಂಕೇತವೇ 'ಹಮೀದಾ ಹೈದರ್ ನಿಲಯ'. ಹೆತ್ತವರ ಮಾರ್ಗದರ್ಶನದಲ್ಲೇ ಬದುಕನ್ನು ಕಟ್ಟಿಕೊಂಡವರು ನಿಸಾರ್. 1959ರಲ್ಲಿ ಭೂವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ. ನಂತರ ಸರ್ಕಾರಿ ಕಾಲೇಜಿಗೆ ಅಧ್ಯಾಪಕರಾಗಿ ಸೇರ್ಪಡೆ. ಶಿವಮೊಗ್ಗ ಮತ್ತು ಬೆಂಗಳೂರು ಕಾಲೇಜುಗಳಲ್ಲಿ ಸೇವೆ. ವಿದ್ಯಾರ್ಥಿಗಳ ಪ್ರೀತಿಯ ಮೇಷ್ಟ್ರಾಗಿದ್ದರಿಂದ ಅಪಾರ ಶಿಷ್ಯ ಪಡೆ. ಭೂಗರ್ಭ ಶಾಸ್ತ್ರದ ಬೋಧನೆಯ ನಡುನಡುವೆಯೇ ಸಾಹಿತ್ಯ ಲೋಕದತ್ತ ನಡೆ. ಆನೆ ನಡೆದದ್ದೇ ಹಾದಿ ಎಂಬಂತೆ ಕನ್ನಡ ಸಾರಸ್ವತ ಲೋಕದಲ್ಲಿ ತಮ್ಮ ಕೃತಿಗಳ ಮೂಲಕ ತಾವೇ ಒಂದು ಹೆದ್ದಾರಿಯಾಗಿ ಬೆಳೆದ ನಿಸಾರ್ ಅಹಮದ್ ನಿಜಕ್ಕೂ ಕನ್ನಡದ ಭಾಗ್ಯವೇ ಸರಿ!

ಎಲ್ಲಾ ರೀತಿಯ ಪ್ರಶಸ್ತಿ–ಪುರಸ್ಕಾರ, ಗೌರವ–ಸನ್ಮಾನಗಳಿಗೂ ಅರ್ಹರಾಗಿ ಕನ್ನಡ ಸಾರಸ್ವತ ಲೋಕದಲ್ಲಿ ಹಿಮಾಲಯ ಸದೃಶವಾಗಿ ಬೆಳೆದಿದ್ದ ನಿಸಾರ್ ಅಹಮದ್ ಅವರು 2020 ಮೇ 3ರಂದು ನಮ್ಮನ್ನು ಅಗಲಿದ್ದರೂ ಅಜರಾಮರರಾಗುಳಿದಿದ್ದಾರೆ. ಸಮಸ್ತ ಕನ್ನಡಿಗರ ಭಾವಕೋಶದಲ್ಲಿ ಎಂದಿಗೂ ಮರೆಯಾಗದ ಮಹೋನ್ನತ ಕವಿಯಾಗಿ ನಿಸಾರ್ ಸದಾ ಚಿರಂಜೀವಿ.



ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ
ಬುಧವಾರ 5 ಫೆಬ್ರವರಿ 2025

'ಕ್ರೀಡಾ ಮಿತ್ರ'

ದೇಸಿ ಆಟಗಳಲ್ಲಿ ಜೆಎಸ್‌ಎಸ್ ಪ್ರೌಢಶಾಲೆ, ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಬಹುಮಾನ




ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆ ಹಾಗೂ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳಿಗೆ ಬಹುಮಾನ ಲಭಿಸಿರುವುದು.

ಸುತ್ತೂರು, ಫೆ. 4– ಸುತ್ತೂರು ಶ್ರೀ ಕ್ಷೇತ್ರದಲ್ಲಿ ನಡೆದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದಲ್ಲಿ ಏರ್ಪಡಿಸಿದ್ದ ದೇಸಿಯ ಆಟಗಳಲ್ಲಿ ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆ, ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳು ಭಾಗವಹಿಸಿ ಬಹುಮಾನಗಳನ್ನು ಪಡೆದಿದ್ದಾರೆ.

ಬಾಲಕರ ವಿಭಾಗ: ದೇಸಿಯ ಆಟವಾದ ಹಗ್ಗಜಗ್ಗಾಟದಲ್ಲಿ ಪ್ರಥಮ ಸ್ಥಾನ. **ಬಾಲಕಿಯರ ವಿಭಾಗ:** ಅಣ್ಣೆಕಲ್ಲು ಆಟದಲ್ಲಿ ಪದ್ಮಾವತಿ ಪ್ರಥಮ ಸ್ಥಾನ, ಆಯುಷ ದ್ವಿತೀಯ ಸ್ಥಾನ ಪಡೆದಿದ್ದಾರೆ. ಪಂಚಿ ಆಟದಲ್ಲಿ ಲಕ್ಷ ದ್ವಿತೀಯ ಸ್ಥಾನ, ಕುಂಟೆಬಿಲ್ಲೆಯಲ್ಲಿ ಪೂರ್ವಿ ತೃತೀಯ ಸ್ಥಾನ ಪಡೆದಿದ್ದಾರೆ.

ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆ

ಬಾಲಕರ ವಿಭಾಗ: ದೇಸಿಯ ಆಟಗಳಾದ ಗೋಲಿ ಆಟದಲ್ಲಿ ಆಕಾಶ್ ಪ್ರಥಮ, ಸಂತೋಷ್ ತೃತೀಯ ಸ್ಥಾನ ಪಡೆದಿದ್ದಾರೆ. ಬುಗುರಿ ಆಟದಲ್ಲಿ ಮನೋಜ್ ಪ್ರಥಮ ಸ್ಥಾನ ಪಡೆದಿದ್ದಾನೆ. ಸಿಂಗಂ ಆಟದಲ್ಲಿ ದಿನೇಶ್ ಪ್ರಥಮ ಸ್ಥಾನ ಪಡೆದಿದ್ದಾನೆ. ಚೌಕಬಾರ ಆಟದಲ್ಲಿ ಬಿಟಾರಾಜ್ ಪ್ರಥಮ, ಪ್ರಜ್ವಲ್ ದ್ವಿತೀಯ ಸ್ಥಾನ ಪಡೆದಿದ್ದಾರೆ. ಪಂಚಿ ಆಟದಲ್ಲಿ ಸಿದ್ದೇಶ್ ಪ್ರಥಮ ಸ್ಥಾನವನ್ನು ಗಳಿಸಿರುತ್ತಾನೆ.

ಬಾಲಕಿಯರ ವಿಭಾಗ: ಸಿಂಗಂ ಆಟದಲ್ಲಿ ಹೆಚ್.ಆರ್. ದೀಪ ಪ್ರಥಮ ಸ್ಥಾನ, ಉಮಾ ತೃತೀಯ ಸ್ಥಾನ ಪಡೆದಿದ್ದಾರೆ. ಕುಂಟೆಬಿಲ್ಲೆ ಆಟದಲ್ಲಿ ಐಶ್ವರ್ಯ ಪ್ರಥಮ ಸ್ಥಾನ ಪಡೆದಿದ್ದಾಳೆ. ಪಂಚಿ ಆಟದಲ್ಲಿ ಧರಣಿ ಪ್ರಥಮ ಸ್ಥಾನ, ತಾಬ್ಲಾ ಆಟದಲ್ಲಿ ಹೇಮಲತ ತೃತೀಯ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.

ಕರಾಟೆಯಲ್ಲಿ ಸಿ.ಎಸ್.ಅನುಷ್‌ಗೆ ಚಿನ್ನದ ಪದಕ

ಮೈಸೂರು, ಫೆ. 4– ತಮಿಳುನಾಡಿನ ಕೊಯಮತ್ತೂರಿನಲ್ಲಿ ಫೆ.2, 2025ರಂದು ನಡೆದ ರಾಷ್ಟ್ರ ಮಟ್ಟದ ಎರಡನೇ ಯುಜಿಕೆಎಫ್‌ಐ ಕರಾಟೆ ಪಂದ್ಯಾವಳಿಯ ಹಿರಿಯರ ವೈಯಕ್ತಿಕ ಕುಮಿತೆ ವಿಭಾಗದಲ್ಲಿ (70 ಕೆಜಿ) ಮೈಸೂರಿನ ಟ್ರಿನಿಟಿ ಕಾಲೇಜಿನ ದ್ವಿತೀಯ ಬಿಬಿಎ ವಿದ್ಯಾರ್ಥಿ ಸಿ.ಎಸ್. ಅನುಷ್ ಚಿನ್ನದ ಪದಕ ಪಡೆದಿದ್ದಾರೆ.

ತಮಿಳುನಾಡಿನ ಗೋಜುರ್‌ಯು ಕರಾಟೆ ಡು ಫೆಡರೇಷನ್ ಆಯೋಜಿಸಿದ್ದ ಕರಾಟೆ ಪಂದ್ಯಾವಳಿಯಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ಮೈಸೂರಿನ ಗೋಜುಕನ್ ಕರಾಟೆ ಸಂಸ್ಥೆಯ ವಿದ್ಯಾರ್ಥಿ ಸಿ.ಎಸ್.ಅನುಷ್ ಈ ವರ್ಷ ಮೇ ತಿಂಗಳಲ್ಲಿ ಶ್ರೀಲಂಕಾದಲ್ಲಿ ನಡೆಯುವ ಅಂತರರಾಷ್ಟ್ರೀಯ ಮಟ್ಟದ ಚಾಂಪಿಯನ್‌ಶಿಪ್‌ಗೆ ಅರ್ಹತೆ ಪಡೆದಿದ್ದಾರೆ.

ಅನುಷ್ ಕೋಚ್ ಸೆನ್ಸಾಯಿ ದೀಪಕ್‌ಕುಮಾರ್ ಹಾಗೂ ಸೆನ್ಸಾಯಿ ಎಸ್.ರೋಹಿತ್ ಅವರಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಈತ ಮೈಸೂರಿನ ಲಲಿತಾದ್ರಿಪುರ ನಿವಾಸಿ ಸಿ.ಜಿ. ಶಿವಶಂಕರ್ ಮತ್ತು ಶೀಲಾ ದಂಪತಿ ಪುತ್ರ.



ಸಿ.ಎಸ್.ಅನುಷ್, ಮೇ ತಿಂಗಳಲ್ಲಿ ಶ್ರೀಲಂಕಾದಲ್ಲಿ ನಡೆಯುವ ಅಂತರರಾಷ್ಟ್ರೀಯ ಮಟ್ಟದ ಕರಾಟೆ ಚಾಂಪಿಯನ್‌ಶಿಪ್‌ಗೆ ಅರ್ಹತೆ ಪಡೆದಿದ್ದಾರೆ.

ಶೂಟಿಂಗ್ ಸ್ಪರ್ಧೆಗಳಲ್ಲಿ ಬಹುಮಾನ



ಶೂಟಿಂಗ್ ಸ್ಪರ್ಧೆಗಳಲ್ಲಿ ಜೈ ಚಾಮುಂಡಿ ಟಾರ್ಗೆಟ್ ಶೂಟಿಂಗ್ ಅಕಾಡೆಮಿಯ ಶೂಟರ್‌ಗಳು 24 ಪದಕಗಳನ್ನು ಗೆದ್ದಿದ್ದಾರೆ.

ಮೈಸೂರು, ಫೆ.4–ಇತ್ತೀಚೆಗೆ ನಡೆದ ಶೂಟಿಂಗ್ ಸ್ಪರ್ಧೆಗಳಲ್ಲಿ ಮೈಸೂರಿನ ವಿಜಯನಗರ ಮೊದಲ ಹಂತದಲ್ಲಿರುವ ಜೈ ಚಾಮುಂಡಿ ಟಾರ್ಗೆಟ್ ಶೂಟಿಂಗ್ ಅಕಾಡೆಮಿಯ ಶೂಟರ್‌ಗಳು 24 ಪದಕಗಳನ್ನು ಗೆದ್ದಿದ್ದಾರೆ.

ತುಮಕೂರು ದಸರಾ ಶೂಟಿಂಗ್ ಚಾಂಪಿಯನ್‌ಶಿಪ್–7 ಚಿನ್ನದ ಪದಕಗಳು; ದಕ್ಷಿಣ ವಲಯ ಶೂಟಿಂಗ್ ಚಾಂಪಿಯನ್‌ಶಿಪ್–1 ಚಿನ್ನದ ಪದಕ, 3 ಶೂಟರ್‌ಗಳು ರಾಷ್ಟ್ರೀಯ ಅರ್ಹತೆ ಪಡೆದಿದ್ದಾರೆ; ರಾಜ್ಯ ಮಟ್ಟದ ಶೂಟಿಂಗ್ ಚಾಂಪಿಯನ್‌ಶಿಪ್–4 ಚಿನ್ನದ ಪದಕಗಳು, 1 ಬೆಳ್ಳಿ ಪದಕ, 7 ಕಂಚಿನ ಪದಕಗಳು.

ಏರ್ ಪಿಸ್ತೂಲ್: ಎಂ.ಎನ್. ಮಹೇಶ್, ಡಿ.ಚಿರಾಂತ್, ಕಾರ್ನಿಕ್ ಶಿವದಾಸ್, ರೋಹಿತ್ ಜೆವೂರ್, ಹೆಚ್. ಕೌಶಿಕ್, ಜಿ. ಸಂತೋಷ್ ಕುಮಾರ್, ಸಿ. ಪ್ರಮೋದ್ ಕುಮಾರ್, ನಿಹಾರಿಕಾ ಎಸ್. ಜಾದವ್.

ಏರ್ ರೈಫಲ್: ಪ್ರೀತಮ್ ಜೆವೂರ್, ಪ್ರೇಮ್, ಲಿಯೋಂಕ್ ಆರ್.ಗೌಡ, ನರೇನ್ ಅಯ್ಯಪ್ಪ, ಅನುಶ್ರೀ ಜಕ್ಕನಟ್ಟಿ,

ಓಪನ್ ಸೈಟ್ ರೈಫಲ್: ಕ್ರಾಂತಿ ಕುಮಾರ್ ನಾಟೇಕರ್, ರುಶಾಂಕ್ ಆರ್.ಭಟ್, ಎಸ್.ಮಂಜುನಾಥ್, ಆರ್.ಪಿ. ಜ್ಯೇಷ್ಟ, ಎಂ.ಸಿ.ದರ್ಶನ್, ಸಮರ್ಥ್ ಅನಿಲ್, ಅರ್ನವ್ ಎ.ಶರ್ಮ, ರಿಷಿ ರಾಜ್ ಶಾ ಮತ್ತು ಎಂ.ಎಸ್.ಕೃಷ್ಣಾ.

ಬಾಂಗ್ಲಾ ಪ್ರೀಮಿಯರ್ ಲೀಗ್‌ನ ವೇತನಕ್ಕೆ ಆಟಗಾರರ ಕಿಟ್ ಒತ್ತೆ ಇಟ್ಟುಕೊಂಡ ಬಸ್ ಚಾಲಕ

ಢಾಕಾ: ಬಾಂಗ್ಲಾದೇಶ ಪ್ರೀಮಿಯರ್ ಲೀಗ್ (ಬಿಪಿಎಲ್) ಫ್ರಾಂಚೈಸ್ ದುರ್ಬಾರ್ ರಾಜಶಾಹಿ ತನ್ನ ಆಟಗಾರರು ಮತ್ತು ಸಿಬ್ಬಂದಿಗೆ ವೇತನ ನೀಡಲು ವಿಫಲವಾದ ಕಾರಣ ಇತ್ತೀಚೆಗೆ ಸುದ್ದಿಯಲ್ಲಿದೆ. ಭಾನುವಾರ, ತಂಡದ ಬಸ್ ಚಾಲಕ ಮೊಹಮ್ಮದ್ ಬಾಬುಲ್ ಆಟಗಾರರ ಕಿಟ್‌ಗಳನ್ನು ತಂಡದ ಬಸ್‌ನಲ್ಲಿ ಲಾಕ್ ಮಾಡಿ, ತಮ್ಮ ಬಾಕಿ ವೇತನವನ್ನು ಪಾವತಿಸುವವರೆಗೆ ಅವುಗಳನ್ನು ಹಿಂತಿರುಗಿಸುವುದಿಲ್ಲ ಎಂದು ಹೇಳಿದಾಗ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತ್ತು. ಇದು ವಿಷಾದ ಮತ್ತು ನಾಚಿಕೆಯ ವಿಷಯ ಎಂದು ಬಸ್ ಚಾಲಕ ಬಾಬುಲ್ ತಂಡದ ಹೋಟೆಲ್‌ನ ಹೊರಗೆ ಸುದ್ದಿಗಾರರಿಗೆ ತಿಳಿಸಿದರು. ಅವರು ನಮಗೆ ಹಣವನ್ನು ಪಾವತಿಸಿದ್ದರೆ, ನಾವು ಕಿಟ್ ಬ್ಯಾಗ್ ಅನ್ನು ಆಟಗಾರರಿಗೆ ಹಿಂತಿರುಗಿಸುತ್ತಿದ್ದೇವು. ಇಲ್ಲಿವರೆಗೆ, ನಾನು ನನ್ನ ಬಾಯಿ ತೆರೆದಿಲ್ಲ, ಆದರೆ ಈಗ ನಾನು ಹೇಳುತ್ತಿದ್ದೇನೆ, ಅವರು ನಮ್ಮ ಪಾವತಿಯನ್ನು ನೀಡಿದರೆ ನಾವು ಹೋಗುತ್ತೇವೆ. ಸ್ಥಳೀಯ ಮತ್ತು ವಿದೇಶಿ ಕ್ರಿಕೆಟಿಗರ ಕಿಟ್ ಬ್ಯಾಗ್‌ಗಳು ಬಸ್‌ನಲ್ಲಿವೆ, ಆದರೆ ನಮ್ಮ ಸಂಭಾವನೆಯ ಒಂದು ದೊಡ್ಡ ಭಾಗವನ್ನು ಇನ್ನೂ ಪಾವತಿಸದ ಕಾರಣ ನಾನು ಅವುಗಳನ್ನು ನೀಡಲು ಸಾಧ್ಯವಿಲ್ಲ ಎಂದರು.

ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಬಿಜೆಪಿ ಶಾಸಕ ಕರ್ಶಣ್‌ಭಾಯ್ ಸೋಲಂಕಿ ನಿಧನ



ಗುಜರಾತ್: ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಗುಜರಾತ್ ಬಿಜೆಪಿ ಶಾಸಕ ಕರ್ಶಣ್‌ಭಾಯ್ ಸೋಲಂಕಿ ನಿಧನರಾಗಿದ್ದಾರ. ಅವರಿಗೆ 68 ವರ್ಷ ವಯಸ್ಸಾಗಿತ್ತು.

ಮೆಹ್ಸಾನಾ ಜಿಲ್ಲೆಯ ಕಾಡಿ ವಿಧಾನ ಸಭಾ ಕ್ಷೇತ್ರದ ಶಾಸಕ ಸೋಲಂಕಿ ಅವರು, ಅಹಮದಾಬಾದ್‌ನ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಮೃತರ ಅಂತ್ಯಕ್ರಿಯೆಯನ್ನು ಅವರ ಹುಟ್ಟೂರು ಕಾಡಿ ತಾಲೂಕಿನ ನಾಗರಸನ್‌ನಲ್ಲಿ ಮಧ್ಯಾಹ್ನದ ಬಳಿಕ ನೆರವೇರಿಸಲಾಗುವುದು ಎಂದು ತಿಳಿದುಬಂದಿದೆ. ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಮೀಸಲಾಗಿರುವ ಕಾಡಿ ವಿಧಾನಸಭಾ ಕ್ಷೇತ್ರದಿಂದ 2017 ಹಾಗೂ 2022ರಲ್ಲಿ ಸೋಲಂಕಿ ಗೆಲುವು ಸಾಧಿಸಿದ್ದರು. ಸೋಲಂಕಿ ಅವರ ನಿಧನಕ್ಕೆ ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಸಂತಾಪ ಸೂಚಿಸಿದ್ದಾರೆ.

ಕಾಡಿ ವಿಧಾನಸಭೆಯ ಭಾರತೀಯ ಜನತಾ ಪಕ್ಷದ ಶಾಸಕ ಕರ್ಶಣ್‌ಭಾಯ್ ಸೋಲಂಕಿ ಅವರ ನಿಧನಕ್ಕೆ ಸಂತಾಪಗಳು. ದೇವರು ಅವರ ಆತ್ಮಕ್ಕೆ ಶಾಂತಿ ನೀಡಲಿ. ಅವರ ಕುಟುಂಬಸ್ಥರು ಹಾಗೂ ಬೆಂಬಲಿಗರಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ನೀಡಲಿ' ಎಂದು ಪಟೇಲ್ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕುಂಭಮೇಳ: ಜನರನ್ನು ದಾರಿ ತಪ್ಪಿಸುವ ಮಾಹಿತಿ, 8 ಮಂದಿ ವಿರುದ್ಧ ಎಫ್‌ಐಆರ್

ಪ್ರಯಾಗ್ ರಾಜ್: ಉತ್ತರಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಜನರನ್ನು ದಾರಿತಪ್ಪಿಸುವ ಪೋಸ್ಟ್ ಮಾಡಿದ್ದ ಆರೋಪದ ಮೇಲೆ 8 ಜನರ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಮಹಾ ಕುಂಭಮೇಳ 2025 'ಸಾವಿನ ಹಬ್ಬ' ಎಂದು ಮಾಡಲಾದ X ಪೋಸ್ಟ್‌ವೊಂದರಲ್ಲಿ ಒಂದೇ ಕುಟುಂಬದ ಮೂವರು ಕಾಲ್ತುಳಿತದಲ್ಲಿ ಸಾವನ್ನಪ್ಪಿದ್ದಾರೆ. ಅವರ ಕುಟುಂಬಸ್ಥರು ಶವಾಗಾರದಿಂದ ಮೃತದೇಹವನ್ನು ಪಡೆದು ಭುಜದ ಮೇಲೆ ಹೊತ್ತೊಯ್ದರು ಎಂದು ಬರೆಯಲಾಗಿತ್ತು. ಬಳಿಕ ಪರಿಶೀಲನೆ ನಂತರ ಈ ಪೋಸ್ಟ್‌ನಲ್ಲಿ ಬಳಸಲಾದ ವಿಡಿಯೋ ನೇಪಾಳದ್ದು ಎಂದು ಕಂಡುಬಂದಿದೆ. ಈ ಸಂಬಂಧ 7 ಎಕ್ಸ್ ಖಾತೆದಾರರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದ್ದು, ಕಾನೂನು ಕ್ರಮ ಕೈಗೊಳ್ಳಲಾಗಿದೆ. ಇನ್ನೊಂದು ಪ್ರಕರಣದಲ್ಲಿ, ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡಲಾದ ವಿಡಿಯೋವೊಂದರಲ್ಲಿ ಮೃತದೇಹಗಳು ಮಹಾ ಕುಂಭಮೇಳದ ನದಿಯಲ್ಲಿ ತೇಲುತ್ತಿವೆ. ಮೃತದೇಹಗಳನ್ನು ನದಿಗೆ ಎಸೆಯುವ ಮೊದಲು ಮೂತ್ರಪಿಂಡಗಳನ್ನು ತೆಗೆಯಲಾಗುತ್ತಿದೆ ಎಂದು ತಪ್ಪಾಗಿ ಹೇಳಲಾಗಿದೆ. ಇಂತಹ ತಪ್ಪು ದಾರಿಗೆಳೆಯುವ ವಿಡಿಯೋಗಳು ಉತ್ತರಪ್ರದೇಶ ಸರ್ಕಾರದ ಪ್ರತಿಷ್ಠೆಗೆ ಮಸಿ ಬಳಿಯುವ ಮತ್ತು ಸಾರ್ವಜನಿಕರ ಅಸಮಾಧಾನವನ್ನು ಕೆರಳಿಸುವ ಪ್ರಯತ್ನವಾಗಿದೆ. ಈ ಸಾಮಾಜಿಕ ಮಾಧ್ಯಮ ಖಾತೆದಾರರ ವಿರುದ್ಧ ಕೊತ್ವಾಲಿ ಮಹಾಕುಂಭ ನಗರ ಪೊಲೀಸ್ ಠಾಣೆಯಲ್ಲಿ ಅಧಿಕೃತ ದೂರು ದಾಖಲಿಸಲಾಗಿದೆ.

ಕೆಆರ್ ಆಸ್ಪತ್ರೆ ಸೇರಿದಂತೆ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಿಗೆ ಹೆಚ್ಚುವರಿ ವೆಂಟಿಲೇಟರ್ ಸೌಕರ್ಯ




ಮೈಸೂರು,ಫೆ.4(ಆರ್‌ಕೆ)–ಮೈಸೂರು ನಗರದ ಕೆಆರ್, ಚೆಲುವಾಂಬ, ಟ್ರಾಮಾ ಕೇರ್ ಸೆಂಟರ್, ಪಿಕೆ ಸೂಪರ್ ಸ್ಪೆಷಾಲಿಟಿ, ಜಿಲ್ಲಾಸ್ಪತ್ರೆ ಸೇರಿದಂತೆ ಜಿಲ್ಲೆಯ ಎಲ್ಲಾ ತಾಲೂಕು ಸಾರ್ವಜನಿಕ ಆಸ್ಪತ್ರೆಗಳಿಗೆ ಅಗತ್ಯಕ್ಕನುಗುಣವಾಗಿ ಹೆಚ್ಚುವರಿ ವೆಂಟಿಲೇಟರ್‌ಗಳನ್ನು ಅಳವಡಿಸಲಾಗಿದೆ.

ತೀವ್ರ ನಿಗಾ ಘಟಕ (ಐಸಿಯು), ಐಸಿಸಿಯುಗಳಲ್ಲಿ ದಾಖಲಾಗುವ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಚಿಕಿತ್ಸೆಗೆ ಅಗತ್ಯವಾದ ಜೀವ ರಕ್ಷಕ ವೆಂಟಿಲೇಟರ್‌ಗಳಿಗೆ ಬೇಡಿಕೆಯೂ ಜಾಸ್ತಿಯಾಗುತ್ತಿರುವುದರಿಂದ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಹೆಚ್ಚುವರಿ ವೆಂಟಿಲೇಟರ್‌ಗಳನ್ನು ತರಿಸಿ ಅಳವಡಿಸಿ ಆರೋಗ್ಯ ಸೇವೆ ಒದಗಿಸುತ್ತಿವೆ.

ಈ ಕುರಿತು ಮಾಹಿತಿ ನೀಡಿರುವ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ, ಪ್ರಾಥಮಿಕ ಆರೋಗ್ಯ ಕೇಂದ್ರ (ಪಿಹೆಚ್‌ಸಿ), ಸಮುದಾಯ ಆರೋಗ್ಯ ಕೇಂದ್ರ (ಸಿಹೆಚ್‌ಸಿ), ಹೆರಿಗೆ ಆಸ್ಪತ್ರೆ ಹಾಗೂ ತಾಲೂಕು ಸಾರ್ವಜನಿಕ ಆಸ್ಪತ್ರೆಗಳು ಸೇರಿ ಜಿಲ್ಲೆಯಾದ್ಯಂತ ಒಟ್ಟು 173 ಚಿಕಿತ್ಸಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಎಂದರು.

ಜಿಲ್ಲೆಯ ಎಲ್ಲಾ ತಾಲೂಕು ಜನರಲ್ ಆಸ್ಪತ್ರೆಗಳಲ್ಲಿ 18 ವೆಂಟಿಲೇಟರ್‌ಗಳಿದ್ದು, ಇದೀಗ ಹೆಚ್ಚುವರಿಯಾಗಿ 14 ಯಂತ್ರಗಳನ್ನು ಅಳವಡಿಸಿರುವುದರಿಂದ ಒಟ್ಟು 34 ವೆಂಟಿಲೇಟರ್‌ಗಳ ಮೂಲಕ ಆರೋಗ್ಯದಲ್ಲಿ ತೀವ್ರ ತೊಂದರೆ ಇರುವ ರೋಗಿಗಳನ್ನು ಐಸಿಯುಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಅಂದಾಜು 21 ಲಕ್ಷ ಜನಸಂಖ್ಯೆ ಇರುವ ಮೈಸೂರು ಜಿಲ್ಲಾ ಗ್ರಾಮಾಂತರ ವ್ಯಾಪ್ತಿಯ ಜನರಿಗೆ ಉತ್ತಮ ಚಿಕಿತ್ಸಾ ಸೌಲಭ್ಯ ನೀಡಿ ಜೀವ ರಕ್ಷಿಸುವ ನಿಟ್ಟಿನಲ್ಲಿ ವೆಂಟಿಲೇಟರ್‌ಗಳು ಸಹಕಾರಿಯಾಗಲಿವೆ ಎಂದು ಡಾ. ಕುಮಾರಸ್ವಾಮಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಗರ ವ್ಯಾಪ್ತಿ ಪ್ರದೇಶದಲ್ಲಿ ಸುಮಾರು 15 ಲಕ್ಷ ಜನಸಂಖ್ಯೆಗನುಗುಣವಾಗಿ ಕೆಆರ್ ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ, ಸೂಪರ್ ಸ್ಪೆಷಾಲಿಟಿ, ಟ್ರಾಮಾ ಕೇರ್ ಸೆಂಟರ್, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ 23 ವೆಂಟಿಲೇಟರ್‌ಗಳಿದ್ದು, ಬೇಡಿಕೆ ಜಾಸ್ತಿಯಾದ ಕಾರಣ, ಹೆಚ್ಚುವರಿಯಾಗಿ 14 ಯಂತ್ರಗಳನ್ನು ತರಿಸಿಕೊಳ್ಳಲಾಗಿದ್ದು, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಅಧೀನದಲ್ಲಿರುವ ಆಸ್ಪತ್ರೆಗಳಿಗೆ ಇನ್ನೂ ಹೆಚ್ಚುವರಿ 40 ವೆಂಟಿಲೇಟರ್‌ಗಳು ಅಗತ್ಯವಿದೆ ಎಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿಗಳು ತಿಳಿಸಿದ್ದಾರೆ.

ಚಾಮರಾಜನಗರ ಜಿಲ್ಲೆಯ ಮಲೈ ಮಹದೇಶ್ವರ ಬೆಟ್ಟದಲ್ಲಿ ಮುಂದೆ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಸರ್ಕಾರ ಹೆಚ್ಚುವರಿ ವೆಂಟಿಲೇಟರ್ ಪೂರೈಸಲು ಅನುಮೋದನೆ ನೀಡುವ ಸಾಧ್ಯತೆ ಇದೆ ಎನ್ನಲಾಗಿದ್ದು, ಅದಕ್ಕೆ ಅಗತ್ಯವಿರುವ ಪೂರಕ ಅಂಶಗಳನ್ನೊಳಗೊಂಡ ದಾಖಲೆಗಳೊಂದಿಗೆ ಎಂಎಂಸಿಆರ್‌ಐ ಅಧಿಕಾರಿಗಳು ಪ್ರಸ್ತಾವನೆ ಸಲ್ಲಿಸಿದ್ದಾರೆ ಎನ್ನಲಾಗಿದೆ.

ಮೈಸೂರಿನ ಅಪೋಲೊ ಆಸ್ಪತ್ರೆಯಲ್ಲಿ ಸ್ತನ ಆರೈಕೆ ಕ್ಲಿನಿಕ್ ಆರಂಭ

ಮೈಸೂರು, ಫೆ.4(ಜಿಎ)–ಮೈಸೂರಿನ ಅಪೋಲೊ ಆಸ್ಪತ್ರೆಯಲ್ಲಿ ಮಹಿಳಾ ತಜ್ಞರ ನೇತೃತ್ವದಲ್ಲಿ ಸ್ತನ ಆರೈಕೆ ಕ್ಲಿನಿಕ್ ಆರಂಭಿಸಲಾಗಿದೆ ಎಂದು ಆಸ್ಪತ್ರೆಯ ಮುಖ್ಯಸ್ಥ ಭರತೇಶ್ ರೆಡ್ಡಿ ತಿಳಿಸಿದರು.

ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದಲ್ಲಿ ಕ್ಯಾನ್ಸರ್ ಅನಾರೋಗ್ಯವನ್ನು ಅಧಿಸೂಚಿತ ರೋಗ ಎಂದು ಘೋಷಿಸಬೇಕು. ಈ ರೀತಿ ಮಾಡುವುದರಿಂದಾಗಿ ಪ್ರತಿ ಕ್ಯಾನ್ಸರ್ ಪ್ರಕರಣದ ದಾಖಲೀಕರಣ, ಸಹಾನುಭೂತಿಯ ಆರೈಕೆ ಸಾಧ್ಯ. ಹೀಗಾಗಿ ಈ ನಿಟ್ಟಿನಲ್ಲಿ ಸರ್ಕಾರಕ್ಕೆ ಮನವಿ ಮಾಡಲು ಅಪೋಲೊ ಆಸ್ಪತ್ರೆ ವತಿಯಿಂದ ವಿಶ್ವ ಕ್ಯಾನ್ಸರ್ ದಿನದ ಹಿನ್ನೆಲೆಯಲ್ಲಿ ಡಿಜಿಟಲ್ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದರು.

ಈ ರೀತಿ ಮಾಡಿದಲ್ಲಿ ಕ್ಯಾನ್ಸರ್ ಸಮೀಕ್ಷಾ ಮಾಹಿತಿ ದೊರೆಯುತ್ತದೆ. ಕಡ್ಡಾಯ ವರದಿಯಿಂದಾಗಿ ಕ್ಯಾನ್ಸರ್ ಮಾದರಿಗಳ ನಿಖರ ಅಂಕಿ ಅಂಶ ದೊರೆಯುತ್ತದೆ. ಅಲ್ಲದೆ, ರೋಗಿಗೆ ಪ್ರಾಮುಖ್ಯತೆ ದೊರೆಯತ್ತದೆ. ಜೊತೆಗೆ ರೋಗದ ಮಾದರಿಗಳನ್ನು ಅರ್ಥಮಾಡಿಕೊಳ್ಳಬಹುದಾಗಿದೆ. ಕ್ಯಾನ್ಸರ್ ಪ್ರವೃತ್ತಿಗಳು, ಫಲಿತಾಂಶಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಇದೇ ವೇಳೆ ಅಪೋಲೊ ಕ್ಯಾನ್ಸರ್ ಕೇಂದ್ರಗಳು ಸಮಗ್ರ ಕ್ಯಾನ್ಸರ್ ಆರೈಕೆ ಒದಗಿಸುತ್ತವೆ ಎಂದು ಮಾಹಿತಿ ನೀಡಿದರು.

ನಂತರ ಡಾ.ರಮ್ಯ ಮಾತನಾಡಿ, ಸ್ತನ ಕ್ಯಾನ್ಸರ್ ಮಹಿಳೆ ಹಾಗೂ ಪುರುಷ ಇಬ್ಬರಲ್ಲೂ ಕಂಡು ಬರುತ್ತದೆ. ಸ್ತನದಲ್ಲಿ ನೋವುರಹಿತ ಗಂಟು ಇರುವುದು ಪ್ರಮುಖ ಗುಣಲಕ್ಷಣವಾಗಿದ್ದು, ಭಾರತದಲ್ಲಿ ಶೇ.30ರಷ್ಟು ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಪತ್ತೆಯಾಗುತ್ತಿದೆ. ಹಿಂಜರಿಕೆಯಿಂದ ಬಹುತೇಕರು ಕೊನೆ ಹಂತದಲ್ಲಿ ಚಿಕಿತ್ಸೆಗೆ ಬರುತ್ತಾರೆ. ಅದರ ಬದಲು ಲಕ್ಷಣಗಳು ಪತ್ತೆಯಾದ ತಕ್ಷಣ ವೈದ್ಯರ ಸಲಹೆ ಪಡೆಯುವುದು ಮುಖ್ಯ ಎಂದರು.

ಈ ವೇಳೆ ಡಾ.ಚೈತ್ರಾ, ಡಾ. ಅನಿತಾ, ಡಾ.ಡಿ.ಪರಮೇಶ್ವರ್ ನಾಯಕ್, ಡಾ.ರುಜಿತಾ, ಡಾ.ಹೇಮಾ ಉಪಸ್ಥಿತರಿದ್ದರು.

ದೆಹಲಿ ಸಿಎಂ ಅತಿಶಿಗೆ ಡಬಲ್ ಟ್ರಬಲ್; ಮೊದಲು ಎಫ್‌ಐಆರ್, ಈಗ ಹೈಕೋರ್ಟ್ ನೋಟಿಸ್!



ನವದೆಹಲಿ: ದೆಹಲಿ ವಿಧಾನಸಭಾ ಚುನಾವಣೆ ಮತದಾನಕ್ಕೆ ಒಂದು ದಿನ ಬಾಕಿ ಇರುವಂತೆ ನಿನ್ನೆ ತಡರಾತ್ರಿಯವರೆಗೂ ಕಲ್ಕಾಜಿ ವಿಧಾನಸಭಾ ಕ್ಷೇತ್ರದಲ್ಲಿ ಗದ್ದಲ ಜೋರಾಗಿತ್ತು. ರಾಜಕೀಯ ಪಕ್ಷಗಳು ಪರಸ್ಪರ ಹಿಂಸಾಚಾರ ಮತ್ತು ನಗದು ವಿತರಣೆಯ ಆರೋಪಗಳನ್ನು ಹೊರಿಸಿವೆ. ಈ ಗದ್ದಲದ ನಡುವೆಯೇ, ದೆಹಲಿ ಮುಖ್ಯಮಂತ್ರಿ ಅತಿಶಿ ಗೋವಿಂದಪುರಿ ಪೊಲೀಸ್ ಠಾಣೆಗೆ ತಲುಪಿ ಪೊಲೀಸರಿಗೆ ದೂರು ನೀಡಿದರು. ಅದರಲ್ಲಿ ಬಿಜೆಪಿ ಕಾರ್ಯಕರ್ತರು ದೆಹಲಿಯ ಕೊಳೆಗೇರಿ ಪ್ರದೇಶಗಳ ಜನರಿಗೆ ಬೆದರಿಕೆ ಹಾಕುತ್ತಿದ್ದಾರೆ ಎಂದು ಆರೋಪಿಸಿದರು.

ದೂರು ನೀಡಿದ ನಂತರ ಪೊಲೀಸರು ತಮ್ಮ ಮತ್ತು ಎಎಪಿ ಕಾರ್ಯಕರ್ತರ ವಿರುದ್ಧ ಎರಡು ಪ್ರಕರಣಗಳನ್ನು ದಾಖಲಿಸಿದ್ದಾರೆ ಎಂದು ಅತಿಶಿ ಆರೋಪಿಸಿದ್ದಾರೆ.

ಪೊಲೀಸರ ಪ್ರಕಾರ, ಎರಡೂ ಪ್ರಕರಣಗಳು ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸುವುದು ಮತ್ತು ನೀತಿಸಂಹಿತೆಯ ಉಲ್ಲಂಘನೆಗೆ ಸಂಬಂಧಿಸಿವೆ. ದೆಹಲಿ ಚುನಾವಣಾ ಪ್ರಚಾರದ ಸಮಯ ನಿನ್ನೆ ಕೊನೆಗೊಂಡಿತ್ತು. ಆದರೆ ತಡರಾತ್ರಿವರೆಗೆ, ವಿವಿಧ ಪಕ್ಷಗಳ ಕಾರ್ಯಕರ್ತರು ಅನೇಕ ಸ್ಥಳಗಳಲ್ಲಿ ಪ್ರಚಾರ ನಡೆಸುತ್ತಿರುವುದು ಕಂಡುಬಂದಿತು, ಇದು ಅನೇಕ ಸ್ಥಳಗಳಲ್ಲಿ ಅವ್ಯವಸ್ಥೆಗೂ ಕಾರಣವಾಯಿತು. ಮುಖ್ಯಮಂತ್ರಿ ಅತಿಶಿ ಕ್ಷೇತ್ರ ಕಲ್ಕಾಜಿಯಲ್ಲಿ ಗರಿಷ್ಠ ಗದ್ದಲ ನಡೆಯಿತು. ಈ ಘಟನೆ ನಂತರ, ಗೋವಿಂದಪುರಿ ಪೊಲೀಸ್ ಠಾಣೆಯ ಪೊಲೀಸರು ಅತಿಶಿ ಮತ್ತು ಅವರ ಬೆಂಬಲಿಗರ ವಿರುದ್ಧ ನೀತಿ ಸಂಹಿತೆಯ ಉಲ್ಲಂಘನೆಯ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ.

ನೀತಿಸಂಹಿತೆ ಉಲ್ಲಂಘನೆಯ ಮೊದಲ ಪ್ರಕರಣದಲ್ಲಿ ದೆಹಲಿ ಪೊಲೀಸರು ಅತಿಶಿ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಅತಿಶಿ 10 ವಾಹನಗಳು ಮತ್ತು 50–60 ಬೆಂಬಲಿಗರೊಂದಿಗೆ ಫತೇ ಸಿಂಗ್ ಮಾರ್ಗ್ ತಲುಪಿದ್ದರು ಎಂದು ಆರೋಪಿಸಲಾಗಿದೆ. ನೀತಿಸಂಹಿತೆಯನ್ನು ಉಲ್ಲೇಖಿಸಿ ಪೊಲೀಸರು ಅವರನ್ನು ಸ್ಥಳದಿಂದ ಹೊರಹೋಗುವಂತೆ ಆದೇಶಿಸಿದಾಗ, ಅವರು ನಿರಾಕರಿಸಿದರು. ಚುನಾವಣಾ ಆಯೋಗದ ದೂರಿನ ಮೇರೆಗೆ ಅವರ ವಿರುದ್ಧ ಈ ಪ್ರಕರಣ ದಾಖಲಾಗಿದೆ.

ಅವಹೇಳನಕಾರಿ ಪೋಸ್ಟ್ ಮಾಡಿದ್ದ ಆರೋಪಿ ಸೆರೆ



ಮೈಸೂರು,ಫೆ.4 (ಆರ್‌ಕೆ)– ಅನ್ಯ ಧರ್ಮದ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿಯಾಗಿ ಪೋಸ್ಟ್ ಮಾಡಿದ್ದ ಆರೋಪಿಯನ್ನು ಮೈಸೂರಿನ ಹೆಬ್ಬಾಳು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅಶುತೋಷ್ ಬಿಸ್ನೋಯಿ ಬಂಧಿತ ಆರೋಪಿಯಾಗಿದ್ದು, ಆತ ತನ್ನ ಫೇಸ್‌ಬುಕ್ ಖಾತೆಯಿಂದ ಅನ್ಯ ಧರ್ಮದ ಬಗೆಗಿನ ಅವಹೇಳನಕಾರಿ ಮಾದರಿಯ ಚಿತ್ರವೊಂದನ್ನು ಹಾಕಿದ್ದು, ಅದಕ್ಕೆ ಸಂಬಂಧಿಸಿದಂತೆ ಇತರೆ ಸಮುದಾಯದ ವ್ಯಕ್ತಿಗಳು ಸೋಷಿಯಲ್ ಮೀಡಿಯಾದ ಎಕ್ಸ್ ಖಾತೆಗಳಲ್ಲಿ ರೀಪೋಸ್ಟ್ ಮಾಡಿ ವಿರೋಧ ವ್ಯಕ್ತಪಡಿಸುತ್ತಿದ್ದರು.

ವಿಷಯ ಬೆಳಕಿಗೆ ಬರುತ್ತಿದ್ದಂತೆ ಹೆಬ್ಬಾಳು ಠಾಣೆ ಪೊಲೀಸರು ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು ಈ ಕೃತ್ಯವೆಸಗಿದ ಅಶುತೋಷ್ ಬಿಸ್ನೋಯಿ ಎಂಬುವನನ್ನು ಬಂಧಿಸಿದ್ದಾರೆ.

ಕಾಂಗ್ರೆಸ್‌ಗೆ ನೇಮಕ



ಮೈಸೂರು, ಫೆ. 4– ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ ಅವರ ಶಿಫಾರಸ್ಸಿನ ಮೇರೆಗೆ ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಮಿಕರ ವಿಭಾಗದ ಪ್ರಧಾನ ಕಾರ್ಯದರ್ಶಿಯನ್ನಾಗಿ ಎಂ.ಪಿ. ಪವಿತ್ರ ಅವರನ್ನು ನೇಮಕ ಮಾಡಲಾಗಿದೆ.

ರೈತ ವಿರೋಧಿ, ಜನ ವಿರೋಧಿ, ಕರಾಳ ಕೃಷಿ ಕಾಯ್ದೆ ವಿರೋಧಿಸಿ

ಫೆ.10, ಬೆಂಗಳೂರಲ್ಲಿ ರೈತರ ಪ್ರತಿಭಟನೆ

ಮೈಸೂರು,ಫೆ.4(ಜಿಎ)–ರಾಜ್ಯ ಸರ್ಕಾರದ ರೈತ ಹಾಗೂ ಜನವಿರೋಧಿ ಹಾಗೂ ಕರಾಳ ಕೃಷಿ ಕಾಯ್ದೆ ವಿರೋಧಿಸಿ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ವತಿಯಿಂದ ಫೆ.10ರಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಳ್ಳಲಾಗುತ್ತಿದೆ ಎಂದು ರಾಜ್ಯ ಸಹ ಕಾರ್ಯದರ್ಶಿ ಹೆಚ್.ಆರ್. ನವೀನ್‌ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಧರಣಿಯಲ್ಲಿ ರೈತ–ಕೃಷಿ ಕೂಲಿಕಾರರ ಭೂಮಿ ಹಕ್ಕಿಗಾಗಿ ಒತ್ತಾಯಿಸಿ, ಬೃಹತ್ ವಿಧಾನಸೌಧ ಚಲೋ ಸಹ ಹಮ್ಮಿಕೊಳ್ಳಲಾಗುವುದು. ಭೂಮಿ, ಶ್ರಮ ಮತ್ತು ಬಂಡವಾಳ ಕ್ಷೇತದಲ್ಲಿ ಮುಂದಿನ ಹಂತದ ನವ ಉದಾರೀಕರಣ ಧೋರಣೆಗಳಿಗೆ ಅನುಸಾರವಾಗಿ ಸಂರಚನಾ ಸುಧಾರಣೆಗಳನ್ನು ದೊಡ್ಡ ಪ್ರಮಾಣದಲ್ಲಿ ಜಾರಿ ಮಾಡಲಾಗುತ್ತಿದೆ. ಈ ರೀತಿ ಅತಿ ದೊಡ್ಡ ಕಾರ್ಪೊರೇಟ್ ಪರ ಮೋದಿ ಸರ್ಕಾರ ಎಂಬಂತಾಗಿದೆ ಎಂದು ದೂರಿದರು.

ರಾಜ್ಯ ಸಹ ಕಾರ್ಪೊರೇಟ್ ಲೂಟಿಗೆ ಅವಕಾಶ ಮಾಡಿಕೊಡುತ್ತಿದ್ದು, ಮೇಲಿಂದ ಮೇಲೆ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ಹಮ್ಮಿಕೊಂಡು ರಾಜ್ಯದ ರೈತ, ಕೂಲಿ ಕಾರ್ಮಿಕರ ಭೂಮಿ ಹಕ್ಕಿಗೆ ಧಕ್ಕೆ ತರುವ ಕೆಲಸ ಮಾಡುತ್ತಿದೆ. ಸರ್ಕಾರಗಳ ಇಂತಹ ಧೋರಣೆಗಳಿಂದಾಗಿ ಮನೆ, ನಿವೇಶನ ರಹಿತರು, ಬಗರ್‌ಹುಕುಂ, ಅರಣ್ಯ ಸಾಗುವಳಿ ರೈತರ ಭೂಮಿ ಹಕ್ಕಿಗೆ ಗಂಭೀರ ಧಕ್ಕೆಯುಂಟಾಗಿದೆ. ರಾಜ್ಯದಾದ್ಯಂತ ಲಕ್ಷಾಂತರ ಸಂಖ್ಯೆಯಲ್ಲಿ ಮನೆ, ನಿವೇಶನ ಕೋರಿರುವವರು ಸಮಸ್ಯೆಗೆ ಸಿಲುಕಿದ್ದಾರೆ. ಹೀಗಾಗಿ ಈ ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಎಂ.ಪುಟ್ಟಮಾದು, ಚಿಕ್ಕಣ್ಣೇಗೌಡ, ಎಂ.ಸಿ. ಚಂದ್ರಶೇಖರ್, ದೂರ ಲೋಕೇಶ್ ಮತ್ತಿತರರು ಉಪಸ್ಥಿತರಿದ್ದರು.

ನೂತನ ಡಿಜಿಟಲ್ ಗ್ರಂಥಾಲಯ ಕಟ್ಟಡ ಉದ್ಘಾಟನೆ...



ಮೈಸೂರು ತಾಲೂಕು ಜಯಪುರ ಗ್ರಾಮ ಪಂಚಾಯಿತಿಯ ನೂತನ ಡಿಜಿಟಲ್ ಗ್ರಂಥಾಲಯ ಕಟ್ಟಡವನ್ನು ಶಾಸಕ ಜಿ.ಟಿ.ದೇವೇಗೌಡರು ಸೋಮವಾರ ಉದ್ಘಾಟಿಸಿದರು. ಮೈಸೂರು ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಸವಿತಾ, ತಹಶೀಲ್ದಾರ್ ಕೆ.ಎಂ ಮಹೇಶ್‌ಕುಮಾರ್, ತಾಲೂಕು ಪಂಚಾಯತ್ ಇಓ ಸಿ.ಕೃಷ್ಣ, ಪಂಚಾಯತ್‌ರಾಜ್ ಉಪವಿಭಾಗ ಸಹಾಯಕ ಎಂಜಿನಿಯರ್ ರವಿಕುಮಾರ್, ಗ್ರಾಮ ಪಂಚಾಯಿತಿ ಅಧ್ಯಕ್ಷ ಎಂ.ಮಹಾದೇವಯ್ಯ, ಉಪಾಧ್ಯಕ್ಷೆ ರಾಣಿ ಮಂಜುನಾಥ್, ಪಿಡಿಓ ಬಸವಣ್ಣ, ಕಾರ್ಯದರ್ಶಿ ನಾಗವೇಣಿ, ಲೆಕ್ಕಸಹಾಯಕ ಆನಂದೇಗೌಡ, ಗ್ರಂಥಾಲಯ ಮೇಲ್ವಿಚಾರಕ ಎಸ್.ಸೋಮೇಗೌಡ, ಜಯಪುರ ಗ್ರಾಪಂ ಸದಸ್ಯರು, ಮುಖಂಡರು ಉಪಸ್ಥಿತರಿದ್ದರು.

ನಾಳೆ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ

ಮೈಸೂರು,ಫೆ.4–ಮೈಸೂರಿನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಫೆ.6ರಂದು ಬೆಳಗ್ಗೆ 10ರಿಂದ ರಾತ್ರಿ 8 ಗಂಟೆಯವರೆಗೆ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಆಟೋಟಗಳಲ್ಲಿ ಸಂಭ್ರಮದಿಂದ ಪಾಲ್ಗೊಂಡ ವಿಕಲಚೇತನರು



ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆದ ಕ್ರೀಡಾಕೂಟದ ಓಟದ ಸ್ಪರ್ಧೆಯಲ್ಲಿ ಪಾಲ್ಗೊಂಡಿರುವ ವಿಶೇಷಚೇತನರು.

ಮೈಸೂರು, ಫೆ.4(ಎಂಟಿವೈ)–ಮೈಸೂರಿನ ನಜರ್‌ಬಾದ್‌ನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ವಿಕಲಚೇತನರಿಗಾಗಿ ಆಯೋಜಿಸಿದ್ದ ಕ್ರೀಡಾಕೂಟದಲ್ಲಿ ಜಿಲ್ಲೆಯ ವಿವಿಧೆಡೆಯಿಂದ ನೂರಾರು ಮಂದಿ ವಿಕಲಚೇತನ ಕ್ರೀಡಾಪಟುಗಳು ಆಗಮಿಸಿ ವಿವಿಧ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಗಮನ ಸೆಳೆದರು.

ಜಿಲ್ಲಾಡಳಿತ, ವಿಕಲಚೇತನರ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಿದ್ದ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ 15 ರಿಂದ 20 ವರ್ಷ ಹಾಗೂ 20 ವರ್ಷ ಮೇಲ್ಪಟ್ಟವರಿಗಾಗಿ ಪುರುಷ ಮತ್ತು ಮಹಿಳೆಯರಿಗೆ ಪ್ರತ್ಯೇಕ ವಿಭಾಗದಲ್ಲಿ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ದೃಷ್ಟಿಹೀನರ ಅಥ್ಲೆಟಿಕ್ಸ್, ಶ್ರವಣ ದೋಷವುಳ್ಳವರ ಅಥ್ಲೆಟಿಕ್ಸ್, ಲೆಗ್ ಕ್ಯಾಟೆಗರಿ ಅಥ್ಲೆಟಿಕ್ಸ್, ಬುದ್ಧಿಮಾಂದ್ಯ ವಿಭಾಗ, ಎಂಆರ್‌ವಿ ವಿಭಾಗ, ಎಫ್, 55, ಎಫ್.56, ಎಫ್.40 ಹಾಗೂ ವಿವಿಧ ವಿಭಾಗ, 20 ವರ್ಷ ಮೇಲ್ಪಟ್ಟವರ ವಿಭಾಗ, ಡೆಫ್ ಅಂಡ್ ಡಮ್ ಅಥ್ಲೆಟಿಕ್ಸ್, ಸಿಂಗಲ್ ಹ್ಯಾಂಡ್ ಅಥ್ಲೆಟಿಕ್ಸ್ ಸೇರಿದಂತೆ ವಿವಿಧ ವಿಭಾಗದ ಕ್ರೀಡಾ ಸ್ಪರ್ಧೆಯಲ್ಲಿ 100, 200 ಮೀಟರ್ ಓಟ, ಗುಂಡು ಎಸೆತ, ಡಿಸ್ಕಸ್ ಥ್ರೋ ಹಾಗೂ ಇನ್ನಿತರ ಕ್ರೀಡಾ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಪೋಷಕರು ಹಾಗೂ ಶಾಲಾ ಶಿಕ್ಷಕರೊಂದಿಗೆ ಆಗಮಿಸಿದ್ದ ವಿಶೇಷಚೇತನರು ಕ್ರೀಡಾ ಸ್ಪರ್ಧೆಯಲ್ಲಿ ಪಾಲ್ಗೊಂಡು ಸಂಭ್ರಮಿಸಿದರು. ಸೋಲು–ಗೆಲುವಿನ ಅಂತರವಿಲ್ಲದೆ ವಿಶೇಷ ಮಕ್ಕಳು ಕ್ರೀಡೆಯಲ್ಲಿ ಪಾಲ್ಗೊಂಡಿದ್ದನ್ನು ಪೋಷಕರು ಹಾಗೂ ಶಿಕ್ಷಕರು ಪ್ರೋತ್ಸಾಹಿಸುವ ಮೂಲಕ ಆತ್ಮಸ್ಥೈರ್ಯ ತುಂಬಿದರು. ದಿನವಿಡೀ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದ ವಿಶೇಷ ಚೇತನರು ಕುಣಿದು ಕುಪ್ಪಳಿಸಿದರು.

ಮೈಸೂರು ಮಿತ್ರ

ಬುಧವಾರ 5 ಫೆಬ್ರವರಿ 2025

ಟೊಮ್ಯಾಟೋ ಬೆಳೆಗೆ ಕಳೆ ನಾಶಕ ಹಾಕಿ ಫಸಲು ನಾಶಪಡಿಸಿದ ಕಿಡಿಗೇಡಿಗಳು

ಒಂದು ಎಕರೆಯಷ್ಟು ಟೊಮ್ಯಾಟೋ ನಾಶ, 4 ಲಕ್ಷ ರೂ ನಷ್ಟ



ಕಿಡಿಕೇಡಿಗಳ ಕೃತ್ಯಕ್ಕೆ ಬಾಡಿಹೋಗಿರುವ ಟೊಮ್ಯಾಟೋ ಗಿಡಗಳು.

ಕೆ.ಆರ್.ಪೇಟೆ, ಫೆ.4– ರೈತನೊಬ್ಬ ಕಷ್ಟಪಟ್ಟು ಬೆಳೆದ ಟೋಮ್ಯಾಟೋ ಬೆಳೆಗೆ ಕಿಡಿಗೇಡಿಗಳು ಕಳೆನಾಶಕ ರಾಸಾಯನಿಕ ದ್ರಾವಣ ಸಿಂಪಡಿಸಿ ಒಂದು ಎಕರೆ ಟೊಮ್ಯಾಟೊ ಬೆಳೆಯನ್ನು ನಾಶಪಡಿಸಿರುವ ಘಟನೆ ಕೆ.ಆರ್.ಪೇಟೆ ತಾಲೂಕಿನ ಮೊಸಳೇಕೊಪ್ಪಲು ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ಕಸಬಾ ಹೋಬಳಿಯ ಮೊಸಳೇಕೊಪ್ಪಲು ಗ್ರಾಮದ ಶಿವಣ್ಣ ಅವರ ಮಗ ಸಂತೋಷ್ ಎಂಬ ರೈತ ಬೆಳೆದಿದ್ದ ಟೊಮ್ಯಾಟೊ ಬೆಳೆ ನಾಶವಾಗಿದ್ದು ಸುಮಾರು 4ಲಕ್ಷ ರೂ ನಷ್ಟ ಉಂಟಾಗಿದೆ.

ಸಂತೋಷ್ ಮತ್ತು ಅವರ ಕುಟುಂಬದವರು ಲಕ್ಷಾಂತರ ರೂ. ಖರ್ಚು ಮಾಡಿ ಕಷ್ಟಪಟ್ಟು ಟೊಮ್ಯಾಟೋ ಬೆಳೆ ಬೆಳೆದಿದ್ದರು. ಬೆಳೆಯು ಸಮೃದ್ಧಿಯಾಗಿ ಬೆಳೆದಿತ್ತು. ಇನ್ನು ಕೆಲವೇ ದಿನಗಳಲ್ಲಿ ಬೆಳೆಯನ್ನು ಕಟಾವು ಮಾಡಿ ಮಾರುಕಟ್ಟೆಗೆ ಸಾಗಿಸಬೇಕಾಗಿತ್ತು ಆದರೆ ಕಿಡಿಗೇಡಿಗಳು ಭಾನುವಾರ ರಾತ್ರಿ ಟೊಮ್ಯಾಟೋ ಬೆಳೆಗೆ ಕಳೆನಾಶಕ ರಾಸಾಯನಿಕ ದ್ರಾವಣವನ್ನು ಸಿಂಪಡಿಸಿದ್ದು, ಟೊಮ್ಯಾಟೋ ಬೆಳೆಯು ಸಂಪೂರ್ಣ ಸುಟ್ಟುಹೋಗಿದೆ ಇದರಿಂದ ಕಷ್ಟಪಟ್ಟು ಬೆಳೆದ ಬೆಳೆ ಕೈಗೆ ಬಂದ ತುತ್ತು ಬಾಯಿಗೆ ಸಿಗದಂತಾಗಿದೆ. ಕಿಡಿಗೇಡಿಗಳ ಈ ಕುಕೃತ್ಯದಿಂದ ರೈತ ಸಂತೋಷ್ ಅವರಿಗೆ ಸುಮಾರು 4 ಲಕ್ಷಕ್ಕೂ ಹೆಚ್ಚು ನಷ್ಟ ಉಂಟಾಗಿದೆ.

ಘಟನಾ ಸ್ಥಳಕ್ಕೆ ತಾಲೂಕು ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ್ ಕುಮಾರ್, ತೋಟಗಾರಿಕಾ ಸಹಾಯಕ ನಿರ್ದೇಶಕ ಡಾ.ಲೋಕೇಶ್, ಬೇಟಿ ನೀಡಿ ಪರಿಶೀಲನೆ ನಡೆಸಿದರು.

ಘಟನೆ ಕುರಿತು ರೈತ ಸಂತೋಷ್ ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣೆಗೆ ಹಾಗೂ ಕೃಷಿ ಮತ್ತು ತೋಟಗಾರಿಕಾ ಇಲಾಖೆಗಳಿಗೆ ದೂರು ನೀಡಿದ್ದಾರೆ.

ದೇವಾಲಯಗಳು ಪ್ರೀತಿ, ಶಾಂತಿಯನ್ನು ಬಿತ್ತುವ ಸಮನ್ವಯ ಕೇಂದ್ರಗಳಾಗಲಿ

ಭಾರತೀನಗರ.ಫೆ.4– ದೇವಾಲಯಗಳು ಪ್ರೀತಿ ಮತ್ತು ಶಾಂತಿಯನ್ನು ಬಿತ್ತುವ ಸಮನ್ವಯ ಕೇಂದ್ರಗಳಾಗಿ, ಜನಸಾಮಾನ್ಯರು ಬೇದ–ಭಾವಗಳನ್ನು ಬಿಟ್ಟು ಮೇಲು–ಕೀಳುಗಳನ್ನು ತೊರೆದು, ನೆಮ್ಮದಿಯ ಜೀವನ ಸಾಗಿಸುವಂತಾಗಲಿ ಎಂದು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್. ಚಲುವರಾಯಸ್ವಾಮಿ ತಿಳಿಸಿದರು.

ಇಲ್ಲಿಗೆ ಸಮೀಪದ ಗೋಪನಹಳ್ಳಿ ಗ್ರಾಮದ ಶ್ರೀ ಚೌಡೇಶ್ವರಿ ನೂತನ ದೇವಾಲಯದ ಪ್ರತಿಷ್ಠಾಪನೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಪೂರ್ವಿಕರು ಗ್ರಾಮಗಳಲ್ಲಿ ದೇವಸ್ಥಾನಗಳನ್ನು ಕಟ್ಟಿ ಪೂಜಿಸುತ್ತಿದುದ್ದು ಗ್ರಾಮಕ್ಕೆ ಒಳಿತು ಉಂಟು ಮಾಡಲಿ ಎಂಬ ಉದ್ದೇಶವಾಗಿತ್ತು ಆದರೆ ಇಂದಿನ ಯುವಕರಲ್ಲಿ ದೈವಭಕ್ತಿ ಮರೆಯಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ವಿಧಾನಪರಿಷತ್ ಸದಸ್ಯ ಮಧು ಜಿ. ಮಾದೇಗೌಡ ಮಾತನಾಡಿ, ಗೋಪನಹಳ್ಳಿ ಗ್ರಾಮವು ಒಂದು ಮಾದರಿ ಗ್ರಾಮವಾಗಿದ್ದು, ಊರಿನ ಎಲ್ಲಾ ಮುಖಂಡರು ಒಗ್ಗಟ್ಟಾಗಿ ಬಂದು ಕೋರಿಕೆ ಇಟ್ಟಾಗ ಸರ್ಕಾರದಿಂದ ಬರುವ ಶಾಸಕರ ನಿಧಿಯಿಂದ 5 ಲಕ್ಷಗಳ ಅನುದಾನವನ್ನು ನೀಡಿದ್ದೇನೆ. ಗ್ರಾಮದಲ್ಲಿ ಇಂದು ಒಂದು ಅದ್ಭುತವಾಗಿ ದೇವಾಲಯ ಮೂಡಿ ಬಂದಿದೆ. ಇದಕ್ಕಾಗಿ ಶ್ರಮಿಸಿದ ಎಲ್ಲಾ ಭಕ್ತಾಧಿಗಳಿಗೂ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀನಿರ್ಮಲಾನಂದನಾಥಸ್ವಾಮಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿ, ಜ್ಞಾನ, ವಿಜ್ಞಾನ ಯುಗದಲ್ಲಿ ಕೂಡ ಬದಲಾವಣೆಯ ಸರ್ವಕಾಲಿಕ ಸತ್ಯದರ್ಶನ ಮಾಡಲು ಮಾಯೆ ಎಂಬ ಮೋಹದಿಂದ ಹೊರಬರಬೇಕು. ನಿಮ್ಮ ಆತ್ಮದ ಬಲದಿಂದ ದೇವರನ್ನು ಕಾಣಬೇಕು. ಉತ್ತಮ ನಡವಳಿಕೆ ಗಳು ಮತ್ತು ನಿರಂತರ ಅಭ್ಯಾಸಗಳು ಮಾನವನನ್ನು ದೈವತ್ವಕ್ಕೆ ಏರಿಸುವ ಮಹಾಮಂತ್ರಗಳಾಗಿವೆ ಎಂದು ಆಶೀರ್ವಚನ ನೀಡಿದರು.



ಶ್ರೀ ಚೌಡೇಶ್ವರಿ ನೂತನ ದೇವಾಲಯದ ಪುನಃ ಪ್ರತಿಷ್ಠಾಪನೆ ಸಮಾರಂಭವನ್ನು ಉದ್ಘಾಟಿಸುತ್ತಿರುವ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ.

ಶಾಸಕ ಕೆ.ಎಂ.ಉದಯ್, ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ರಾಜ್ಯ ಇಂಜಿನಿಯರ್ ಸಂಘದ ಗೌರವಾಧ್ಯಕ್ಷ ಡಿ.ಎಸ್. ದೇವರಾಜು, ಸ್ವಾರ್‌ಚಂದ್ರು, ಸಿ.ತ್ಯಾಗರಾಜು ವಡ್ಡರಹಳ್ಳಿ ನಂಜುಂಡಯ್ಯ, ಕಾರ್ಯಪಾಲಕ ಇಂಜೀನಿಯರ್ ನಂಜುಂಡೇಗೌಡ, ನಾಡಗೌಡ, ಎನ್.ನಂಜುಂಡೇಗೌಡ, ರಾಜೀವ್, ಗೋಪನಹಳ್ಳಿ ಕೆಂಪರಾಜು, ಬಿ.ಬಸವರಾಜು, ನಿವೃತ್ತ ಆರ್‌ಐ ಜೆ. ತಮ್ಮಯ್ಯ, ಜವನೇಗೌಡ, ಜೆ.ಕೆಂಪರಾಜು ಹಾಗೂ ಚೌಡೇಶ್ವರಿದೇವಾಲಯ ಟ್ರಸ್ಟಿನ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಖಾದಿ ಉತ್ಸವ–2025

ಮಂಡ್ಯ, ಫೆ4– ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಹಾಗೂ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ವತಿಯಿಂದ ಖಾದಿ ಉತ್ಸವ–2025 ರಾಜ್ಯ ಮಟ್ಟದ ಖಾದಿ ಗ್ರಾಮೋದ್ಯೋಗ ವಸ್ತು ಪ್ರದರ್ಶನ ಹಾಗೂ ಮಾರಾಟ ಫೆ.7 ರಿಂದ 21 ರವರೆಗೆ ಮಂಡ್ಯ ವಿಶ್ವವಿದ್ಯಾನಿಲಯ ಆವರಣದಲ್ಲಿ ನಡೆಯಲಿದೆ. ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ ಅವರು ಭಾಗವಹಿಸಲಿದ್ದಾರೆ.

ರಿಯಲ್ ಎಸ್ಟೇಟ್ ಉದ್ಯಮಿಯಿಂದ ಜಮೀನು, ಪರಿಶಿಷ್ಟರ ಸ್ಮಶಾನ ರಸ್ತೆಗೆ ಕಾಂಪೌಂಡ್ ನಿರ್ಮಾಣ

ಹಂಪಾಪುರ ಗ್ರಾಮಸ್ಥರ ಪ್ರತಿಭಟನೆ



ರಿಯಲ್ ಎಸ್ಟೇಟ್ ಉದ್ಯಮಿಯ ಕಿರುಕುಳ ವಿರೋಧಿಸಿ ಪ್ರತಿಭಟನೆ ನಡೆಸುತ್ತಿರುವುದು.

ಶ್ರೀರಂಗಪಟ್ಟಣ, ಫೆ4– ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರು ರೈತರ ಜಮೀನು ಹಾಗೂ ಪರಿಶಿಷ್ಟ ಜನಾಂಗದವರ ಸ್ಮಶಾನದ ರಸ್ತೆಗೆ ಅಡ್ಡಲಾಗಿ ಕಾಂಪೌಂಡ್ ನಿರ್ಮಿಸಿ ತೊಂದರೆ ನೀಡುತ್ತಿದ್ದಾರೆ ಎಂದು ಹಂಪಾಪುರ ಗ್ರಾಮದ ಜನರು ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದರು.

ಗ್ರಾಮದ ಸರ್ವೆ ನಂ 67 ಮತ್ತು 68 ರಲ್ಲಿನ ಸ್ಮಶಾನದ ಜಾಗ, ಜೊತೆಗೆ ಸುಮಾರು ಒಂದೂವರೆ ಎಕರೆ ಸರ್ಕಾರಿ ಜಮೀನನ್ನು ಬೆಂಗಳೂರು ಮೂಲದ ಉದ್ಯಮಿಯೊಬ್ಬರು ಒತ್ತುವರಿ ಮಾಡಿಕೊಂಡು ಸ್ಥಳೀಯರಿಗೆ ತೊಂದರೆ ನೀಡುತ್ತಿದ್ದಾರೆ. ಈ ಸಂಬಂಧ ತಹಸೀಲ್ದಾರ್ ಅವರಿಗೆ ದೂರು ನೀಡಿದ್ದರೂ ಅವರು ಸಹ ಮೂರ್‍ನಾಲ್ಕು ಬಾರಿ ಸ್ಥಳಕ್ಕೆ ಆಗಮಿಸಿ, ಹೋಗಿದ್ದಾರೆ ವಿನಃ ಯಾವುದೇ ಪ್ರಯೋಜವಾಗಿಲ್ಲ ಎಂದು ಗ್ರಾಮಸ್ಥರು ದೂರಿದರು.

ಈ ವ್ಯಕ್ತಿ ಸರ್ಕಾರಿ ಜಾಗ, ರೈತರ ಜಮೀನು ಹಾಗೂ ಪರಿಶಿಷ್ಟ ಜನಾಂಗಕ್ಕೆ ಸೇರಿದ್ದ ಸ್ಮಶಾನ ಜಾಗ ಒತ್ತುವರಿ ಮಾಡಿಕೊಂಡಿರುವ ಬಗ್ಗೆ ಗ್ರಾಮಸ್ಥರು ನೀಡಿದ ದೂರಿನ ಮೇರೆಗೆ ಸ್ಥಳಕ್ಕೆ ತಹಸೀಲ್ದಾರ್ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಅಳತೆ ಮಾಡಿದ ವೇಳೆ ಒತ್ತುವರಿಯಾಗಿರುವುದು ಕಂಡು ಬಂದಿತ್ತು ನಂತರ ಜೆಸಿಬಿ ಮೂಲಕ ಟ್ರಂಚ್ ಮಾಡಿ ಸ್ಥಳ ನಿಗದಿಪಡಿಸಿ ತೆರಳಿದ್ದರು. ಆದರೆ ಏಕಾಏಕಿ ಟ್ರಂಚ್ ಮುಚ್ಚುವ ಮೂಲಕ ಅಧಿಕಾರಿಗಳಿಗೂ ಬೆಲೆ ಕೊಡುತ್ತಿಲ್ಲ, ಉದ್ಧಟತನ ಪ್ರದರ್ಶಿಸುತ್ತಿದ್ದಾರೆ. ಇವರಿಗೆ ಸ್ಥಳೀಯ ದಳ್ಳಾಳಿಗಳು ಸಾಥ್ ನೀಡುತ್ತಿದ್ದಾರೆ ಎಂದು ಕಿಡಿಕಾರಿದರು.

ನಂತರ ಗ್ರಾಮಸ್ಥರು ಜೊತೆಗೂಡಿ ಬಂಡಿದಾರಿಗೆ ಅಡ್ಡಲಾಗಿ ನಿರ್ಮಿಸಿದ್ದ ಕಾಂಪೌಂಡನ್ನು ತೆರವುಗೊಳಿಸಿ, ಪರಿಶಿಷ್ಟ ಜನಾಂಗಕ್ಕೆ ಸೇರಿದ್ದ ಜಾಗ ಎಂದು ಗ್ರಾಮಸ್ಥರು ನಾಮಫಲಕ ಹಾಕಿದರು. ಈ ವೇಳೆ ಪ್ರಶ್ನಿಸಲು ಮುಂದಾದ ಬಿಲ್ಡರ್ ವ್ಯವಸ್ಥಾಪಕನನ್ನು ತರಾಟೆಗೆ ತೆಗೆದುಕೊಂಡರು.

ಕ್ಯಾನ್ಸರ್ ತಡೆಗೆ ಸಂಯೋಜಿತ ಪ್ರಯತ್ನಕ್ಕೆ ಉತ್ತೇಜನ

ಮಂಡ್ಯ,ಫೆ.4– ಆಹಾರ ಪದ್ಧತಿ ಮತ್ತು ಜೀವನ ಶೈಲಿ ಬದಲಾವಣೆ ಹಾಗೂ ತಂಬಾಕು ಸೇವೆಯಿಂದಾಗಿ ಹಲವಾರು ಮಂದಿ ಕ್ಯಾನ್ಸರ್ ರೋಗದಿಂದ ಬಳಲುತ್ತಿದ್ದಾರೆ. ಈ ಬಗ್ಗೆ ಜಾಗೃತಿ ಮೂಡಿಸುವುದಷ್ಟೇ ಅಲ್ಲದೆ, ಚಿಕಿತ್ಸೆ ಮತ್ತು ನಿಯಂತ್ರಣಕ್ಕಾಗಿ ಸಂಯೋಜಿತ ಪ್ರಯತ್ನಗಳನ್ನು ಉತ್ತೇಜಿಸಲಾಗುತ್ತಿದೆ ಎಂದು ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ನಿರ್ದೇಶಕ ಡಾ. ನರಸಿಂಹಸ್ವಾಮಿ ತಿಳಿಸಿದರು.



ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರ ಸಂಘ, ಮಿಮ್ಸ್ ಶಸ್ತ್ರ ಚಿಕಿತ್ಸಾ ವಿಭಾಗದ ವತಿಯಿಂದ ನಗರದ ಮಿಮ್ಸ್ ಆವರಣದಲ್ಲಿ ನಡೆದ ವಿಶ್ವ ಕ್ಯಾನ್ಸರ್ ರೋಗದ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರತಿ ವರ್ಷ ಫೆ.4ರಂದು ವಿಶ್ವದಾದ್ಯಂತ ಕ್ಯಾನ್ಸರ್ ದಿನಾಚರಣೆ ಆಚರಿಸಲಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಜನಸಾಮಾನ್ಯರಲ್ಲಿ ಕ್ಯಾನ್ಸರ್ ರೋಗ ಹೆಚ್ಚುತ್ತಿರುವುದು ಆತಂಕಕ್ಕೆ ಕಾರಣವಾಗಿದ್ದು, ಜನರಿಗೆ ಜಾಗೃತಿ ಮೂಡಿಸುವ ಸಲುವಾಗಿ ಈ ಜಾಥಾವನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಭಾರತದಲ್ಲಿ 14.96 ಕೋಟಿ ಜನರು ಕ್ಯಾನ್ಸರ್ ರೋಗದಿಂದ ಬಳಲುತ್ತಿದ್ದು, 2040ರ ವೇಳೆಗೆ ಭಾರತದಲ್ಲಿ ಕ್ಯಾನ್ಸರ್ ರೋಗಿಗಳ ಸಂಖ್ಯೆ ದ್ವಿಗುಣಗೊಳ್ಳುವ ಆತಂಕ ಮನೆ ಮಾಡಿದ್ದು, ಈ ಹಿನ್ನೆಲೆಯಲ್ಲಿ ಸರ್ಕಾರ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ ಎಂದರು.

ಕ್ಯಾನ್ಸರ್ ಕೇವಲ ಚಿಕಿತ್ಸೆಯಿಂದ ಮಾತ್ರವಲ್ಲ, ಜನರ ಬೆಂಬಲದಿಂದ ಗೆಲ್ಲಬಹುದಾಗಿದ್ದು, ಅದನ್ನು ಬೇರುಗಳಿಂದಲೇ ನಿರ್ಮೂಲನೆ ಮಾಡಬೇಕು. ಕ್ಯಾನ್ಸರ್ ಒಂದು ಕಾಯಿಲೆಯಾಗಿದ್ದು, ಮೊದಲೇ ಪತ್ತೆ ಹಚ್ಚಿದರೆ ಅದನ್ನು ಗುಣಪಡಿಸಬಹುದು. ಆದರೆ, ಹೆಚ್ಚಿನ ಸಂದರ್ಭಗಳಲ್ಲಿ ಜನರಿಗೆ ಕ್ಯಾನ್ಸರ್‌ನ ಲಕ್ಷಣಗಳ ಬಗ್ಗೆ ತಿಳಿದಿರುವುದಿಲ್ಲ, ಇದರಿಂದಾಗಿ ರೋಗವು ಮುಂದುವರಿದ ಹಂತವನ್ನು ತಲುಪುತ್ತದೆ ಮತ್ತು ಚಿಕಿತ್ಸೆಯು ಕಷ್ಟಕರವಾಗುತ್ತದೆ. ಆದ್ದರಿಂದ, ಕ್ಯಾನ್ಸರ್ ಜಾಗೃತಿ ಮೂಡಿಸುವುದು ಬಹಳ ಮುಖ್ಯ ಎಂದು ಅಭಿಪ್ರಾಯಿಸಿದರು.

ತಂಬಾಕು ಮತ್ತು ಮದ್ಯ ಸೇವನೆಯು ಕ್ಯಾನ್ಸರ್‌ಗೆ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ. ಇವುಗಳಿಂದ ದೂರವಿರುವುದರಿಂದ ಕ್ಯಾನ್ಸರ್ ಅಪಾಯವನ್ನು ಬಹಳ ಮಟ್ಟಿಗೆ ಕಡಿಮೆ ಮಾಡಬಹುದು ಎಂದ ಅವರು, ಹಣ್ಣುಗಳು, ತರಕಾರಿಗಳು ಮತ್ತು ಧಾನ್ಯಗಳು ಸಮೃದ್ಧವಾಗಿರುವ ಆಹಾರವನ್ನು ಸೇವಿಸುವುದು ಅಗತ್ಯ ಎಂದು ಪ್ರತಿಪಾದಿಸಿದರು.

ಜಾಥಾದಲ್ಲಿ ನಮ್ಮ ಕಾಲೇಜಿನ ಪ್ರಸೂತಿ ಮತ್ತು ಸ್ತ್ರೀರೋಗ, ಶಸ್ತ್ರ ಚಿಕಿತ್ಸಾ ವಿಭಾಗದ ವೈದ್ಯರು, ನರ್ಸಿಂಗ್ ವಿದ್ಯಾರ್ಥಿಗಳು ನಗರದ ಪ್ರಮುಖ ಬೀದಿಗಳಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಜಾಥಾ ನಡೆಸಿದರು. ಇದು ನಿರಂತರವಾಗಿ ಮುಂದುವರೆಯಬೇಕು.

ಹೊಸಹೊಳಲು ಪಿಎಸಿಎಸ್‌ಗೆ ಅಶೋಕ್ ಅಧ್ಯಕ್ಷ

ಕೆ.ಆರ್.ಪೇಟೆ,ಫೆ4– ತಾಲೂಕಿನ ಹೊಸಹೊಳಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಹೆಚ್.ಕೆ.ಅಶೋಕ್, ಉಪಾಧ್ಯಕ್ಷರಾಗಿ ಚಂದ್ರಶೇಖರ್ ಆಯ್ಕೆಯಾದರು.

ಡಿ.29ರಂದು ಹೊಸಹೊಳಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಆಡಳಿತ ಮಂಡಳಿಗೆ ಚುನಾವಣೆ ನಡೆದಿತ್ತು ಎರಡೂ ಬಾರಿ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನದ ಚುನಾವಣೆ ನಿಗಧಿಯಾಗಿದ್ದರೂ ಸಹ ಕೋರಂ ಅಭಾವದಿಂದ ಮುಂದೂಡಲಾಗಿತ್ತು ಇಂದು ಮೂರನೇ ಭಾರಿಗೆ ನಿಗಧಿಯಾಗಿದ್ದ ಚುನಾವಣೆಯಲ್ಲಿ ಸಂಘದ ಅಧ್ಯಕ್ಷ ಸ್ಥಾನ ಬಯಸಿ ಡಿಸಿಸಿ ಬ್ಯಾಂಕ್ ಹೆಚ್.ಕೆ.ಅಶೋಕ್ ಹಾಗೂ ಅಭಿಶೇಖರ್ ನಾಮಪತ್ರ ಸಲ್ಲಿಸಿದರು. ಹಾಗೂ ಉಪಾಧ್ಯಕ್ಷ ಸ್ಥಾನ ಬಯಸಿ ಕೃಷ್ಣಪ್ಪ ಮತ್ತು ಚಂದ್ರಶೇಖರ್ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಬೆಳವಣಿಗೆಯಲ್ಲಿ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಅಭಿಶೇಖರ್ ಹಾಗೂ ಉಪಾಧ್ಯಕ್ಷ ಸ್ಥಾನದ ಅಭ್ಯರ್ಥಿ ಕೃಷ್ಣಪ್ಪ ತಮ್ಮ ನಾಮಪತ್ರ ವಾಪಸ್ ಪಡೆದರು. ಇದರಿಂದಾಗಿ ಅಧ್ಯಕ್ಷರಾಗಿ ಹೆಚ್.ಕೆ.ಅಶೋಕ್, ಉಪಾಧ್ಯಕ್ಷರಾಗಿ ಚಂದ್ರಶೇಖರ್ ಅವಿರೋಧವಾಗಿ ಆಯ್ಕೆಯಾದರು. ಚುನಾವಣಾ ಅಧಿಕಾರಿಯಾಗಿ ಆನಂದನಾಯಕ್ ಕಾರ್ಯ ನಿರ್ವಹಿಸಿದರು. ಸಹ ಚುನಾವಣಾಧಿಕಾರಿಯಾಗಿ ಸಂಘದ ಕಾರ್ಯದರ್ಶಿ ಯೋಗಣ್ಣ ಅವರು ಕಾರ್ಯನಿರ್ವಹಣೆ ಮಾಡಿದರು.



ಅಧ್ಯಕ್ಷ ಅಶೋಕ್ ಅವರನ್ನು ಶಾಸಕ ಹೆಚ್.ಟಿ.ಮಂಜು ಮತ್ತಿತರರು ಅಭಿನಂದಿಸಿದರು.

ನೂತನವಾಗಿ ಆಯ್ಕೆಯಾದ ಅಧ್ಯಕ್ಷ ಉಪಾಧ್ಯಕ್ಷರನ್ನು ಶಾಸಕ ಹೆಚ್.ಟಿ.ಮಂಜು, ಸಂಘದ ನಿರ್ದೇಶಕರು, ಹಿತೈಷಿಗಳು, ಅಭಿಮಾನಿಗಳು ಶಾಲು ಹೊದಿಸಿ ಬೃಹತ್ ಗಾತ್ರದ ಹೂವಿನ ಹಾರ ಹಾಕಿ ಪಟಾಕಿ ಸಿಡಿಸಿ ಸಿಹಿ ವಿತರಣೆ ಮಾಡುವ ಮೂಲಕ ಸಂಭ್ರಮಿಸಿದರು.

ಒಂದನೇ ಪುಟದಿಂದ

ಸರ್ವೇಕ್ಷಣೆ ಆರಂಭ

ಸಲಹೆಗಳು ಬಂದವು. ಇವುಗಳಲ್ಲಿ ಮುಖ್ಯವಾಗಿ ಪ್ಲಾಸ್ಟಿಕ್ ಬಳಕೆಗೆ ಕಡಿವಾಣ, ಬ್ಯಾನರ್ ಹಾಗೂ ಫ್ಲೆಕ್ಸ್‌ಗಳ ಬಳಕೆ ನಿರ್ಬಂಧಿಸುವುದು, ಸ್ವಚ್ಛತೆಗೆ ಸಂಬಂಧಿಸಿದಂತೆ ದೂರುಗಳ ಬಂದಾಗ ತ್ವರಿತಗತಿ ಕ್ರಮ ವಹಿಸುವುದು, ಕಟ್ಟಡ ತ್ಯಾಜ್ಯದ ಸೂಕ್ತ ನಿರ್ವಹಣೆ, ಕಸ ಸಂಗ್ರಹ ವಿಧಾನದ ಸುಧಾರಣೆ ಸಂಬಂಧ ಸಲಹೆಗಳನ್ನು ಸಂಘ ಸಂಸ್ಥೆಗಳ ಪ್ರತಿನಿಧಿಗಳು ನೀಡಿದರು. ಈ ಪೈಕಿ ಹಿಂದೆ ಕೊಟ್ಟಿರುವ ಸಲಹೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವ ಬಗ್ಗೆಯೂ ಪ್ರಸ್ತಾಪಗಳು ಕೇಳಿಬಂದವು.

ಉತ್ತಮ ಸಲಹೆಗೆ ಬಹುಮಾನ: ನಗರದ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳಿಗೆ ಸಂಬಂಧಿಸಿದಂತೆ ನೀಡಲಾದ ಉತ್ತಮ ಸಲಹೆಗಳಿಗೆ ಸಭೆಯಲ್ಲಿ ಬಹುಮಾನ ನೀಡಲಾಯಿತು. ವಿವಿಧ ಸಂಘ–ಸಂಸ್ಥೆಗಳು, ಎನ್‌ಜಿಓಗಳ ಪ್ರತಿನಿಧಿಗಳಲ್ಲಿ ಉತ್ತಮ ಸಲಹೆ ನೀಡಿದವರಿಗೆ ಪಾಲಿಕೆ ವತಿಯಿಂದ ಬಹುಮಾನ ನೀಡಲಾಯಿತು.

ದೊಡ್ಡ ನಗರಗಳ ಪೈಕಿಯಾದರೂ ಮೊದಲ ಸ್ಥಾನ ಗಳಿಸಬೇಕು: ನಿನ್ನೆ ಅಧಿಕಾರಿ ವರ್ಗದ ಸಭೆ ಮಾಡಿದ್ದೇನೆ. ಅವರ ಪಾತ್ರ, ಜವಾಬ್ದಾರಿ, ಯಾವ್ಯಾವ ವಿಭಾಗ ಏನೇನು ಕೆಲಸ ಕಾರ್ಯಗಳನ್ನು ಮಾಡಬೇಕೆಂದು ನಿರ್ದೇಶನ ನೀಡಲಾಗಿದೆ. ಮುಂಬರುವ ಸ್ವಚ್ಛ ಸರ್ವೇಕ್ಷಣಾ ಸರ್ವೆಯಲ್ಲಿ ನಗರ ಉತ್ತಮ ಸ್ಥಾನ ಗಳಿಸಬೇಕೆಂಬ ಗುರಿ ಹೊಂದಿದ್ದು, ದೇಶದ ಮೊದಲ ಸ್ವಚ್ಛ ನಗರ ಸ್ಥಾನ ಗಳಿಸಬೇಕೆಂಬ ಆಕಾಂಕ್ಷೆ ಇದೆ. ಒಟ್ಟಾರೆ ದೊಡ್ಡ ನಗರಗಳ ಪೈಕಿಯಾದರೂ ಮೊದಲ ಸ್ಥಾನ ಗಳಿಸಲೇಬೇಕೆಂಬ ನಿಟ್ಟಿನಲ್ಲಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಮುಂದಿನ ದಿನಗಳಲ್ಲಿ ಸಾರ್ವಜನಿಕರ ಸಭೆ ನಡೆಸಿ, ಸಲಹೆಗಳನ್ನು ಸ್ವೀಕರಿಸಲಾಗುವುದು ಎಂದು ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಹೇಳಿದರು.

ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಮೈಸೂರು ಗ್ರಾಹಕರ ಪರಿಷತ್ (ಎಂಜಿಪಿ) ಸಂಸ್ಥಾಪಕ ಅಧ್ಯಕ್ಷ ಭಾಮೀ ಶೆಣೈ, ಜಿಎಸ್‌ಎಸ್ ಫೌಂಡೇಷನ್ ಮುಖ್ಯಸ್ಥ ಶ್ರೀಹರಿ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಪಾರಂಪರಿಕ ತಜ್ಞ ಡಾ.ರಂಗರಾಜು ಸೇರಿದಂತೆ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು. ಪಾಲಿಕೆ ಮುಖ್ಯ ಆರೋಗ್ಯಾಧಿಕಾರಿ ಡಾ.ವೆಂಕಟೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರ ಮೃತ್ಯುಂಜಯ, ಪರಿಸರ ಇಂಜಿನಿಯರ್ ಮೈತ್ರಿ ಸೇರಿದಂತೆ ಇನ್ನಿತರ ಅಧಿಕಾರಿಗಳು ಹಾಜರಿದ್ದರು.

ನಿಯಮಾವಳಿ ಪಾಲಿಸಲು ಸರ್ಕಾರ ತಾಕೀತು

ಸಾಲಗಾರರ ಮೇಲಿನ ಕಿರುಕುಳ ತಪ್ಪಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ನಿರ್ದೇಶನ ನೀಡಿದ್ದಾರೆ.

ಮಿತಿ ಮೀರಿ ಬಡ್ಡಿ ವಿಧಿಸುವಂತಿಲ್ಲ: ಕರ್ನಾಟಕ ಲೇವಾದೇವಿದಾರರ ಅಧಿನಿಯಮ–1961ರಡಿಯಲ್ಲಿ 2024ರ ಡಿಸೆಂಬರ್ 31ರವರೆಗೆ 20,425 ಸಂಸ್ಥೆಗಳು ನೋಂದಣಿಯಾಗಿವೆ. ಅದರಲ್ಲಿ 6590 ಲೇವಾದೇವಿದಾರರು, 6772 ಪಾನ್ ಬ್ರೋಕರ್‌ಗಳು ಹಾಗೂ 7063 ಹಣಕಾಸು ಸಂಸ್ಥೆಗಳಿವೆ. ಹಣಕಾಸು ವ್ಯವಹಾರದಲ್ಲಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ ಕಾಯಿದೆ–2004ರ ಪ್ರಕಾರ ಭದ್ರತಾ ಸಾಲಗಳಿಗೆ ವರ್ಷಕ್ಕೆ ಶೇ.14 ಹಾಗೂ ಭದ್ರತೆ ಇಲ್ಲದ ಸಾಲಗಳಿಗೆ ವರ್ಷಕ್ಕೆ ಗರಿಷ್ಠ ಶೇ.16ರ ಬಡ್ಡಿ ದರವನ್ನು ಲೇವಾದೇವಿದಾರರಿಗೆ ನಿಗದಿಪಡಿಸಲಾಗಿದೆ. ಇಂತಹ ಮಾಹಿತಿಯನ್ನು ಕಚೇರಿಗಳಲ್ಲಿ ಪ್ರಕಟಿಸಬೇಕು. ಸಾಲಗಾರರು ಸೂಕ್ಷ್ಮವಾಗಿ ಲೇವಾದೇವಿ ಸಂಸ್ಥೆಗಳ ಅಧಿಕೃತ ನೋಂದಣಿ, ಬಡ್ಡಿದರ, ವಸೂಲಿ ಪ್ರಕ್ರಿಯೆ ಇತ್ಯಾದಿಗಳ ಬಗ್ಗೆ ಖಚಿತಪಡಿಸಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

ಆರ್‌ಬಿಐಗೆ ವರದಿ: ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಂದ ಬ್ಯಾಂಕುಗಳಲ್ಲದ ಸಹಕಾರ ಸಂಘಗಳು, ಎನ್‌ಬಿಎಫ್‌ಸಿ, ಸರ್ಕಾರೇತರ ಸಂಸ್ಥೆಗಳು, ಟ್ರಸ್ಟ್‌ಗಳು, ಸಣ್ಣ ಅಂಗಡಿ ಮಾಲೀಕರು ಇನ್ನಿತರರು ಸಾಲ ಪಡೆಯುತ್ತಾರೆ. ಸಹಕಾರ ಸಂಸ್ಥೆಗಳನ್ನು ಸಹಕಾರ ಇಲಾಖೆ, ಬ್ಯಾಂಕ್ ಅಲ್ಲದ ಆರ್ಥಿಕ ಸಂಸ್ಥೆಗಳ(ಎನ್‌ಬಿಎಫ್‌ಸಿ)ನ್ನು ಆರ್‌ಬಿಐ ಮೂಲಕ ನೋಂದಣಿ ಮತ್ತು ಮೇಲ್ವಿಚಾರಣೆ ಮಾಡಲಾಗುತ್ತಿದೆ. ಸಾ–ಧನ್ ಮತ್ತು ಮೈಕ್ರೋ ಫೈನಾನ್ಸ್ ಇಂಡಸ್ಟ್ರಿ ನೆಟ್‌ವರ್ಕ್ ಸಂಸ್ಥೆಗಳನ್ನು ಆರ್‌ಬಿಐ ಸ್ವಯಂ ನಿಯಂತ್ರಣಾ ಸಂಸ್ಥೆಗಳನ್ನಾಗಿ ನೇಮಿಸಿ, ಉತ್ತಮ ಲೇವಾದೇವಿ ಪದ್ಧತಿಗಳನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗಿದೆ. ಕರ್ನಾಟಕದಲ್ಲಿ ಕೇವಲ 31 ಮೈಕ್ರೋ ಫೈನಾನ್ಸ್ ಇಂಡಸ್ಟ್ರಿಗಳು ಅಸ್ತಿತ್ವದಲ್ಲಿದ್ದು, ಅಸೋಸಿಯೇಷನ್ ಆಫ್ ಕರ್ನಾಟಕ ಮೈಕ್ರೋ ಫೈನಾನ್ಸ್ ಇನಸ್ಟಿಟ್ಯೂಷನ್‌ನ ಸದಸ್ಯತ್ವ ಪಡೆದಿವೆ. ರಾಜ್ಯದಲ್ಲಿ ಈ ಸಂಸ್ಥೆಗಳ 3090 ಶಾಖೆಗಳಿದ್ದು, 37,967 ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಒಟ್ಟು 1,09,88,332 ಖಾತೆಗಳಲ್ಲಿ 59,367.76 ಕೋಟಿ ರೂ. ಬಾಕಿ ಉಳಿದಿದೆ. ನಿಯಮಗಳನ್ನು ಪಾಲಿಸದ ಹಣಕಾಸು ಸಂಸ್ಥೆಗಳ ಬಗ್ಗೆ ಮೇಲ್ವಿಚಾರಣಾ ಸಂಸ್ಥೆಗಳ ಮೂಲಕ ಆರ್‌ಬಿಐಗೆ ವರದಿ ನೀಡಲಾಗುತ್ತದೆ. ಬಳಿಕ ಆರ್‌ಬಿಐ ಒಪ್ಪಿಗೆಯೊಂದಿಗೆ ಅಂತಹ ಸಂಸ್ಥೆಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಲಾಗಿದೆ.

ಅನುಸರಿಸಬೇಕಾದ ಕ್ರಮಗಳು: ಮೈಕ್ರೋ ಫೈನಾನ್ಸ್ ಇನ್‌ಸ್ಟಿಟ್ಯೂಷನ್(ಎಂಎಫ್‌ಐ), ಮನಿ ಲೆಂಡಿಂಗ್ ಏಜೆನ್ಸಿ ಅಥವಾ ಸಂಸ್ಥೆಗಳ ಎಲ್ಲಾ ಸಾಲಗಳ ಮಂಜೂರಾತಿ ಹಾಗೂ ವಿತರಣೆ ಪ್ರಕ್ರಿಯೆಯಲ್ಲಿ ಕಡ್ಡಾಯವಾಗಿ ನಿಯಮ ಪಾಲನೆ ಮಾಡಬೇಕು. ಸಾಲದ ನಿಯಮಗಳ ಬಗ್ಗೆ ಸ್ಥಳೀಯ ಭಾಷೆಯಲ್ಲಿ ಅಥವಾ ಆತನಿಗೆ ಅರ್ಥವಾಗುವ ಭಾಷೆಯಲ್ಲಿ ತಿಳಿಸಬೇಕು. ಸಾಲದ ಅರ್ಜಿಯಲ್ಲಿ ಷರತ್ತುಗಳ ಬಗ್ಗೆ ಮಾಹಿತಿ ನೀಡಿ, ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಸಹಾಯ ಮಾಡಬೇಕು. ಅಗತ್ಯ ದಾಖಲೆಗಳ ಬಗ್ಗೆ ಮಾಹಿತಿ ನೀಡಬೇಕು. ನಗದು ಪುಸ್ತಕ, ಲೆಡ್ಜರ್ ಮತ್ತು ಇತರ ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕು. ಸಾಲ ನೀಡಿದ ದಿನಾಂಕದಿಂದ ಏಳು ದಿನಗಳಲ್ಲಿ ಸಾಲಗಾರನಿಗೆ ನಿಗದಿತ ನಮೂನೆಯಲ್ಲಿ ಸಾಲದ ಮೊತ್ತ, ನೀಡಿದ ದಿನಾಂಕ, ಮುಕ್ತಾಯದ ಅವಧಿ, ಸಂಸ್ಥೆಯ ಕಾರ್ಯನಿರ್ವಾಹಕರ ಹೆಸರು, ವಿಳಾಸ, ನಿಯಮಾನುಸಾರ ವಿಧಿಸಲಾದ ಬಡ್ಡಿದರ ಸ್ಪಷ್ಟವಾಗಿರುವ ಲಿಖಿತ ದಾಖಲೆಯನ್ನು ತಲುಪಿಸಬೇಕು. ಸಾಲಗಾರನು ಮಾಡುವ ಪಾವತಿಗೆ ಪ್ರತಿಯಾಗಿ ಸಹಿ ಮಾಡಿದ ರಶೀದಿ ನೀಡಬೇಕು. ಸಾಲಗಾರನ ಲಿಖಿತ ಬೇಡಿಕೆಯ ಮೇರೆಗೆ ಸಾಲಕ್ಕೆ ಸಂಬಂಧಿಸಿದ ಯಾವುದೇ ದಾಖಲೆಯ ನಕಲನ್ನು ನೀಡಬೇಕು. ಸಾಲಗಾರರಿಂದ ಪಡೆದ ಭದ್ರತೆಯನ್ನು ಸ್ಪಷ್ಟವಾಗಿ ತಿಳಿಸಬೇಕು ಎಂದು ತಿಳಿಸಲಾಗಿದೆ.

ಸ್ವ–ಸಹಾಯ ಸಂಘಗಳು: ಜನಸಾಮಾನ್ಯರೂ ಈ ವಿಧಾನಗಳ ಬಗ್ಗೆ ತಿಳುವಳಿಕೆ ಹೊಂದಿರಬೇಕು. ತಮ್ಮ ಅಧಿಕೃತ ಹಕ್ಕು–ಬಾಧ್ಯತೆಗಳ ಬಗ್ಗೆ ಖಚಿತಪಡಿಸಿಕೊಂಡ ನಂತರ ಸಾಲ ತೆಗೆದುಕೊಳ್ಳಬೇಕು. ಮಹಿಳಾ ಸ್ವ–ಸಹಾಯ ಗುಂಪುಗಳಿಂದ ಸಾಲ ಪಡೆಯುವ ವ್ಯವಸ್ಥೆ ಇದ್ದು, ಶೇ.99 ರಷ್ಟು ಸಾಲ ಮರುಪಾವತಿ ಆಗುತ್ತಿದೆ. ಬ್ಯಾಂಕುಗಳಂತೆ ದಾಖಲಾತಿ ಒದಗಿಸುವುದು, ಜಾಮೀನು ನೀಡುವುದು ಹಾಗೂ ಆಸ್ತಿಗಳ ಅಡಮಾನವಿಡುವಂತಹ ಕ್ಲಿಷ್ಟ ವಿಧಾನವಿಲ್ಲದೆ ಸುಲಭವಾಗಿ ಸಾಲ ಸಿಗುವುದರಿಂದ ಬಹುತೇಕರು ಇಂತಹ ವ್ಯವಸ್ಥೆಗಳಿಗೆ ಮೊರೆ ಹೋಗುತ್ತಾರೆ ಎಂದು ಮಾಹಿತಿ ನೀಡಲಾಗಿದೆ.

ಜನರ ಬಡತನದಿಂದ ಹೊರತಂದಿದ್ದೇವೆ

ಜನರು 10 ವರ್ಷದಿಂದ ಸೇವೆ ಮಾಡಲು ನನಗೆ ಅವಕಾಶ ನೀಡಿದ್ದಾರೆ. ಅವರಿಗೆ ಧನ್ಯವಾದ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ತಮ್ಮ ಸರ್ಕಾರದ 'ಹರ್ ಘರ್ ಜಲ ಮಿಷನ್' ಬಗ್ಗೆ ಮಾತನಾಡಿದ ಪ್ರಧಾನಿ ಮೋದಿ ಈ ವೇಳೆ ವಿರೋಧ ಪಕ್ಷಗಳನ್ನು ಟೀಕಿಸಿದ್ದಾರೆ. ಕೆಲವರು ಜಕುಝಿ, ಐಷಾರಾಮಿ ಸ್ನಾನದ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸುತ್ತಾರೆ. ಆದರೆ ನಾವು ಹರ್ ಘರ್ ಜಲ ಅಭಿಯಾನದ ಮೂಲಕ ಪ್ರತಿ ಮನೆಗೆ ಶುದ್ಧ ನೀರು ತಲುಪಿಸುವತ್ತ ಗಮನ ಹರಿಸಿದ್ದೇವೆ ಎಂದು ಆಮ್ ಆದ್ಮಿ ಪಕ್ಷದ ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ಅವರ ಹೆಸರು ಹೇಳದೆಂಯೇ ಅವರ ವಿರುದ್ಧ ಪರೋಕ್ಷವಾಗಿ ಮೋದಿ ಚಾಟಿ ಬೀಸಿದ್ದಾರೆ.

ಕೆಲವು ನಾಯಕರ ಮನೆಯಲ್ಲಿ ಸ್ವಿಮ್ಮಿಂಗ್ ಪೂಲ್ ಕಟ್ಟಿಸಿ ಕೊಂಡಿದ್ದಾರೆ. ನಾವು ಮನೆಮನೆಗಳಿಗೆ ಕುಡಿಯುವ ನೀರು ಕೊಟ್ಟಿದ್ದೇವೆ. ಹೀಗೆ 12 ಕೋಟಿ ಮನೆಗಳಿಗೆ ಕುಡಿಯುವ ನೀರು ಕೊಟ್ಟಿದ್ದೇವೆ. ನಮ್ಮ ಪ್ರಯತ್ನ ಬಡವರ ಸಮಸ್ಯೆಗಳಿಗೆ ಪರಿಹಾರ ಹುಡುಕುವುದಾಗಿರುತ್ತದೆ. ನಾವು 10 ಕೋಟಿ ನಕಲಿ ಜನರನ್ನು ತೆಗೆದುಹಾಕಿದ್ದೇವೆ. ತಪ್ಪು ಕೈಗಳಿಗೆ ಭಾರತದ ಯೋಜನೆ ಹೋಗುವುದನ್ನು ತಪ್ಪಿಸಿದ್ದೇವೆ. 3 ಲಕ್ಷ ಕೋಟಿ ಹಣ ತಪ್ಪು ಜನರಿಗೆ ಹೋಗುವುದನ್ನು ತಪ್ಪಿಸಿದ್ದೇವೆ ಎಂದು ಮೋದಿ ಹೇಳಿದ್ದಾರೆ. 2014ರಿಂದ ಅಧಿಕಾರ ನಡೆಸಲು ನಮಗೆ ಅವಕಾಶ ಸಿಕ್ಕಿದೆ. ಯುವಕರ ಪರ ಕೆಲಸ ಮಾಡಿದ್ದೇವೆ. ಬಾಹ್ಯಾಕಾಶ, ರಕ್ಷಣಾ ಕ್ಷೇತ್ರ, ಉತ್ಪಾದನಾ ಕ್ಷೇತ್ರದಲ್ಲಿ ಉತ್ತೇಜನ ನೀಡಿದ್ದೇವೆ. 12 ಲಕ್ಷದ ವರೆಗಿನ ಆದಾಯಕ್ಕೆ ತೆರಿಗೆ ವಿನಾಯಿತಿ ನೀಡಿದ್ದೇವೆ. ಎಐ, ತ್ರಿಡಿ ಪ್ರಿಂಟಿಂಗ್, ಗೇಮಿಂಗ್ ಕ್ಷೇತ್ರದಲ್ಲೂ ಪ್ರಯತ್ನಗಳು ಮುಂದುವರೆದಿವೆ. ಸಿಂಗಲ್ ಎಐಗಿಂತ ಡಬಲ್ ಎಐ ಮುಖ್ಯ. ಆರ್ಟಿಫಿಷಿಯಲ್ ಇಂಟೆಲಿಜನ್ಸ್ ಜೊತೆಗೆ ಆಸ್ಪಿರೇಷನ್ ಇಂಡಿಯಾ ಮುಖ್ಯ ಎಂದು ಮೋದಿ ಅಭಿಪ್ರಾಯಪಟ್ಟಿದ್ದಾರೆ.

ಗುಡಿಸಲುಗಳಲ್ಲಿ ಫೋಟೊ ಕ್ಲಿಕ್ಕಿಸಿಕೊಳ್ಳುವವರು ಬಡತನದ ಬಗ್ಗೆ ಮಾತನಾಡುತ್ತಾರೆ!

ಬಡವರ ಗುಡಿಸಲುಗಳಲ್ಲಿ ಫೋಟೊ ಕ್ಲಿಕ್ಕಿಸಿಕೊಂಡು ಸಂಭ್ರಮಿಸುವವರು ಸಂಸತ್ತಿನಲ್ಲಿ ಬಡವರ ಬಗ್ಗೆ ಮಾತನಾಡುವುದು ಬೇಸರ ತರಿಸುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಛಾವಣಿಯಿಲ್ಲದ ಮನೆಯಲ್ಲಿ ಜೀವಿಸುವವರ ಬದುಕು ಹೇಗಿರುತ್ತದೆ ಎಂದು ಇಂಥವರಿಗೆ (ವಿರೋಧ ಪಕ್ಷ) ಹೇಗೆ ಅರ್ಥವಾಗುತ್ತದೆ ಎಂದು ಕುಟುಕಿದ್ದಾರೆ.

ನಾವು ಸುಳ್ಳು ಭರವಸೆಗಳನ್ನು ನೀಡುವುದಿಲ್ಲ. ನಿಜವಾದ ಅಭಿವೃದ್ಧಿಯನ್ನು ಜನರಿಗೆ ನೀಡುತ್ತೇವೆ. ವಿಕಸಿತ ಭಾರತದ ಸಂಕಲ್ಪವನ್ನು ಬಲಪಡಿಸುವತ್ತ ಗಮನಹರಿಸಲಾಗುವುದು ಎಂದು ಮೋದಿ ಹೇಳಿದ್ದಾರೆ. ಬಡವರ ನೋವು, ಜನಸಾಮಾನ್ಯರು ಎದುರಿಸುವ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲದವರು ಬಡವರ ಬಗ್ಗೆ ಮಾತನಾಡುತ್ತಾರೆ. ಬಡವರ ಸಮಸ್ಯೆಗಳನ್ನು ಅರಿತುಕೊಳ್ಳುವ ಉತ್ಸಾಹ ಬೇಕು. ಆದರೆ, ಕೆಲವರಿಗೆ ಅದು ಇರುವುದಿಲ್ಲ ಎಂದು ರಾಹುಲ್ ಗಾಂಧಿ ವಿರುದ್ಧ ಮೋದಿ ಟೀಕಾ ಪ್ರಹಾರ ನಡೆಸಿದ್ದಾರೆ. ಜನವರಿ 31ರಂದು ರಾಷ್ಟ್ರಪತಿಗಳು ಸಂಸತ್ತಿನ ಜಂಟಿ ಸದನವನ್ನು ಉದ್ದೇಶಿಸಿ ಭಾಷಣ ಮಾಡಿದರು. ಈ ವೇಳೆ ಸೋನಿಯಾ ಗಾಂಧಿ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಸಂಸತ್ತಿನ ಸಂಕೀರ್ಣದಲ್ಲಿಯೇ ರಾಷ್ಟ್ರಪತಿಯವರ (ದ್ರೌಪದಿ ಮುರ್ಮು) ಭಾಷಣ ನೀರಸವಾಗಿದೆ ಎಂದು ಚರ್ಚಿಸುತ್ತಿದ್ದರು ಎಂದು ಮೋದಿ ತಮ್ಮ ಭಾಷಣದ ವೇಳೆ ಉಲ್ಲೇಖಿಸಿದ್ದಾರೆ.

ವಿಪಕ್ಷಗಳಿಗೆ ಮೋದಿ ಮೊನಚಾದ ಪ್ರತ್ಯುತ್ತರ

ನಮ್ಮ ಸರ್ಕಾರ ಅಪಾರ ಹಣ ಉಳಿಸಿದೆ: ನಮ್ಮ ಸರ್ಕಾರ ಅಪಾರ ಪ್ರಮಾಣದ ಹಣ ಉಳಿಸಿದೆ. ಇದನ್ನು ನಾವು ಆಸೆಗಳ ಗೋಪುರ ಕಟ್ಟಲು ಬಳಸಿಲ್ಲ. ನಾವು ಸುಳ್ಳು ಭರವಸೆಗಳನ್ನು ನೀಡಿಲ್ಲ. ವಾಸ್ತವವಾಗಿ ಜನರ ಅಭಿವೃದ್ಧಿ ಮಾಡಿದ್ದೇವೆ ಎಂದು ತಿಳಿಸಿದರು.

SC, ST, OBCಗೆ ಮೆಡಿಕಲ್ ಸೀಟು ಹೆಚ್ಚಳ: ದೇಶದಲ್ಲಿ ಸದ್ಯ 780 ಮೆಡಿಕಲ್ ಕಾಲೇಜುಗಳಿವೆ. ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ವಿದ್ಯಾರ್ಥಿಗಳಿಗಾಗಿ ಸೀಟುಗಳನ್ನು ಹೆಚ್ಚಿಸಲಾಗಿದೆ ಎಂದು ಹೇಳಿದರು.

ರಾಹುಲ್ ಗಾಂಧಿ ವಿರುದ್ಧ ಟೀಕಾಸ್ತ್ರ ಪ್ರಯೋಗ: ಕೆಲವರು ತಾವು ಸಾಕಷ್ಟು ತಿಳಿದುಕೊಂಡಿದ್ದೇವೆ ಎಂಬುದನ್ನು ಪ್ರದರ್ಶಿಸಲು ವಿದೇಶಾಂಗ ನೀತಿ ಬಗ್ಗೆ ಮಾತನಾಡುತ್ತಾರೆ. ಅವರು ಹೀಗೆ ಮಾತನಾಡುವುದರಿಂದ ದೇಶಕ್ಕಾಗುವ ತೊಂದರೆಗಳ ಕುರಿತು ಯೋಚಿಸುವುದಿಲ್ಲ ಎಂದು ಪರೋಕ್ಷವಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಟೀಕಾಸಮರ ನಡೆಸಿದರು.

ತಮ್ಮ ಜೇಬಿನಲ್ಲಿ ಸಂವಿಧಾನ ಇಟ್ಟುಕೊಂಡು ಓಡಾಡುತ್ತಿರುವವರು ಮುಸ್ಲಿಂ ಮಹಿಳೆಯರು ಅಸಹನೀಯ ಬದುಕು ಸಾಗಿಸುವಂತೆ ಮಾಡಿದ್ದರು. ತ್ರಿವಳಿ ತಲಾಖ್ ಪದ್ಧತಿಯನ್ನು ಕೊನೆಗೊಳಿಸುವ ಮೂಲಕ ನಾವು ಅವರ ಹಕ್ಕುಗಳನ್ನು ನೀಡಿದೆವು ಎಂದು ಹೇಳಿದರು.

ಜಾತಿ ಕುರಿತು ಮಾತನಾಡುವುದು ಕೆಲವರಿಗೆ ಫ್ಯಾಷನ್: ಇದೇ ವೇಳೆ, ಜಾತಿಯ ಕುರಿತು ಮಾತನಾಡುವುದು ಕೆಲವರಿಗೆ ಫ್ಯಾಷನ್ ಆಗಿದೆ. ಕಳೆದ 30–35 ವರ್ಷಗಳಿಂದ ವಿವಿಧ ಪಕ್ಷಗಳ ಸಂಸತ್ ಸದಸ್ಯರು ಒಬಿಸಿ ಆಯೋಗಕ್ಕೆ ಸಾಂವಿಧಾನಿಕ ಮಾನ್ಯತೆ ನೀಡುವಂತೆ ಒತ್ತಾಯಿಸುತ್ತಿದ್ದರು. ಒಬಿಸಿಗೆ ಆಯೋಗಕ್ಕೆ ಸಾಂವಿಧಾನಿಕ ಮಾನ್ಯತೆ ಕೊಟ್ಟವರು ನಾವು. ಇಂದು ಆ ಕುರಿತು ಮಾತನಾಡುತ್ತಿರುವವರು ಇದನ್ನು ತಿಳಿದುಕೊಳ್ಳಬೇಕು ಎಂದು ಮೋದಿ ಹೇಳಿದರು.

ಅವರದ್ದು ತುಷ್ಟೀಕರಣ, ನಮ್ಮದು ಸಂತುಷ್ಟೀಕರಣ: ಕೆಲವರು ತುಷ್ಟೀಕರಣದ ಹಾದಿ ಹಿಡಿದರು. ಆದರೆ ನಾವು ಸಂತುಷ್ಟೀಕರಣದ ಹಾದಿ ಹಿಡಿದೆವು. ಶೇ.100ರಷ್ಟು ಸರ್ಕಾರದ ಯೋಜನೆಗಳು ಎಲ್ಲ ಸಮುದಾಯದ ಜನರನ್ನು ತಲುಪುವುದೇ ನಿಜವಾದ ಸಾಮಾಜಿಕ ನ್ಯಾಯ, ಜಾತ್ಯತೀತತೆ ಮತ್ತು ಸಂವಿಧಾನಕ್ಕೆ ನೀಡುವ ಗೌರವ ಎಂದು ಮೋದಿ ಪ್ರತಿಪಾದಿಸಿದರು.

ಇಂದು ದೆಹಲಿ ವಿಧಾನಸಭಾ ಮತದಾನ


ನವದೆಹಲಿ,ಜ.4– ಹಿಂದೆಂದೂ ಕಾಣದ ಜಿದ್ದಾ ಜಿದ್ದಿನ ಕುರುಕ್ಷೇತ್ರವಾಗಿರುವ ರಾಷ್ಟ್ರ ರಾಜಧಾನಿ ನವದೆಹಲಿಯ ವಿಧಾನಸಭೆಗೆ ನಾಳೆ ಮತದಾನ ನಡೆಯಲಿದ್ದು ಎಎಪಿ, ಬಿಜೆಪಿ ಹಾಗೂ ಕಾಂಗ್ರೆಸ್ ಸೇರಿದಂತೆ ಪಕ್ಷೇತರ ಅಭ್ಯರ್ಥಿಗಳ ರಾಜಕೀಯ ಭವಿಷ್ಯವನ್ನು ಮತದಾರ ಬರೆಯಲಿದ್ದಾನೆ.

ಸಾಮಾನ್ಯ ಆಡಳಿತ ಇಲಾಖೆ ಹೊರಡಿಸಿರುವ ಅಧಿಸೂಚನೆಯಲ್ಲಿ ಮತದಾನದ ದಿನವಾದ ನಾಳೆ ದೆಹಲಿ ಸರ್ಕಾರ ಸಾರ್ವಜನಿಕ ರಜಾದಿನವೆಂದು ಘೋಷಿಸಿದೆ. ನಗರದಾದ್ಯಂತ ಎಲ್ಲಾ ಸರ್ಕಾರಿ ಮತ್ತು ಖಾಸಗಿ ವಲಯದ ಕಚೇರಿಗಳಿಗೆ ರಜೆ ಅನ್ವಯಿಸಲಿದೆ ಎಂದು ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ತಿಳಿಸಿದ್ದಾರೆ. 70 ಸದಸ್ಯ ಬಲದ ದೆಹಲಿ ವಿಧಾನಸಭೆಗೆ ಫೆಬ್ರವರಿ 5 ರಂದು ಚುನಾವಣೆ ನಡೆಯಲಿದ್ದು, ಫೆಬ್ರವರಿ 8ರಂದು ಮತ ಎಣಿಕೆ ನಡೆದು ಅಂದೇ ಫಲಿತಾಂಶ ಹೊರಬೀಳಲಿದೆ. ದೆಹಲಿಯ 70 ವಿಧಾನಸಭಾ ಸ್ಥಾನಗಳಿಗೆ ಒಟ್ಟು 1.56 ಕೋಟಿ ಮತದಾರರು ಮತ ಚಲಾಯಿಸಲಿದ್ದಾರೆ.ಕಣದಲ್ಲಿ 699 ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೆ.

ಈಗಾಗಲೇ ಬಹಿರಂಗ ಚುನಾವಣಾ ಪ್ರಚಾರ ಅಂತ್ಯಗೊಂಡಿದ್ದು, ಚುನಾವಣಾ ಅಧಿಕಾರಿ, ಸಿಬ್ಬಂದಿಗಳು ಇಂದು ಸಂಜೆ ಮತಗಟ್ಟೆಗಳಿಗೆ ತಲುಪಿದ್ದಾರೆ, ದೆಹಲಿಯಲ್ಲಿ ಸರ್ಕಾರ ರಚನೆ ಮಾಡಲು ಬೇಕಾದ ಮ್ಯಾಜಿಕ್ ನಂಬರ್ 36. ರಾಜ್ಯದ ಆಡಳಿತ ಪಕ್ಷ ಎಎಪಿ. ಈ ಬಾರಿ ಚುನಾವಣೆಯಲ್ಲಿ ಎಎಪಿ, ಕಾಂಗ್ರೆಸ್ ಮತ್ತು ಬಿಜೆಪಿ ತ್ರಿಕೋಣ ಸ್ಪರ್ಧೆ ಇದೆ.

ಚುನಾವಣೆಯನ್ನು ನ್ಯಾಯಸಮತವಾಗಿ ನಡೆಸಲು ಚುನಾವಣಾ ಆಯೋಗ ಸಕಲ ರೀತಿಯಲ್ಲಿ ತಯಾರಿ ನಡೆಸಿದೆ. 3 ಸಾವಿರ ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು ಎಲ್ಲವೂ ಸೂಕ್ಷ್ಮ ಎಂದು ಗುರುತಿಸಲಾಗಿದೆ. ಆದ್ದರಿಂದ ಚುನಾವಣಾ ಭದ್ರತೆಗೆ ಹೆಚ್ಚಿನ ಗಮನ ನೀಡಲಾಗಿದೆ. 150 ಪ್ಯಾರಾ ಮಿಲಿಟರಿ ಪಡೆಗಳನ್ನು ಭದ್ರತೆಗಾಗಿ ನಿಯೋಜನೆ ಮಾಡಲಾಗಿದೆ. ಅಲ್ಲದೇ ದೆಹಲಿಯ ತುಂಬಾ ಗುಜರಾತ್, ಕರ್ನಾಟಕದ 30,000 ಪೊಲೀಸ್ ಸಿಬ್ಬಂದಿ ನಿಯೋಜನೆ ಮಾಡಲಾಗಿದೆ.

ಇಂದು ಮಹಾಕುಂಭಮೇಳದ ಸಂಗಮದಲ್ಲಿ ಪ್ರಧಾನಿ ಮೋದಿ ಪವಿತ್ರ ಸ್ನಾನ



ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳದಲ್ಲಿ ಭಾಗವಹಿಸುತ್ತಿದ್ದು, ನಾಳೆ ಬೆಳಗ್ಗೆ 11 ಗಂಟೆ ಸುಮಾರಿಗೆ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಲಿದ್ದಾರೆ ಎಂದು ಪ್ರಧಾನಿ ಕಚೇರಿ ತಿಳಿಸಿದೆ. ಪೌಷ ಪೂರ್ಣಿಮೆಯಂದು(ಜನವರಿ 13, 2025) ಪ್ರಾರಂಭವಾದ ಮಹಾ ಕುಂಭಮೇಳ 2025, ವಿಶ್ವದ ಅತಿದೊಡ್ಡ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಮೇಳವಾಗಿದ್ದು, ಪ್ರಪಂಚದಾದ್ಯಂತದ ಭಕ್ತರನ್ನು ಆಕರ್ಷಿಸುತ್ತಿದೆ. ಫೆ.26 ರಂದು ಮಹಾಶಿವರಾತ್ರಿಯವರೆಗೆ ಈ ಮಹಾ ಕುಂಭ ನಡೆಯಲಿದೆ ಎಂದು ಪ್ರಧಾನಿ ಕಚೇರಿ ಬಿಡುಗಡೆ ಮಾಡಿದ ಪ್ರಕಟಣೆ ತಿಳಿಸಿದೆ.

ಪ್ರಧಾನಿ ಮೋದಿ ಅವರು ಫೆಬ್ರವರಿ 5 ರಂದು ಪ್ರಯಾಗ್‌ರಾಜ್‌ನಲ್ಲಿ ನಡೆಯುವ ಮಹಾ ಕುಂಭಮೇಳ 2025ರಲ್ಲಿ ಭಾಗವಹಿಸಲಿದ್ದಾರೆ. ಬೆಳಗ್ಗೆ 11 ಗಂಟೆ ಸುಮಾರಿಗೆ ಪ್ರಧಾನಿ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿ ಗಂಗಾ ಮಾತೆಗೆ ಪ್ರಾರ್ಥನೆ ಸಲ್ಲಿಸಲಿದ್ದಾರೆ ಎಂದು ಪ್ರಧಾನಿ ಕಚೇರಿ ತಿಳಿಸಿದೆ.

ಭಾರತದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಉತ್ತೇಜಿಸುವ ಮತ್ತು ಸಂರಕ್ಷಿಸುವ ಬದ್ಧತೆಗೆ ಅನುಗುಣವಾಗಿ, ತೀರ್ಥಯಾತ್ರೆಯ ಸ್ಥಳಗಳಲ್ಲಿ ಮೂಲ ಸೌಕರ್ಯ ಮತ್ತು ಸೌಲಭ್ಯಗಳನ್ನು ಹೆಚ್ಚಿಸಲು ಪ್ರಧಾನಿ ಮೋದಿ ನಿರಂತರವಾಗಿ ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಪ್ರಕಟಣೆ ಹೇಳಿದೆ. ತಿಳಿಸಿದೆ.

ಎರಡನೆಯ ಪತಿಯಿಂದಲೂ ಜೀವನಾಂಶ ಕೇಳಬಹುದು: ಸುಪ್ರೀಂಕೋರ್ಟ್

ನವದೆಹಲಿ, ಫೆ.4–ಮೊದಲ ಮದುವೆಯು ಕಾನೂನಿನ ಪ್ರಕಾರ ಚಾಲ್ತಿಯಲ್ಲಿ ಇದ್ದರೂ, ಎರಡನೆಯ ಪತಿಯಿಂದ ಜೀವನಾಂಶ ಕೇಳುವ ಹಕ್ಕು ಮಹಿಳೆಗೆ ಅಪರಾಧ ದಂಡ ಪ್ರಕ್ರಿಯಾ ಸಂಹಿತೆಯ (ಸಿಆರ್‌ಪಿಸಿ) ಸೆಕ್ಷನ್ 125ರ ಅಡಿಯಲ್ಲಿ ಇರುತ್ತದೆ ಎಂದು ಸುಪ್ರೀಂಕೋರ್ಟ್ ಹೇಳಿದೆ.

ಮಹಿಳೆಯೊಬ್ಬರು ಸಲ್ಲಿಸಿದ್ದ ಮೇಲ್ಮನವಿಯನ್ನು ಮಾನ್ಯ ಮಾಡಿದ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಸತೀಶ್ ಚಂದ್ರ ಶರ್ಮ ಅವರು ಇರುವ ವಿಭಾಗೀಯ ಪೀಠವು, ಸೆಕ್ಷನ್ 125ರ ಅಡಿಯಲ್ಲಿ ಸಿಗುವ ಜೀವನಾಂಶವು ಮಹಿಳೆ ಪಡೆದುಕೊಳ್ಳುವ ಸೌಲಭ್ಯವಲ್ಲ; ಅದು ಪತಿಯ ಪಾಲಿನ ಕರ್ತವ್ಯ ಎಂದು ಹೇಳಿದೆ. ಮಹಿಳೆ ಮತ್ತು ಪ್ರತಿವಾದಿ ಪುರುಷ ವಿವಾಹಿತರಂತೆ ಇದ್ದರು, ಇಬ್ಬರೂ ಒಟ್ಟಾಗಿ ಮಗುವನ್ನು ಸಲಹುತ್ತಿದ್ದರು. ಹೀಗಾಗಿ, ಜೀವನಾಂಶದ ಪ್ರಯೋಜನವು ಮಹಿಳೆಗೂ ಸಿಗಬೇಕು ಎಂದು ಆಕೆಯ ಪರ ವಕೀಲರು ವಾದಿಸಿದ್ದರು.

ಮೈಸೂರಿನ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರವನ್ನು ಬೆಂಗಳೂರಿಗೆ ಸ್ಥಳಾಂತರಿಸುವ ಚಿಂತನೆ

ಮೈಸೂರು,ಫೆ.4(ಆರ್‌ಕೆ)– ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ (ಸಿಇಎಸ್‌ಸಿಕೆ)ಕ್ಕೆ ಸ್ವಾಯತ್ತತೆ ನೀಡಿ ಬೆಂಗಳೂರಿಗೆ ಸ್ಥಳಾಂತರಿಸಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ.



ಧರ್ಮೇಂದ್ರ ಪ್ರಧಾನ್

ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ (ಸಿಐಐಎಲ್) ವ್ಯಾಪ್ತಿಯಿಂದ ಬೇರ್ಪಡಿಸಿ ರಾಜ್ಯ ಸರ್ಕಾರಕ್ಕೆ ಒಪ್ಪಿಸುವಂತೆ ಇತ್ತೀಚೆಗಷ್ಟೇ ಕನ್ನಡ ಅಭಿವೃದ್ಧಿ ಪ್ರಾಧಿಕಾರ (ಕೆಡಿಎ)ದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ನೇತೃತ್ವದ ನಿಯೋಗವು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ಭೇಟಿ ಮಾಡಿ ಮನವಿ ಮಾಡಿತ್ತು.

2008ರಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನ ನೀಡಿ 16 ವರ್ಷ ತುಂಬಿದ ಬಳಿಕವೂ ಸಂಸ್ಥೆಯು ತನ್ನದೇ ಸ್ವಂತ ಕಟ್ಟಡ ಹೊಂದಿಲ್ಲ ಹಾಗೂ ಆಡಳಿತದ ಎಲ್ಲಾ ವೆಚ್ಚಗಳಿಗೂ ಕೇಂದ್ರೀಯ ಭಾಷಾ ಸಂಸ್ಥಾನನ್ನೇ ಅವಲಂಬಿಸಿರುವುದರಿಂದ ಅಭಿವೃದ್ಧಿಗೆ ಅಡೆತಡೆಯಾಗಿದೆ. ಅಲ್ಲದೆ ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನ ಮಂಜೂರಾಗದ ಕಾರಣ ಸಂಸ್ಥೆಯ ಚಟುವಟಿಕೆಗಳಿಗೆ ತೊಂದರೆಯಾಗಿದೆ. ಈ ಹಿನ್ನೆಲೆಯಲ್ಲಿ ಸಂಸ್ಥೆಗೆ ಸ್ವಾಯತ್ತತೆ ನೀಡಿ ತಮಿಳುನಾಡು ಮಾದರಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಹಸ್ತಾಂತರಿಸುವಂತೆ ನಿಯೋಗವು ಮನವಿ ಮಾಡಿತ್ತು.

ಬಿಳಿಮಲೆ ಅವರ ನಿಯೋಗದ ಮನವಿಯನ್ನು ಸ್ವೀಕರಿಸಿದ ಕೇಂದ್ರ ಸಚಿವರು, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತತೆ ನೀಡುವುದು ಹಾಗೂ ಅನುದಾನ ನೀಡುವ ಬಗ್ಗೆ ಭರವಸೆಯನ್ನೇನೋ ನೀಡಿದ್ದಾರೆ ಎಂದು ಹೇಳಲಾಗಿದೆ. ಆದರೆ ಸಂಸ್ಥೆಯನ್ನು ರಾಜ್ಯ ಸರ್ಕಾರದ ವಶಕ್ಕೆ ಒಪ್ಪಿಸುವ ಪ್ರಸ್ತಾವನೆಯನ್ನು ತಿರಸ್ಕರಿಸಿರುವ ಸಚಿವರು, ಕೆಲ ರಾಜಕೀಯ ಕಾರಣಗಳಿಂದಾಗಿ ತಮಿಳುನಾಡಿನ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರವನ್ನು ಈ ಹಿಂದಿನ ಯುಪಿಎ ಸರ್ಕಾರವು ರಾಜ್ಯ ಸರ್ಕಾರಕ್ಕೆ ಹಸ್ತಾಂತರಿಸಿದೆ. ಶಾಸ್ತ್ರೀಯ ಭಾಷಾ ಉಪಕ್ರಮವು ಕೇಂದ್ರ ಸರ್ಕಾರದ ಯೋಜನೆಗಳಾಗಿರುವುದರಿಂದ ಬೇರೆ ಯಾವುದೇ ಕೇಂದ್ರಗಳನ್ನು ರಾಜ್ಯಕ್ಕೆ ವರ್ಗಾಯಿಸುವುದಿಲ್ಲ ಎಂದು ಸಚಿವರು ತಿಳಿಸಿದ್ದಾರೆ.

ಕನ್ನಡ ಮಾತ್ರವಲ್ಲದೆ ಎಲ್ಲಾ ಶಾಸ್ತ್ರೀಯ ಭಾಷಾ ಕೇಂದ್ರಗಳನ್ನು ಸಿಐಐಎಲ್ ವ್ಯಾಪ್ತಿಯಿಂದ ಹೊರತರಲಾಗುತ್ತದೆ. ಹಾಗೆಯೇ ಕೇಂದ್ರ ಸರ್ಕಾರದ ಅಡಿಯಲ್ಲಿ ಸ್ವಾಯತ್ತ ಸಂಸ್ಥೆಗಳಾಗಿ ಅಭಿವೃದ್ಧಿಪಡಿಸಲಾಗುತ್ತದೆ. ಕೇಂದ್ರದಲ್ಲಿ ಸಂಶೋಧನೆ ಮತ್ತು ಅಧ್ಯಯನಕ್ಕೆ ಹೆಚ್ಚು ಒತ್ತು ನೀಡಿ ಕನ್ನಡ ಭಾಷಾ ಶ್ರೀಮಂತಿಕೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ಅಗತ್ಯ ನೆರವು ನೀಡಲಿದೆ ಎಂದ ಸಚಿವರು, ಸಂಶೋಧನೆಗಳ ಅಗತ್ಯವಿರುವ ಅನುದಾನಕ್ಕಾಗಿ ತಾವು ಪ್ರಸ್ತಾವನೆ ಸಲ್ಲಿಸಿದ್ದಲ್ಲಿ ಅದನ್ನು ಪೂರ್ಣವಾಗಿ ಪರಿಗಣಿಸಲಾಗುವುದು ಎಂದೂ ನಿಯೋಗಕ್ಕೆ ತಿಳಿಸಿದ್ದಾರೆ ಎನ್ನಲಾಗಿದೆ.



ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ತಾತ್ಕಾಲಿಕ ಕಟ್ಟಡದ ಚಿತ್ರ.

“ಸ್ವಾಯತ್ತತೆ ಪಡೆದ ಬಳಿಕ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರವನ್ನು ಬೆಂಗಳೂರಿಗೆ ಸ್ಥಳಾಂತರಿಸಿದರೆ ಮಾತ್ರ ಕೇಂದ್ರದಲ್ಲಿನ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳು ಪರಿಣಾಮಕಾರಿಯಾಗಿ ನಡೆಯುತ್ತವೆ. ಬೆಂಗಳೂರಿನಲ್ಲಿ ವಿದ್ವಾಂಸರು, ಚಿಂತಕರು, ಬರಹಗಾರರು, ತಂತ್ರಜ್ಞರು, ಲೇಖಕರನ್ನು ಒಳಗೊಂಡ ಸಭೆಯನ್ನು ಆಯೋಜಿಸಿ ಅಲ್ಲಿಗೆ ಕೇಂದ್ರ ಶಿಕ್ಷಣ ಸಚಿವರನ್ನೂ ಕರೆಸಿ ಆಗು–ಹೋಗುಗಳ ಬಗ್ಗೆ ಚರ್ಚಿಸಲಾಗುವುದು. ಪ್ರಾಧಿಕಾರವು ಶಾಸ್ತ್ರೀಯ ಕನ್ನಡಕ್ಕೆ ಸಂಬಂಧಿಸಿದ ಸಂಶೋಧನಾ ಯೋಜನೆಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಿದರೆ ತಕ್ಷಣವೇ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ಸಚಿವರು ಭರವಸೆ ನೀಡಿರುವುದರಿಂದ ಪ್ರಾಧಿಕಾರವು ಈ ನಿಟ್ಟಿನಲ್ಲಿ ಕ್ರಮವಹಿಸಿ ಪ್ರಸ್ತಾವನೆಯನ್ನು ಸಲ್ಲಿಸಲಿದೆ.


–ಪುರುಷೋತ್ತಮ ಬಿಳಿಮಲೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ



ಪುರುಷೋತ್ತಮ ಬಿಳಿಮಲೆ

ಶಾಸ್ತ್ರೀಯ ಕನ್ನಡ ಭಾಷಾ ಕೇಂದ್ರವನ್ನು ಮೈಸೂರಿಂದ ಸ್ಥಳಾಂತರಿಸುವ ಪ್ರಸ್ತಾಪಕ್ಕೆ ಆಕ್ಷೇಪ

ಮೈಸೂರು, ಫೆ.4–ಕೇಂದ್ರ ಸರ್ಕಾರವು ಶಾಸ್ತ್ರೀಯ ಕನ್ನಡ ಅತ್ಯುನ್ನತ ಭಾಷಾ ಕೇಂದ್ರವನ್ನು ಭಾರತೀಯ ಭಾಷಾ ಸಂಸ್ಥೆಯಿಂದ ಪ್ರತ್ಯೇಕಿಸಿ, ಸ್ವಾಯತ್ತತೆ ನೀಡಿ ಮುಂದುವರಿಸುವ ನಿಲುವನ್ನು ಕನ್ನಡ ಕ್ರಿಯಾ ಸಮಿತಿ ಬೆಂಬಲಿಸುತ್ತದೆ. ಆದರೆ ಈ ಕೇಂದ್ರವನ್ನು ಮೈಸೂರಿನಿಂದ ಬೆಂಗಳೂರಿಗೆ ಸ್ಥಳಾಂತರಗೊಳಿಸುವ ಯೋಜನೆಯನ್ನು ಕೈಬಿಡಬೇಕೆಂದು ಸಮಿತಿ ಪ್ರಧಾನ ಕಾರ್ಯದರ್ಶಿ ಸ.ರ.ಸುದರ್ಶನ ಆಗ್ರಹಿಸಿದ್ದಾರೆ.



ಸ.ರ.ಸುದರ್ಶನ

ಕೇಂದ್ರವು, ಅಂತರರಾಷ್ಟ್ರೀಯ ಖ್ಯಾತಿಯ ಕೇಂದ್ರದಲ್ಲಿ ಇರಬೇಕೆಂದು, ಆಗ ಮಾತ್ರ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಯೋಜನೆಯನ್ನು ರೂಪಿಸಬಹುದೆಂದು ಕೇಂದ್ರ ಮಂತ್ರಿ ತಮ್ಮ ನಿಯೋಗದೊಂದಿಗೆ ಪ್ರಸ್ತಾಪಿಸಿದರು. ಆಗ, ತಾವು ಮೈಸೂರಿನಲ್ಲಿ ಸ್ಥಾಪಿತವಾಗುವುದು ಸೂಕ್ತ ಎಂಬುದಾಗಿ ಅಭಿಪ್ರಾಯ ತಿಳಿಸಿದ್ದಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪುರುಷೋತ್ತಮ ಬಿಳಿಮಲೆಯವರು ದೂರವಾಣಿಯಲ್ಲಿ ತಮ್ಮೊಂದಿಗೆ ಮಾತನಾಡುವಾಗ ತಿಳಿಸಿದರು. ಈ ವಿಷಯದಲ್ಲಿ ಮತ್ತೊಮ್ಮೆ ಪತ್ರ ಬರೆಯುವುದಾಗಿ ಹೇಳಿದ್ದಾರೆ ಎಂದು ಕನ್ನಡ ಕ್ರಿಯಾ ಸಮಿತಿ ಪ್ರಧಾನ ಕಾರ್ಯದರ್ಶಿ ಸ.ರ.ಸುದರ್ಶನ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇಂದ್ರವನ್ನು ಮೈಸೂರಿನಲ್ಲಿ ಉಳಿಸಿ ಅದರ ತಂತ್ರಜ್ಞಾನ ಘಟಕವನ್ನು ಬೆಂಗಳೂರಿನಲ್ಲಿ ಸ್ಥಾಪಿಸಬಹುದು ಎಂಬ ಕೇಂದ್ರ ಸಚಿವರ ಅನಿಸಿಕೆ ತಪ್ಪಾಗಿ ವರದಿ ಆಗಿರಲೂಬಹುದು ಎಂದು ತಾವು ಭಾವಿಸುವುದಾಗಿಯೂ ಅವರು ತಿಳಿಸಿದ್ದಾರೆ.

ಈ ಹಿಂದೆ ಸಾಹಿತಿಗಳು, ಕನ್ನಡಪರ ಸಂಘಟನೆಗಳು ಹಾಗೂ ಪ್ರಗತಿಪರ ಸಂಘಟನೆಗಳ ಪ್ರತಿನಿಧಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಮೈಸೂರಿನಲ್ಲಿ ಅದನ್ನು ಉಳಿಸಬೇಕೆಂದು ಆಗ್ರಹಿಸಿದಾಗ ಅದಕ್ಕೆ ಅವರು ಒಪ್ಪಿ ಮೈಸೂರಿನಲ್ಲಿ ಉಳಿಸಿದ್ದರು. ಈಗಲೂ ಅವರು ಕಾರ್ಯೋನ್ಮುಖರಾಗಿ ಮೈಸೂರಿನಲ್ಲಿ ಉಳಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕು ಎಂದು ಕನ್ನಡ ಕ್ರಿಯಾ ಸಮಿತಿ ಆಗ್ರಹಿಸುತ್ತದೆ ಎಂದು ಹೇಳಿದ್ದಾರೆ. ಈ ಸಂಬಂಧ ಇದೇ ಫೆಬ್ರವರಿ 5ರಂದು ಸಂಜೆ 4 ಗಂಟೆಗೆ ರಾಮಕೃಷ್ಣನಗರದ ನೃಪತುಂಗ ಕನ್ನಡ ಶಾಲೆಯಲ್ಲಿ ಕನ್ನಡ ಶಾಸ್ತ್ರೀಯ ಭಾಷಾ ಹೋರಾಟ ಸಮಿತಿ ಸಹಯೋಗದೊಂದಿಗೆ ಆಸಕ್ತರ ಸಭೆಯನ್ನು ಕರೆಯಲಾಗಿದೆ. ಎಲ್ಲ ಸಾಹಿತಿಗಳು, ಕನ್ನಡಪರ ಹಾಗೂ ಪ್ರಗತಿಪರ ಸಂಘಟನೆಗಳ ಸದಸ್ಯರು ಆಗಮಿಸಬೇಕೆಂದು ಸ.ರ.ಸುದರ್ಶನ ಕೋರಿದ್ದಾರೆ.

ಸಿದ್ದರಾಮಯ್ಯ ಸರ್ಕಾರ ರಾಜ್ಯದ ಪ್ರತಿಯೊಬ್ಬರ ಮೇಲೆ ಲಕ್ಷ ರೂ. ಸಾಲದ ಹೊರೆ ಹೇರಿದೆ!

ಬೆಂಗಳೂರು, ಫೆ.4(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ರಾಜ್ಯದ ಪ್ರತಿಯೊಬ್ಬ ಪ್ರಜೆಯ ತಲೆಯ ಮೇಲೆ ಒಂದು ಲಕ್ಷ ರೂ. ಸಾಲದ ಹೊರೆ ಹೇರಿದೆ ಎಂದು ವಿಧಾನ ಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಆರೋಪಿಸಿದ್ದಾರೆ.



ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ಸಂಪನ್ಮೂಲ ಕ್ರೋಢೀಕರಿಸಲಾಗದೆ ಸದಾಕಾಲ ಸಾಲ ಮಾಡುವುದನ್ನೇ ಸಿದ್ದರಾಮಯ್ಯ ಸರ್ಕಾರ ಕಾಯಕವನ್ನಾಗಿ ಮಾಡಿಕೊಂಡಿದೆ ಎಂದಿದ್ದಾರೆ. ಪ್ರಸ್ತುತ ಕರ್ನಾಟಕದ ಒಟ್ಟು ಸಾಲ 6.65 ಲಕ್ಷ ಕೋಟಿ ರೂ.ಗೆ ಮುಟ್ಟಿದ್ದು, ಇದರಿಂದ ಪ್ರತಿ ಕನ್ನಡಿಗನ ಮೇಲೆ ಬರೋಬ್ಬರಿ ಒಂದು ಲಕ್ಷ ರೂ. ಸಾಲದ ಹೊರೆಯನ್ನು ಭ್ರಷ್ಟ ಕಾಂಗ್ರೆಸ್ ಸರ್ಕಾರ ಹೊರಿಸಿದೆ. ಹಿಂದಿನ ಬಿಜೆಪಿ ಸರ್ಕಾರದ ಆಡಳಿತಾವಧಿಯಲ್ಲಿ ಕರ್ನಾಟಕ ನಾವೀನ್ಯತೆ ಸೂಚ್ಯಂಕ ಹಾಗೂ ಬಂಡವಾಳ ಹೂಡಿಕೆಯಲ್ಲಿ ನಂಬರ್ ಒನ್ ಆಗಿತ್ತು. ಈಗಿನ ಕಾಂಗ್ರೆಸ್ ಸರ್ಕಾರದ ಆಡಳಿತಾವಧಿಯಲ್ಲಿ ಕರ್ನಾಟಕ ಅತೀ ಹೆಚ್ಚು ಸಾಲ ಮಾಡುವ ರಾಜ್ಯಗಳಲ್ಲಿ ನಂಬರ್ ಒನ್ ಆಗುತ್ತಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿಯಾಗಿದೆ. ಹಿಂದಿನ ಅವಧಿಯಲ್ಲಿ ಕೇಂದ್ರದ ಎನ್‌ಡಿಎ ಸರ್ಕಾರ ಕೃಷಿ ಕಾಯ್ದೆಗಳ ತಿದ್ದುಪಡಿಗೆ ಮುಂದಾದಾಗ ಅದನ್ನ ವಿರೋಧಿಸಿ, ಬೀದಿ ರಂಪಾಟ ಮಾಡಿ, ತನ್ನ ರಾಜಕೀಯ ತೆವಲಿಗೆ ಸ್ಥಾಪಿತ ಹಿತಾಸಕ್ತಿಗಳ ರಕ್ಷಣೆ ಮಾಡಿದ್ದ ಕಾಂಗ್ರೆಸ್ ಪಕ್ಷ, ಈಗ ಅದೇ ಮೂರು ಕೃಷಿ ಕಾಯ್ದೆಗಳನ್ವಯ ರೈತರ ಆದಾಯ ಹೆಚ್ಚಿಸಲು ಶಿಫಾರಸು ನೀಡಿ ಎಂದು ಕೃಷಿ ಬೆಲೆ ಆಯೋಗಕ್ಕೆ ಸಿದ್ದರಾಮಯ್ಯ ಸರ್ಕಾರ ಸೂಚನೆ ನೀಡಿದೆ. ತನ್ನ ರಾಜಕೀಯ ಲಾಭಕ್ಕಾಗಿ ಅನ್ನದಾತರ ಹಿತಾಸಕ್ತಿ ಬಲಿಕೊಟ್ಟು, ಪಟ್ಟಭದ್ರ ಹಿತಾಸಕ್ತಿಗಳ ಜೊತೆ ಕೈಜೋಡಿಸಿದ್ದ ಕಾಂಗ್ರೆಸ್ ಪಕ್ಷದ ಅಸಲಿ ಬಣ್ಣ ಈಗ ಬಯಲಾಗಿದೆ ಎಂದು ಅಶೋಕ್ ಟೀಕಿಸಿದ್ದಾರೆ.

ವಿಶ್ವ ಕ್ಯಾನ್ಸರ್ ದಿನ: ಕ್ಯಾನ್ಸರ್‌ಪೀಡಿತರಿಗೆ ಆರ್ಥಿಕ ನೆರವು



ಓಡಿಪಿ ಸಂಸ್ಥೆಯಲ್ಲಿ ನಡೆದ ವಿಶ್ವ ಕ್ಯಾನ್ಸರ್ ದಿನದ ಕಾರ್ಯಕ್ರಮದಲ್ಲಿ ಕ್ಯಾನ್ಸರ್ ರೋಗಿಗಳಿಗೆ ಆರ್ಥಿಕ ನೆರವು ನೀಡಲಾಯಿತು.

ಮೈಸೂರು, ಫೆ.4(ಎಂಟಿವೈ)– ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಮೈಸೂರಿನ ಬನ್ನಿಮಂಟಪದಲ್ಲಿರುವ ಓಡಿಪಿ ಸಂಸ್ಥೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕ್ಯಾನ್ಸರ್ ಪೀಡಿತ 81 ಮಂದಿಗೆ ಆರ್ಥಿಕ ನೆರವು ನೀಡಲಾಯಿತು.

ಕಾರ್ಯಕ್ರಮದಲ್ಲಿ ನಾರಾಯಣ ಆಸ್ಪತ್ರೆಯ ಕ್ಯಾನ್ಸರ್ ತಜ್ಞ ಡಾ.ನಿಶ್ಚಲ್ ರಾಜ್, ಕ್ಯಾನ್ಸರ್ ರೋಗಿಗಳು ರೋಗ ಲಕ್ಷಣ ಕಂಡು ಬಂದಾಗಲೇ ತಪಾಸಣೆ ಮಾಡಿಸಿಕೊಂಡು ಸಕಾಲದಲ್ಲಿ ಚಿಕಿತ್ಸೆ ಪಡೆದುಕೊಂಡರೆ ಕ್ಯಾನ್ಸರ್ ರೋಗದಿಂದ ಮುಕ್ತರಾಗಬಹುದು. ಬದಲಾದ ಜೀವನ ಶೈಲಿ ಹಾಗೂ ಆಹಾರ ಪದ್ಧತಿಯಿಂದಾಗಿ ಕ್ಯಾನ್ಸರ್‌ಗೆ ತುತ್ತಾಗುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಅಲ್ಲದೆ, ಧೂಮಪಾನ ಮತ್ತು ಗುಟ್ಕಾ ಸೇರಿದಂತೆ ಇನ್ನಿತರ ವಸ್ತುಗಳ ಸೇವನೆಯಿಂದಲೂ ವಿವಿಧ ಬಗೆಯ ಕ್ಯಾನ್ಸರ್ ಕಂಡುಬರುತ್ತಿದೆ. ಈ ಹಿನ್ನೆಲೆಯಲ್ಲಿ ಜನರು ತಮ್ಮ ಆರೋಗ್ಯ ಕಾಪಾಡಿಕೊಳ್ಳುವತ್ತ ಗಮನ ಹರಿಸಬೇಕು. ದುಶ್ಚಟಗಳಿಂದ ದೂರ ಇರುವುದರೊಂದಿಗೆ ಜಂಕ್‌ಫುಡ್ ಸೇವಿಸದೇ ಆರೋಗ್ಯವಂತರಾಗಬೇಕು. ಈಗಾಗಲೇ ಕ್ಯಾನ್ಸರ್‌ಗೆ ತುತ್ತಾಗಿರುವ ರೋಗಿಗಳು ಆತ್ಮಸ್ಥೈರ್ಯ ಕಳೆದುಕೊಳ್ಳದೆ ಚಿಕಿತ್ಸೆಯನ್ನು ನಿರಂತರವಾಗಿ ಪಡೆದುಕೊಳ್ಳಬೇಕು. ರೋಗಿಗಳಿಗೆ ಆರೈಕೆ ಮಾಡುವುದು ಬಹುಮುಖ್ಯ. ಚಿಕಿತ್ಸಾ ಪದ್ಧತಿಯಲ್ಲಿ ಹೊಸ ಹೊಸ ಆವಿಷ್ಕಾರ ಉಂಟಾಗುತ್ತಿರುವುದರಿಂದ ಕ್ಯಾನ್ಸರ್‌ನಿಂದ ಗುಣಮುಖರಾಗಬಹುದಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರು ಧರ್ಮಕ್ಷೇತ್ರದ ಫಾ.ಆಲ್ಫ್ರೆಡ್ ಜಾನ್ ಮೆಂಡೋನ್ಸಾ ಮಾತನಾಡಿ, ಕ್ಯಾನ್ಸರ್ ರೋಗಕ್ಕೆ ತುತ್ತಾಗಿರುವವರು ಯಾವುದೇ ಕಾರಣಕ್ಕೂ ಎದೆಗುಂದಬಾರದು. ಆತ್ಮವಿಶ್ವಾಸದಿಂದ ಕ್ಯಾನ್ಸರ್ ರೋಗವನ್ನು ಎದುರಿಸಬೇಕು. ಓಡಿಪಿ ಸಂಸ್ಥೆ ಕೆಲ ಕ್ಯಾನ್ಸರ್ ರೋಗಿಗಳನ್ನು ಗುರುತಿಸಿ ಆರ್ಥಿಕ ನೆರವು ನೀಡಿದೆ. ಇಂತಹ ಸೇವಾ ಮನೋಭಾವವನ್ನು ಸಂಘ ಸಂಸ್ಥೆಗಳು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಓಡಿಪಿ ನಿರ್ದೇಶಕ ಫಾ.ಅಲೆಕ್ಸ್ ಪ್ರಶಾಂತ್ ಸಿಕ್ವೇರಾ, ಮೈಸೂರು ಧರ್ಮ ಪ್ರಾಂತ್ಯದ ಎಜುಕೇಷನಲ್ ಸೊಸೈಟಿ ಖಜಾಂಚಿ ಫಾ.ನವೀನ್‌ಕುಮಾರ್, ಫಾ.ಎಡ್ವರ್ಡ್ ಸಲ್ಡಾನ್ ಇನ್ನಿತರರು ಪಾಲ್ಗೊಂಡಿದ್ದರು.

ಕಾಡುಹಂದಿ ಬೇಟೆಗೆಂದು ಇಟ್ಟಿದ್ದ ನಾಡಬಾಂಬ್ ಸ್ಫೋಟ: ಎಮ್ಮೆ ಸಾವು


ಹಾವೇರಿ: ನಾಡಬಾಂಬ್ ಸ್ಫೋಟಗೊಂಡು ಎಮ್ಮೆಯೊಂದು ಸಾವನ್ನಪ್ಪಿರುವ ಘಟನೆ ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ರಾಮತೀರ್ಥ ಬಳಿಯ ಹೊಸಕೊಪ್ಪ ಗ್ರಾಮದಲ್ಲಿ ನಡೆದಿದೆ. ಎಮ್ಮೆ ಹುಲ್ಲು ಮೇಯುತ್ತಿದ್ದಾಗ ಏಕಾಏಕಿ ನಾಡಬಾಂಬ್ ಸ್ಫೋಟಗೊಂಡಿದ್ದು, ಸ್ಥಳದಲ್ಲೇ ಎಮ್ಮೆ ಸಾವನ್ನಪ್ಪಿದೆ.



ರೈತ ಬಾಷಾ ಬೇಕಂಪುರ ಅವರಿಗೆ ಸೇರಿದ ಎಮ್ಮೆ ಇದಾಗಿದೆ. ಕಾಡಹಂದಿ ಬೇಟೆಗೆಂದು ಇಟ್ಟಿದ್ದ ನಾಡಬಾಂಬ್ ಏಕಾಏಕಿ ಸ್ಫೋಟಗೊಂಡು ಈ ಅವಘಡ ಸಂಭವಿಸಿದೆ. ಘಟನೆಯಿಂದ ಗ್ರಾಮಸ್ಥರು ಬೆಚ್ಚಿ ಬಿದ್ದಿದ್ದು, ತಪ್ಪಿತಸ್ಥರನ್ನು ಬಂಧಿಸಿ ಕ್ರಮ ಕೈಗೊಳ್ಳುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ನಾಳೆ ಮೈಸೂರಲ್ಲಿ ಮಧ್ವನವಮಿ

ಮೈಸೂರು, ಫೆ. 4– ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ದ್ವೈತ ಮತ ಪ್ರತಿಷ್ಠಾಪನಾಚಾರ್ಯ ಶ್ರೀ ಮಧ್ವಾಚಾರ್ಯರ ಜಯಂತಿ ಅಂಗವಾಗಿ ಮಧ್ವನವಮಿಯನ್ನು ನವಿಲು ರಸ್ತೆ, ಕುವೆಂಪುನಗರ, ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಫೆ. 6ರಂದು ಬೆಳಗ್ಗೆ 11:30 ಕ್ಕೆ ಆಚರಿಸಲಾಗುವುದು ಎಂದು ಸಂಚಾಲಕ ಸುಚೀಂದ್ರ ತಿಳಿಸಿದ್ದಾರೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾಜಿ ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಯುವ ಮುಖಂಡರಾದ ಎನ್.ಎಂ.ನವೀನ್‌ಕುಮಾರ್, ಎಸ್.ಬಿ.ವಾಸುದೇವ ಮೂರ್ತಿ, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್, ನಿರೂಪಕ ಅಜಯ್ ಶಾಸ್ತ್ರಿ ಇನ್ನಿತರರು ಭಾಗವಹಿಸಲಿದ್ದಾರೆ.



ಸ್ನೇಹಿತರ ಹೆಸರಲ್ಲಿ ನಕಲಿ ಚಿನ್ನಾಭರಣ ಅಡವಿಟ್ಟು ವಂಚನೆ: ಮ್ಯಾನೇಜರ್ ಅರೆಸ್ಟ್

ದಾವಣಗೆರೆ: ಸ್ನೇಹಿತರ ಹೆಸರಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆದು ನಕಲಿ ಚಿನ್ನಾಭರಣಗಳನ್ನು ಅಡವಿಟ್ಟು ಲಕ್ಷಾಂತರ ರೂಪಾಯಿ ವಂಚಿಸಿದ್ದ ಬ್ಯಾಂಕ್ ಮ್ಯಾನೇಜರ್‌ನನ್ನು ದಾವಣಗೆರೆ ಜಿಲ್ಲೆಯ ಜಗಳೂರು ಪೊಲೀಸರು ಬಂಧಿಸಿದ್ದಾರೆ.

ಕೆಎಲ್‌ಎಂ ಆಕ್ಸಿವ್ ಫಿನ್ ವೆಸ್ಟ್ ಫೈನಾನ್ಸ್ ಕಂಪನಿಯ ವ್ಯವಸ್ಥಾಪಕ ಅರವಿಂದ್ ಬಂಧಿತ ಆರೋಪಿ. ಈತ ಫೈನಾನ್ಸ್ ಕಂಪನಿಯ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದ. ಫೈನಾನ್ಸ್ ಕಂಪನಿಯ ಪ್ರಾದೇಶಿಕ ವ್ಯವಸ್ಥಾಪಕರು ನೀಡಿದ್ದ ದೂರಿನ ಹಿನ್ನೆಲೆಯಲ್ಲಿ ಅರವಿಂದ್ ವಿರುದ್ಧ ಪ್ರಕರಣ ದಾಖಲಾಗಿತ್ತು.

ಬೇರೆ ಊರಿಗೆ ತೆರಳಲೆಂದು ಚಿತ್ರದುರ್ಗ ಬಸ್ ನಿಲ್ದಾಣಕ್ಕೆ ಬಂದಿದ್ದ ಆರೋಪಿಯನ್ನು ಜಗಳೂರು ಪೊಲೀಸರು ಬಸ್ ನಿಲ್ದಾಣದಲ್ಲೇ ಬಂಧಿಸಿದ್ದಾರೆ. ಸದ್ಯ ಬಂಧಿತ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ವಹಿಸಲಾಗಿದೆ.

ಮೈಸೂರಿನ ಎರಡು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಮೂಲಸೌಕರ್ಯ ಉನ್ನತೀಕರಣ



ಮೈಸೂರಿನ ಬಸ್ತಿಪುರ, ಕುಂಬಾರಕೊಪ್ಪಲು ಪ್ರದೇಶಗಳಲ್ಲಿ ದತ್ತು ಪಡೆದ ಸರ್ಕಾರಿ ಉನ್ನತ ಪ್ರಾಥಮಿಕ ಶಾಲೆಗಳಲ್ಲಿ ನೈರ್ಮಲ್ಯ ಸೌಲಭ್ಯಗಳನ್ನು ನವೀಕರಿಸುವ ಮತ್ತು ಚಾವಣಿ ಅಳವಡಿಕೆ ಮೂಲಕ ಸೈಯಂಟ್ ಡಿಎಲ್‌ಎಂ ಸಹಾಯಹಸ್ತ ನೀಡಿರುವುದು.

ಮೈಸೂರು,ಫೆ.4–ಪ್ರಮುಖ ಎಲೆಕ್ಟ್ರಾನಿಕ್ಸ್ ಉತ್ಪಾದನಾ ಕಂಪನಿಯಾದ ಸೈಯಂಟ್ ಡಿಎಲ್‌ಎಂ, ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯೆಡೆಗಿನ (ಸಿಎಸ್‌ಆರ್) ತನ್ನ ನಿರಂತರ ಬದ್ಧತೆಯ ಭಾಗವಾಗಿ ಮೈಸೂರಿನ ಬಸ್ತಿಪುರ ಮತ್ತು ಕುಂಬಾರಕೊಪ್ಪಲು ಪ್ರದೇಶಗಳಲ್ಲಿ ದತ್ತು ಪಡೆದ ಸರ್ಕಾರಿ ಉನ್ನತ ಪ್ರಾಥಮಿಕ ಶಾಲೆಗಳಲ್ಲಿ ನೈರ್ಮಲ್ಯ ಸೌಲಭ್ಯಗಳನ್ನು ನವೀಕರಿಸುವ ಮತ್ತು ಚಾವಣಿಯ ಅಳವಡಿಕೆ ಮೂಲಕ ಜಲನಿರೋಧಕ ಪರಿಹಾರಗಳನ್ನು ಒದಗಿಸಿ ಶಾಲಾ ಕಟ್ಟಡಗಳನ್ನು ರಕ್ಷಿಸುವ ಮೂಲಕ ವಿದ್ಯಾರ್ಥಿಗಳ ಯೋಗಕ್ಷೇಮವನ್ನು ಸುಧಾರಿಸಲು ಸಹಾಯ ಮಾಡಿದೆ. ಸೈಯಂಟ್ ಡಿಎಲ್‌ಎಂ ಮತ್ತು ಸೈಯಂಟ್‌ನ ಹಿರಿಯ ಮುಖ್ಯಸ್ಥರು ಭಾಗವಹಿಸಿದ್ದ ಈ ಸಮಾರಂಭದಲ್ಲಿ ಹೊಸದಾಗಿ ನವೀಕರಿಸಿದ ಸೌಲಭ್ಯಗಳನ್ನು ಅಧಿಕೃತವಾಗಿ ಉದ್ಘಾಟಿಸಲಾಯಿತು. ಈ ಕಾರ್ಯಕ್ರಮವು, ತನ್ನ ಕಾರ್ಯಾಚರಣೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಕಾರಾತ್ಮಕ ಸಾಮಾಜಿಕ ಬದಲಾವಣೆಯನ್ನು ತರಬಯಸುವ ಕಂಪನಿಯ ಸಮರ್ಪಣೆಯನ್ನು ಎತ್ತಿ ತೋರಿಸಿತು. ಸೈಯಂಟ್ ಡಿಎಲ್‌ಎಂನ ಬಿಸಿನೆಸ್ ಮುಖ್ಯಸ್ಥೆ ಸುಚಿತ್ರಾ ರಾಯ್ರೋತ್, ಸೈಯಂಟ್‌ನ ಸಿಎಸ್‌ಆರ್ ಮುಖ್ಯಸ್ಥೆ ಕೃಷ್ಣ ದೀವಿ ಮತ್ತು ಸೈಯಂಟ್ ಡಿಎಲ್‌ಎಂನ ಮಾನವ ಸಂಪನ್ಮೂಲ ಮುಖ್ಯಸ್ಥೆ ನೀರಜಾ ಪೊಲಿಸೆಟ್ಟಿ ಒಳಗೊಂಡ ತಂಡ ಮಕ್ಕಳೊಂದಿಗೆ ಬೆರೆಯಿತು. ಈ ಮೂಲಸೌಕರ್ಯದ ನವೀಕರಣವು, ಈ ಪ್ರದೇಶದ 700ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಅನುಕೂಲಕಾರಿಯಾಗಿರಲಿದೆ

ಗಾಯಗೊಂಡಿದ್ದ ಬಾಲಕನಿಗೆ ಸ್ಟಿಚ್ ಹಾಕುವ ಬದಲು ಫೆವಿಕ್ವಿಕ್ ಹಾಕಿ ಚಿಕಿತ್ಸೆ ನೀಡಿದ ನರ್ಸ್!

ಹಾವೇರಿ: ಪ್ರಾಥಮಿಕ ಆರೋಗ್ಯ ಕೇಂದ್ರದ ನರ್ಸ್ ಎಡವಟ್ಟಿಗೆ ಬಾಲಕ ಪರದಾಡಿರುವ ಘಟನೆ ಹಾವೇರಿ ಜಿಲ್ಲೆಯಲ್ಲಿ ನಡೆದಿದೆ. ಗಾಯಗೊಂಡು ಆಸ್ಪತ್ರೆಗೆ ಬಂದಿದ್ದ ಬಾಲಕನಿಗೆ ಸ್ಟಿಚ್ ಹಾಕುವ ಬದಲು ನರ್ಸ್, ಫೆವಿಕ್ವಿಕ್ ಹಾಕಿ ಚಿಕಿತ್ಸೆ ನೀಡಿದ್ದಾರೆ. ಜ.14ರಂದು ನಡೆದಿದ್ದ ಘಟನೆ ತಡವಾಗಿ ಬೆಳಕಿಗೆ ಬಂದಿದೆ. 7 ವರ್ಷದ ಬಾಲಕ ಗುರುಕಿಶನ್ ಅಣ್ಣಪ್ಪ ಹೊಸಮನಿ ಆಟವಾಡುವಾಗ ಬಿದ್ದು ಗಾಯಗೊಂಡಿದ್ದ. ಬಾಲಕನ ಕೆನ್ನೆಗೆ ಗಂಭೀರವಾದ ಗಾಯವಾಗಿತ್ತು. ಕುಟುಂಬದವರು ಬಾಲಕನನ್ನು ಆಡೂರು ಪಿಹೆಚ್‌ಸಿಗೆ ಕರೆದೊಯ್ದಿದ್ದರು. ಈ ವೇಳೆ ವೈದ್ಯರು ಇರಲಿಲ್ಲ. ಆಸ್ಪತ್ರೆಯಲ್ಲಿದ್ದ ನರ್ಸ್, ಬಾಲಕನ ಗಾಯಕ್ಕೆ ಫೆವಿಕ್ವಿಕ್ ಹಚ್ಚಿ ಮೇಲಿಂದ ಬ್ಯಾಂಡೇಜ್ ಟೇಪ್ ಹಚ್ಚಿ ಕಳುಹಿಸಿದ್ದಾಳೆ. ನರ್ಸ್ ವಿರುದ್ಧ ಆಕ್ರೋಶ ವ್ಯಕ್ತವಾಗಿದ್ದು, ಸಸ್ಪೆಂಡ್ ಮಾಡುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ. ಅದೃಷ್ಟವಶಾತ್ ಬಾಲಕನಿಗೆ ಹೆಚ್ಚಿನ ಸಮಸ್ಯೆಯಾಗಿಲ್ಲ. ಸದ್ಯ ಬಾಲಕ ಗುಣಮುಖನಾಗಿದ್ದಾನೆ ಎಂದು ತಿಳಿದುಬದಿದೆ.

ದರೋಡೆಕೋರರ ಕಾಲಿಗೆ ಗುಂಡು; ಇಬ್ಬರ ಬಂಧನ

ಹುಬ್ಬಳ್ಳಿ: ಅವಳಿ ನಗರ ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ದರೋಡೆ ಮಾಡಿ ಪೊಲೀಸರಿಗೆ ಸಿಗದೇ ಪರಾರಿಯಾಗುತ್ತಿದ್ದ ದರೋಡೆಕೋರರ ಕಾಲಿಗೆ ಗುಂಡಿಕ್ಕಿ ಪೊಲೀಸರು ಬಂಧಿಸಿದ್ದಾರೆ.


ದರೋಡೆ ಮತ್ತು ಸುಲಿಗೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಪೊಲೀಸರು ಕಾಲಿಗೆ ಗುಂಡಿಕ್ಕಿ ಬಂಧಿಸಿದ ಘಟನೆ ಬೆಂಡಿಗೇರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಬಂಧಿತರನ್ನು ಗುಜರಾತ್ ಮೂಲದ ದಿಲೀಪ್ ಮತ್ತು ನಿಲೇಶ್ ಎಂದು ಗುರುತಿಸಲಾಗಿದೆ. ಇವರ ಜೊತೆಗಿದ್ದ ಇತರ ಮೂವರು ಆರೋಪಿಗಳು ಪರಾರಿಯಾಗಿದ್ದು ಅವರ ಬಂಧನಕ್ಕೂ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಳೆದ ರಾತ್ರಿ ಬೈಕ್ ಸವಾರರನ್ನು ಸುಲಿಗೆ ಮಾಡಿ ಮನೆಯೊಂದರಿಂದ ದರೋಡೆಗೆ ಯತ್ನಿಸಿದವರನ್ನು ಹಿಡಿಯಲು ಮುಂದಾದಾಗ ಪೊಲೀಸರ ಮೇಲೆಯೇ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದ್ದಾರೆ. ಈ ವೇಳೆ ಶೂಟೌಟ್ ಮಾಡಿದ್ದರಿಂದ ಗಾಯಗೊಂಡ ಇಬ್ಬರನ್ನು ಬಂಧಿಸಿ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಗಾಯಗೊಂಡ ಮೂವರು ಪೊಲೀಸ್ ಸಿಬ್ಬಂದಿಯನ್ನೂ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ದೇಶ - ವಿದೇಶ


ವಿರಾಲ್ ದ್ವೀಪದಲ್ಲಿ ಮೂರು ದಿನಕ್ಕೆ 200ಕ್ಕೂ ಹೆಚ್ಚು ಬಾರಿ ಭೂಕಂಪನ!

ಅಥೆನ್ಸ್: ಗ್ರೀಸ್‌ನ ವಿಶ್ವ ವಿಖ್ಯಾತ ವಿರಾಲ್ ದ್ವೀಪದಲ್ಲಿ ಕಳೆದ 3 ದಿನದಲ್ಲಿ ಬರೋಬ್ಬರಿ 200ಕ್ಕೂ ಅಧಿಕ ಭೂಕಂಪನಗಳು ಸಂಭವಿಸಿದೆ. ಹೌದು.. ಇನ್‌ಸ್ಟಾಗ್ರಾಮ್ ವಿಡಿಯೋಗಳಲ್ಲಿ ವ್ಯಾಪಕ ವೈರಲ್ ಆಗಿರುವ ಗ್ರೀಸ್‌ನ ಸ್ಯಾಂಟೊರಿನಿ ದ್ವೀಪದಲ್ಲಿ ಕಳೆದ 3 ದಿನದಲ್ಲಿ ಬರೋಬ್ಬರಿ 200ಕ್ಕೂ ಅಧಿಕ ಬಾರಿ ಭೂಮಿ ನಡುಗಿದೆ. ಸೋಮವಾರ ಮಧ್ಯಾಹ್ನ ಇಲ್ಲಿ ಅತೀ ದೊಡ್ಡ ಅಂದರೆ 5.1 ತೀವ್ರತೆಯಲ್ಲಿ ಅತ್ಯಂತ ದೊಡ್ಡ ಭೂಕಂಪ ದಾಖಲಾಗಿತ್ತು. ಇದಾದ ಬಳಿಕ ಈವರೆಗೂ ಇಲ್ಲಿ ಸುಮಾರು 200ಕ್ಕೂ ಅಧಿಕ ಲಘು ಕಂಪನಗಳು ವರದಿಯಾಗಿವೆ. ಯುರೋಪಿಯನ್–ಮೆಡಿಟರೇನಿಯನ್ ಭೂಕಂಪನ ಕೇಂದ್ರದ ದಾಖಲೆಗಳು ಮಂಗಳವಾರ ಬೆಳಿಗ್ಗೆ 7 ಗಂಟೆಯ ಹೊತ್ತಿಗೆ (05:00 GMT) ಕೆಲವು ನಿಮಿಷಗಳ ಅಂತರದಲ್ಲಿ ಹಲವು ಭೂಕಂಪಗಳು ಸಂಭವಿಸುತ್ತಿವೆ ಎಂದು ತೋರಿಸಿವೆ. ಮುಂಜಾಗ್ರತಾ ಕ್ರಮವಾಗಿ ಗುಡ್ಡಗಾಡು ಪ್ರದೇಶಗಳಲ್ಲಿದ್ದ ನಿವಾಸಿಗಳನ್ನು ವಿಶೇಷ ವಿಮಾನಗಳ ಮೂಲಕ ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿದೆ. ಸ್ಯಾಂಟೊರಿನಿ ಮತ್ತು ನೆರೆಯ ಅನಾಫಿ, ಅಯೋಸ್ ಮತ್ತು ಅಮೋರ್ಗೋಸ್ ದ್ವೀಪಗಳಲ್ಲಿನ ನಿವಾಸಿಗಳನ್ನು ಬೋಟ್‌ಗಳು ಮತ್ತು ವಿಮಾನಗಳಲ್ಲಿ ತುಂಬಿಸಿ ಸ್ಥಳಾಂತರ ಮಾಡಲಾಗಿದೆ.



ಕೆಲಸದ ಸಮಯ ವಾರಕ್ಕೆ 70 ಅಥವಾ 90 ಗಂಟೆಗೆ ಹೆಚ್ಚಿಸುವ ಪ್ರಸ್ತಾಪವಿಲ್ಲ: ಕೇಂದ್ರ

ನವದೆಹಲಿ: ವಾರಕ್ಕೆ ಗರಿಷ್ಠ ಕೆಲಸದ ಸಮಯವನ್ನು 70 ಅಥವಾ 90 ಗಂಟೆಗಳವರೆಗೆ ಹೆಚ್ಚಿಸುವ ಯಾವುದೇ ಪ್ರಸ್ತಾಪವನ್ನು ಪರಿಗಣಿಸುವುದಿಲ್ಲ ಎಂದು ಕೇಂದ್ರ ಸರ್ಕಾರ ಸಂಸತ್ತಿಗೆ ತಿಳಿಸಿದೆ. ಇತ್ತೀಚೆಗೆ, ಕೆಲವು ಕಾರ್ಪೊರೇಟ್ ಕಂಪನಿಗಳ ಮುಖ್ಯಸ್ಥರು ಗರಿಷ್ಠ ಕೆಲಸದ ಸಮಯವನ್ನು ವಾರಕ್ಕೆ 70 ಅಥವಾ 90 ಗಂಟೆಗಳವರೆಗೆ ಹೆಚ್ಚಿಸಬೇಕು ಎಂಬ ಪ್ರಸ್ತಾಪ ಮಾಡಿದ್ದರು. "ವಾರಕ್ಕೆ ಗರಿಷ್ಠ ಕೆಲಸದ ಸಮಯವನ್ನು 70 ಅಥವಾ 90 ಗಂಟೆಗಳವರೆಗೆ ಹೆಚ್ಚಿಸುವ ಯಾವುದೇ ಪ್ರಸ್ತಾಪವು ಸರ್ಕಾರದ ಮುಂದೆ ಇಲ್ಲ" ಎಂದು ಕಾರ್ಮಿಕ ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಇಂದು ಲೋಕಸಭೆಗೆ ಲಿಖಿತ ಉತ್ತರ ನೀಡಿದ್ದಾರೆ.



ಕಾರ್ಮಿಕ ವಿಷಯ ಸಮಕಾಲೀನ ಪಟ್ಟಿಯಲ್ಲಿರುವುದರಿಂದ, ಕಾರ್ಮಿಕ ಕಾನೂನುಗಳ ಜಾರಿಯನ್ನು ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರವು ಅವರವರ ವ್ಯಾಪ್ತಿಯಲ್ಲಿ ಮಾಡುತ್ತವೆ. ಅಸ್ತಿತ್ವದಲ್ಲಿರುವ ಕಾರ್ಮಿಕ ಕಾನೂನುಗಳ ಪ್ರಕಾರ, ಕೆಲಸದ ಸಮಯ, ಅಧಿಕಾವಧಿ ಸೇರಿದಂತೆ ಕೆಲಸದ ಪರಿಸ್ಥಿತಿಗಳನ್ನು 1948ರ ಕಾರ್ಖಾನೆ ಕಾಯ್ದೆ, ಆಯಾ ರಾಜ್ಯ ಸರ್ಕಾರಗಳ ಅಂಗಡಿಗಳು, ಕಂಪನಿಗಳ ಕಾಯ್ದೆ ನಿಬಂಧನೆಗಳ ಮೂಲಕ ನಿಯಂತ್ರಿಸಲಾಗುತ್ತದೆ.

ಅಮೆರಿಕಕ್ಕೆ ಸೆಡ್ಡು: ಪ್ರತಿಸುಂಕ ಹೇರಿದ ಚೀನಾ; ಗೂಗಲ್ ವಿರುದ್ಧ ತನಿಖೆ

ಬೀಜಿಂಗ್: ಅಮೆರಿಕ ವಿರುದ್ಧ ಬಹು ಉತ್ಪನ್ನಗಳ ಮೇಲೆ ಪ್ರತಿ–ಸುಂಕಗಳನ್ನು ಜಾರಿಗೆ ತರುತ್ತಿರುವುದಾಗಿ ಚೀನಾದ ವಾಣಿಜ್ಯ ಸಚಿವಾಲಯ ಮಂಗಳವಾರ ಘೋಷಿಸಿದ್ದು, ಗೂಗಲ್ ವಿರುದ್ಧ ತನಿಖೆ ಸೇರಿದಂತೆ ಇತರ ವ್ಯಾಪಾರ–ಸಂಬಂಧಿತ ಕ್ರಮಗಳ ಬಗ್ಗೆಯೂ ಎಚ್ಚರಿಕೆ ನೀಡಿದೆ. ಕಲ್ಲಿದ್ದಲು ಮತ್ತು ದ್ರವೀಕೃತ ನೈಸರ್ಗಿಕ ಅನಿಲ ಉತ್ಪನ್ನಗಳ ಮೇಲೆ ಶೇ.15ರಷ್ಟು ಸುಂಕವನ್ನು ಹಾಗೂ ಕಚ್ಚಾ ತೈಲ, ಕೃಷಿ ಯಂತ್ರೋಪಕರಣಗಳು, ದೊಡ್ಡ–ಸ್ಥಳಾಂತರ ಕಾರುಗಳ ಮೇಲೆ ಶೇ.10ರಷ್ಟು ಸುಂಕವನ್ನು ಜಾರಿಗೆ ತರುವುದಾಗಿ ಚೀನಾ ಸರ್ಕಾರ ಹೇಳಿದೆ.

ಯುಎಸ್‌ನ ಏಕಪಕ್ಷೀಯ ಸುಂಕ ಹೆಚ್ಚಳವು ವಿಶ್ವ ವ್ಯಾಪಾರ ಸಂಸ್ಥೆಯ ನಿಯಮಗಳನ್ನು ಗಂಭೀರವಾಗಿ ಉಲ್ಲಂಘಿಸುತ್ತದೆ. ಇದು ತನ್ನದೇ ಆದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಹಾಯಕವಾಗುವುದರ ಜೊತೆಗೆ ಚೀನಾ ಮತ್ತು ಯುಎಸ್ ನಡುವಿನ ಸಾಮಾನ್ಯ ಆರ್ಥಿಕ ಮತ್ತು ವ್ಯಾಪಾರ ಸಹಕಾರವನ್ನು ಹಾನಿಗೊಳಿಸುತ್ತದೆ ಎಂದು ಹೇಳಿದೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಚೀನಾದ ಮೇಲೆ ವಿಧಿಸುವುದಾಗಿ ಹೇಳಿರುವ ಶೇ.10ರಷ್ಟು ಸುಂಕವು ಇಂದು ಜಾರಿಗೆ ಬರಬೇಕಿತ್ತು, ಆದರೆ ಟ್ರಂಪ್ ಮುಂದಿನ ಕೆಲವು ದಿನಗಳಲ್ಲಿ ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಂದಿಗೆ ಮಾತನಾಡಲು ಯೋಜಿಸಿದ್ದರು.

ಸರ್ಕಾರಿ ಕಚೇರಿಗಳಲ್ಲಿ 'ಮರಾಠಿ' ಕಡ್ಡಾಯಗೊಳಿಸಿದ ಮಹಾರಾಷ್ಟ್ರ


ಮುಂಬೈ: ಸರ್ಕಾರಿ ಕಚೇರಿಗಳಲ್ಲಿ 'ಮರಾಠಿ ಭಾಷೆ' ಕಡ್ಡಾಯಗೊಳಿಸಿ ಮಹಾರಾಷ್ಟ್ರ ಸರ್ಕಾರ ಆದೇಶ ಹೊರಡಿಸಿದೆ. ಸರ್ಕಾರಿ, ಅರೆ ಸರ್ಕಾರಿ ಕಚೇರಿಗಳು, ನಿಗಮಗಳು ಮತ್ತಿತರ ಸರ್ಕಾರಿ–ಸಂಬಂಧಿತ ಕಚೇರಿಗಳಲ್ಲಿನ ಎಲ್ಲಾ ನೌಕರರು ತಮ್ಮ ಕಚೇರಿಗಳಲ್ಲಿ ಹೊರ ದೇಶ, ಮರಾಠಿ ಮಾತನಾಡದ ಅನ್ಯ ರಾಜ್ಯಗಳಿಂದ ಬರುವ ಜನರನ್ನು ಹೊರತುಪಡಿಸಿ ಎಲ್ಲಾ ಸಂದರ್ಶಕರೊಂದಿಗೆ ಮರಾಠಿ ಭಾಷೆಯಲ್ಲಿಯೇ ಮಾತನಾಡಲು ಸೂಚಿಸಲಾಗಿದೆ.

ಈ ನಿಯಮ ಉಲ್ಲಂಘಿಸಿದ ಯಾವುದೇ ಅಧಿಕಾರಿ ವಿರುದ್ಧ ಅಗತ್ಯ ಕ್ರಮಕ್ಕಾಗಿ ಕಚೇರಿ ಅಥವಾ ಇಲಾಖೆಯ ಪ್ರಭಾರಿಗಳಿಗೆ ದೂರು ಸಲ್ಲಿಸಬಹುದು. ಅದನ್ನು ಅಧಿಕೃತ ಅಶಿಸ್ತಿನ ಕ್ರಮವೆಂದು ಪರಿಗಣಿಸಲಾಗುತ್ತದೆ. ನಿಯಮ ಉಲ್ಲಂಘಿಸಿದವರ ವಿರುದ್ಧ ತೆಗೆದುಕೊಂಡ ಕ್ರಮದಿಂದ ದೂರುದಾರರು ತೃಪ್ತರಾಗದಿದ್ದರೆ ಮಹಾರಾಷ್ಟ್ರ ಶಾಸಕಾಂಗದ ಮರಾಠಿ ಭಾಷಾ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಬಹುದು" ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಹಿಂದಿ ನಮ್ಮ ರಾಷ್ಟ್ರ ಭಾಷೆಯಲ್ಲ, ಅಧಿಕೃತ ಭಾಷೆಯಷ್ಟೆ; ಮತ್ತೆ ಚರ್ಚೆ ಹುಟ್ಟುಹಾಕಿದ ಅಶ್ವಿನ್ ಸರ್ಕಾರ ಅನುಮೋದಿಸಿದ ಚಟುವಟಿಕೆಗಳಡಿ ಉದ್ಯಮಗಳು ಮಾಧ್ಯಮಗಳಿಗೆ ನೀಡುವ ಜಾಹೀರಾತುಗಳಲ್ಲಿ ಮರಾಠಿ ಭಾಷೆಯ ಬಳಕೆಯನ್ನು ಕಡ್ಡಾಯಗೊಳಿಸಬೇಕು.

ಮಹಾ ಕುಂಭಮೇಳ: ಸಂಗಮದಲ್ಲಿ ಮಿಂದೆದ್ದ ಭೂತಾನ್ ದೊರೆ!

ಪ್ರಯಾಗ್‌ರಾಜ್: ಉತ್ತರಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳಕ್ಕೆ ಮಂಗಳವಾರ ಭೇಟಿ ನೀಡಿದ ಭೂತಾನ್ ದೊರೆ ಜಿಗ್ಮೆ ಖೇಸರ್ ನಮ್ಗೇಲ್ ವಾಂಗ್‌ಚುಕ್ ತ್ರಿವೇಣಿ ಸಂಗಮದಲ್ಲಿ ಪುಣ್ಯಸ್ನಾನ ಮಾಡಿದ್ದಾರೆ. ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ಜೊತೆಯಲ್ಲಿ ಗಂಗಾ, ಯಮುನಾ ಮತ್ತು ಸರಸ್ವತಿ ನದಿಗಳ ಸಂಗಮ ತಾಣಕ್ಕೆ ಆಗಮಿಸಿದ ಭೂತನ್ ದೊರೆ, ನದಿ ನೀರಿನಲ್ಲಿ ಮಿಂದೆದ್ದರು. ಇದಕ್ಕೂ ಮುನ್ನಾ ಸೂರ್ಯನಿಗೆ 'ಅರ್ಘ್ಯ' ಅರ್ಪಿಸಿದರು.



ವಿಮಾನ ನಿಲ್ದಾಣದಲ್ಲಿ ಬಂದಿಳಿದಾಗ ಭೂತಾನ್‌ನ ಸಾಂಪ್ರದಾಯಿಕ ಉಡುಪಿನಲ್ಲಿ ಕಾಣಿಸಿಕೊಂಡಿದ್ದ ವಾಂಗ್‌ಚುಕ್, ಸಂಗಮದಲ್ಲಿ ಪುಣ್ಯಸ್ನಾನಕ್ಕೆ ತೆರಳಿದಾಗ ಉದ್ದನೆಯ ಕೇಸರಿ ಬಣ್ಣದ ಕುರ್ತಾ ಮತ್ತು ಪೈಜಾಮಾ ಧರಿಸಿದರು.

ನೂತನ ಮಹಾಮಂಡಲೇಶ್ವರ ಸಂತೋಷ್ ದಾಸ್ ಜಿ ಮಹಾರಾಜ್ ಅವರೊಂದಿಗೆ ಉತ್ತರಪ್ರದೇಶ ಸಚಿವರಾದ ಸ್ವತಂತ್ರ ದೇವ್‌ಸಿಂಗ್, ನಂದಗೋಪಾಲ್ ಗುಪ್ತಾ, ಯೋಗಿ ಆದಿತ್ಯನಾಥ್ ಹಾಗೂ ವಾಂಗ್‌ಚುಕ್ ಪುಣ್ಯಸ್ನಾನ ಮಾಡುತ್ತಿರುವ ಚಿತ್ರವನ್ನು ಉತ್ತರಪ್ರದೇಶ ಸರ್ಕಾರ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದೆ.

ಕೇಂದ್ರ ಬಜೆಟ್‌ನಿಂದ ದೇಶದ ಎಲ್ಲಾ ವರ್ಗದವರಿಗೂ ಸಹಕಾರಿ



ಸುದ್ದಿಗೋಷ್ಠಿಯಲ್ಲಿ ಮಾಜಿ ಸ್ಪೀಕರ್ ಕೆ.ಜಿ.ಬೋಪಯ್ಯ ಮಾತನಾಡಿದರು.

ಮಡಿಕೇರಿ, ಫೆ.4– ಕೇಂದ್ರ ಸರ್ಕಾರ ಜನಪರ ಬಜೆಟ್ ಮಂಡಿಸಿದ್ದು, ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಎಂಬಂತೆ ದೇಶದ ಎಲ್ಲಾ ವರ್ಗದ ಜನರಿಗೂ ಸಹಕಾರಿಯಾಗ ಬಲ್ಲ ಬಜೆಟ್ ಇದಾಗಿದೆ ಎಂದು ಮಾಜಿ ಸ್ಪೀಕರ್ ಕೆ.ಜಿ. ಬೋಪಯ್ಯ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಮಂಡಿಸಿದ ಬಜೆಟ್‌ನಲ್ಲಿ ತೆರಿಗೆ ವಿನಾಯಿತಿ ಮೊತ್ತವನ್ನು 12 ಲಕ್ಷಕ್ಕೆ ಏರಿಸಿರುವುದರಿಂದ ಮಧ್ಯಮ ವರ್ಗಕ್ಕೆ ಹೆಚ್ಚು ಅನುಕೂಲ ವಾಗಿದೆ. ಗ್ರಾಮೀಣಾಭಿವೃದ್ಧಿಗಾಗಿ 2 ಲಕ್ಷ ಕೋಟಿ ರೂ. ಮೀಸಲಿಡಲಾಗಿದೆ ಇದರಿಂದ ಹೆಚ್ಚು ಕುಡಿಯುವ ನೀರು ಮತ್ತು ರಸ್ತೆ ಅಭಿವೃದ್ಧಿಯಾಗಲಿದೆ. 50.65 ಲಕ್ಷ ಕೋಟಿ ಮೊತ್ತದ ಬಜೆಟ್ ಅನ್ನು ಇಡೀ ದೇಶವೇ ಒಪ್ಪಿಕೊಂಡಿದೆ. ವಿದೇಶಿಗರು ಕೂಡ ಬಜೆಟ್ ಕುರಿತು ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ, ಕಾಂಗ್ರೆಸ್ ಮಾತ್ರ ರಾಜಕೀಯ ಕಾರಣಕ್ಕಾಗಿ ಟೀಕಿಸುತ್ತಿದೆ ಎಂದರು.

ರಾಜ್ಯದ ಮುಖ್ಯಮಂತ್ರಿಗಳು ಕೇಂದ್ರ ಬಜೆಟ್ ಮಂಡನೆಯಾಗುವ ಮೊದಲೇ ಬಜೆಟ್‌ನಿಂದ ಏನನ್ನೂ ನಿರೀಕ್ಷೆ ಮಾಡುವುದಿಲ್ಲ ಎಂದು ಟೀಕಿಸಲು ಆರಂಭಿಸಿದ್ದರು. ರಾಜ್ಯದ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ಬಜೆಟ್ ಟೀಕಿಸುತ್ತಾ ರಾಜಕೀಯ ಭಾಷಣ ಮಾಡುವುದನ್ನು ಬಿಟ್ಟು ಅಭಿವೃದ್ಧಿ ಕಾರ್ಯಗಳ ಕಡೆ ಗಮನ ನೀಡಲಿ ಎಂದು ಸಿದ್ದರಾಮಯ್ಯ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಜಿಎಸ್‌ಟಿ ಪಾಲಿನ ಹಣವನ್ನು ಸಂವಿಧಾನದತ್ತವಾಗಿ ಜನಸಂಖ್ಯಾ ಆಧಾರದಲ್ಲಿ ರಾಜ್ಯಗಳಿಗೆ ಹಂಚಿಕೆ ಮಾಡಲಾಗುತ್ತಿದೆ. ಜಿಎಸ್‌ಟಿ ಸಮಿತಿಯಲ್ಲಿ ತೆಗೆದುಕೊಳ್ಳುವ ನಿರ್ಧಾರ ಅಂತಿಮವಾಗಲಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಈ ವಿಚಾರದಲ್ಲಿ ಹಸ್ತಕ್ಷೇಪ ಮಾಡುತ್ತಿಲ್ಲ. ಮುಖ್ಯಮಂತ್ರಿಗಳು ಜಿಎಸ್‌ಟಿ ಪಾಲಿನ ಕುರಿತು ರಾಜಕೀಯ ಭಾಷಣ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಕೊಡಗಿಗೆ ಪ್ಯಾಕೇಜ್ ಇಲ್ಲ: ಜಿಲ್ಲೆಯಲ್ಲಿ ಅಕಾಲಿಕ ಮಳೆಯಿಂದ ಕಾಫಿ ಫಸಲು ಕುಸಿತಗೊಂಡು ಬೆಳೆಗಾರರು ಸಂಕಷ್ಟದಲ್ಲಿದ್ದಾರೆ. ವನ್ಯಜೀವಿಗಳ ಉಪಟಳ ಮಿತಿ ಮೀರಿದ್ದು, ಹುಲಿಗಳು ನಗರ ಪ್ರದೇಶಕ್ಕೆ ಬರುವ ಆತಂಕವಿದೆ. ಆದರೆ, ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಮತ್ತು ಪರಿಹಾರ ನೀಡುತ್ತಿಲ್ಲ. ಹಿಂದೆ ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದಾಗ ರಸ್ತೆಗಳ ಅಭಿವೃದ್ಧಿಗಾಗಿ ಕೊಡಗು ಜಿಲ್ಲೆಗೆ 100 ಕೋಟಿ ರೂ. ವಿಶೇಷ ಪ್ಯಾಕೇಜ್ ನೀಡಲಾಗಿತ್ತು. ಈಗಿನ ಮುಖ್ಯಮಂತ್ರಿಗಳು ಯಾಕೆ ಪ್ಯಾಕೇಜ್ ಘೋಷಣೆ ಮಾಡುತ್ತಿಲ್ಲ? ಎಂದು ಪ್ರಶ್ನಿಸಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಸುನಿಲ್ ಸುಬ್ರಮಣಿ ಮಾತನಾಡಿ, ಕಾಂಗ್ರೆಸ್ ವಕ್ತಾರ ಲಕ್ಷ್ಮಣ್ ವಿನಾಕಾರಣ ಕೇಂದ್ರ ಸರ್ಕಾರವನ್ನು ಟೀಕೆ ಮಾಡುವುದನ್ನು ಬಿಟ್ಟು ಕೊಡಗು ಜಿಲ್ಲೆಗೆ ಸಚಿವ ಸ್ಥಾನ ದೊರಕಿಸಿಕೊಡಲಿ. ಚೆಂಬು ಪ್ರದರ್ಶಿಸಿ ಕೀಳು ಮಟ್ಟದ ರಾಜಕೀಯ ಮಾಡುವುದನ್ನು ಮೊದಲು ನಿಲ್ಲಿಸಲಿ. ಮುಖ್ಯ ಮಂತ್ರಿಗಳಿಗೆ ಜನರ ಬಗ್ಗೆ ಕಾಳಜಿ ಇದ್ದರೆ ಹಾಲು ಮತ್ತು ಆಲ್ಕೋಹಾಲ್‌ನ ಬೆಲೆ ಕಡಿಮೆ ಮಾಡಲಿ ಎಂದು ಒತ್ತಾಯಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡಿ, ಲೋಕಸಭಾ ಚುನಾವಣೆಯಲ್ಲಿ ಲಕ್ಷ್ಮಣ್‌ಗೆ ಕೊಡಗು ಹಾಗೂ ಮೈಸೂರು ಜನತೆ ಈಗಾಗಲೇ ಚೆಂಬು ನೀಡಿದ್ದಾರೆ. ಇನ್ನು ಮುಂದೆಯೂ ನೀಡಲಿದ್ದಾರೆ ಎಂದು ವ್ಯಂಗ್ಯವಾಡಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ತಳೂರು ಕಿಶೋರ್‌ಕುಮಾರ್, ವಕ್ತಾರ ಬಿ.ಕೆ. ಅರುಣ್ ಕುಮಾರ್ ಹಾಗೂ ಮಾಧ್ಯಮ ವಕ್ತಾರ ಶಜಿಲ್ ಕೃಷ್ಣನ್ ಉಪಸ್ಥಿತರಿದ್ದರು.

ಕೊಡಗು ಪ್ರತ್ಯೇಕ ಲೋಕಸಭೆ, ವಿಧಾನಸಭಾ ಕ್ಷೇತ್ರ ರಚಿಸುವಂತೆ ಒತ್ತಾಯಿಸಿ

ತಲಕಾವೇರಿಯಲ್ಲಿ ಸಿಎನ್‌ಸಿ ಹಕ್ಕೋತ್ತಾಯ ಮಂಡನೆ



ತಲಕಾವೇರಿಯಲ್ಲಿ ಸಿಎನ್‌ಸಿ ನೇತೃತ್ವದಲ್ಲಿ ಮಾನವ ಸರಪಳಿ ನಿರ್ಮಿಸಿ ಹಕ್ಕೋತ್ತಾಯ ಮಂಡಿಸಲಾಯಿತು.

ಮಡಿಕೇರಿ, ಫೆ.4– ಕೇವಲ ಮೂರುವರೆ ಸಾವಿರದಷ್ಟಿರುವ ಸಿಕ್ಕಿಂನ ಬೌದ್ಧ ಭಿಕ್ಷುಗಳಿಗೆ ನೀಡಿರುವ ಮತ ಕ್ಷೇತ್ರದ ರೀತಿ ಸಂಸತ್ತು ಮತ್ತು ವಿಧಾನಸಭೆಯಲ್ಲಿ ಕೊಡವರಿಗೆ ವಿಶೇಷ ಪ್ರಾತಿನಿಧ್ಯ ಅಥವಾ ಪರ್ಯಾಯವಾಗಿ ಕೊಡವ ಸಾಂಪ್ರದಾಯಿಕ ಆವಾಸಸ್ಥಾನ ಒಳಗೊಂಡಿರುವ ವಿಶೇಷ ಕೊಡವ ಅಸೆಂಬ್ಲಿ ಮತ್ತು ಸಂಸದೀಯ ಕ್ಷೇತ್ರ ರಚಿಸಬೇಕು. ಆ ಮೂಲಕ ನಮಗೆ ಕೇಂದ್ರ ಪಾರ್ಲಿಮೆಂಟ್ ಹಾಗೂ ರಾಜ್ಯ ವಿಧಾನಸಭೆಯಲ್ಲಿ ಪ್ರಾತಿನಿಧ್ಯ ಕಲ್ಪಿಸಬೇಕು ಎಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಕಾವೇರಿ ಉಗಮ ಸ್ಥಾನ ತಲಕಾವೇರಿಯಲ್ಲಿ ಮಾನವ ಸರಪಳಿ ನಿರ್ಮಿಸಿ ಹಕ್ಕೋತ್ತಾಯ ಮಂಡಿಸಿತು.

ಈ ಸಂದರ್ಭ ಮಾತನಾಡಿದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ, ಕೊಡವರಿಗೆ ಕೊಡವ ಸಂಪ್ರದಾಯಿಕ ಜನ್ಮಭೂಮಿಯಲ್ಲಿ ಪ್ರತ್ಯೇಕ ಲೋಕಸಭೆ ಮತ್ತು ಅಸಂಬ್ಲಿ ಕೊಡವ ಮತ ಕ್ಷೇತ್ರವನ್ನು ರಚಿಸಬೇಕು. 2026ರಲ್ಲಿ ಸಂಸತ್ತ್ ಮತ್ತು ಅಸೆಂಬ್ಲಿ ಕ್ಷೇತ್ರದ ಗಡಿ ಮತ್ತು ಸಂಖ್ಯೆ ಪುನರ್ ನಿರ್ಣಯಿಸಲಾಗುವುದು. ಇದಕ್ಕಾಗಿ ಪ್ರಕ್ರಿಯೆ ಪ್ರಾರಂಭವಾಗಿದ್ದು, ಇದರ ದುರ್ಲಾಭ ಪಡೆದುಕೊಂಡು ಕೊಡವ ವಿರೋಧಿಗಳು ಕೊಡವರನ್ನು ಹಣಿಯಲು ಸಂಚು ಹೂಡುತ್ತಿದ್ದಾರೆ ಎಂದು ಆರೋಪಿಸಿದರು.

ರಾಜ್ಯದಲ್ಲಿ ಗರಿಷ್ಠ ಪ್ರಾತಿನಿಧ್ಯ ಹೊಂದಿರುವ ಜನಸಂಖ್ಯಾ ಪ್ರಾಬಲ್ಯದ ಕೂಟ ಕೊಡಗಿಗೆ ಪ್ರತ್ಯೇಕ ಲೋಕಸಭಾ ಕ್ಷೇತ್ರ ನಿರ್ಮಿಸುವ ನೆಪದಲ್ಲಿ ಸುಳ್ಯ ತಾಲೂಕನ್ನು ಕೊಡಗಿಗೆ ಸೇರಿಸಿ ಪ್ರತ್ಯೇಕ ಕೊಡಗು ಲೋಕಸಭಾ ಕ್ಷೇತ್ರ ನಿರ್ಮಿಸಿ ಶಾಶ್ವತವಾಗಿ ನಾವು ಸಂಸತ್ ಪ್ರಾತಿನಿಧ್ಯ ಪಡೆಯುವುದರೊಂದಿಗೆ ಕೊಡವರಿಗೆ ಪ್ರಾತಿನಿಧ್ಯ ಸಂಸತ್ತಿನಲ್ಲಿ ದಕ್ಕದಂತೆ ಒಳಸಂಚು ರೂಪಿಸಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದೇ ವೇಳೆ ಕಲಿಯಂಡ ಮೀನಾ ಪ್ರಕಾಶ್, ಪುಲ್ಲೇರ ಸ್ವಾತಿ, ರೇಖಾ ನಾಚಪ್ಪ, ಅರೆಯಡ ಸವಿತಾ, ಬೊಟ್ಟಂಗಡ ಸವಿತಾ, ಚೋಳಪಂಡ ಜ್ಯೋತಿ, ನಂದಿನೆರವಂಡ ನಿಶಾ, ಅಪ್ಪಾರಂಡ ನಂದಿನಿ, ಕಲಿಯಂಡ ಪ್ರಕಾಶ್, ಕಾಂಡೇರ ಸುರೇಶ್, ಪಟ್ಟಮಾಡ ಕುಶ, ಅರೆಯಡ ಗಿರೀಶ್, ಮಂದಪಂಡ ಮನೋಜ್, ಚಂಬಂಡ ಜನತ್, ಬೊಟ್ಟಂಗಡ ಗಿರೀಶ್, ಬೇಪಡಿಯಂಡ ದಿನು, ಪುಲ್ಲೇರ ಕಾಳಪ್ಪ ಮತ್ತಿತರರು ಎನ್.ಯು.ನಾಚಪ್ಪ ನೇತೃತ್ವದಲ್ಲಿ ತಲಕಾವೇರಿಯಲ್ಲಿ ವಿಶೇಷ ಪೂಜೆ ಸಲ್ಲಿಸಿ ಹಕ್ಕೋತ್ತಾಯ ಮಂಡಿಸಿದರು.

ವಿರಾಜಪೇಟೆ ವ್ಯಾಪ್ತಿ ಆಟದ ಮೈದಾನಗಳ ಪುನಶ್ಚೇತನ



ವಿರಾಜಪೇಟೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಬ್ಯಾಸ್ಕೆಟ್‌ಬಾಲ್ ಅಂಕಣವನ್ನು ಶಾಸಕ ಪೊನ್ನಣ್ಣ ಲೋಕಾರ್ಪಣೆಗೊಳಿಸಿದರು.

ವಿರಾಜಪೇಟೆ, ಫೆ.4– ವಿಧಾನಸಭೆ ಚುನಾವಣೆ ಸಂದರ್ಭ ನೀಡಿದ ಭರವಸೆಯಂತೆ ವಿರಾಜಪೇಟೆ ಹೋಬಳಿ ವ್ಯಾಪ್ತಿಯ ಆಟದ ಮೈದಾನಗಳನ್ನು ಪುನಶ್ಚೇತನಗೊಳಿಸಲಾಗುವುದು. ಈಗಾಗಲೇ ವಿರಾಜಪೇಟೆ ಹಾಗೂ ಹುದಿಕೇರಿಯಲ್ಲಿ ಮೈದಾನಗಳನ್ನು ಅಭಿವೃದ್ಧಿಗೊಳಿಸಲಾಗಿದೆ ಎಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.

ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜು ಮೈದಾನದಲ್ಲಿ 10 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿದ ಬ್ಯಾಸ್ಕೆಟ್‌ಬಾಲ್ ಅಂಕಣ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಇದೇ ಮೈದಾನದಲ್ಲಿ ಹಾಕಿ ಆಟಗಾರರಿಗೂ ಅಂಕಣಬೇಕೆಂದು ಮನವಿ ಸಲ್ಲಿಸಲಾಗಿದೆ. ಸ್ಥಳಾವಕಾಶ ನೋಡಿ ಸೂಕ್ತ ಅಂಕಣ ನಿರ್ಮಿಸಲಾಗುವುದು. ಸರ್ಕಾರ ಆಯಾ ಕ್ರೀಡೆಗಾಗಿ ನೀಡಿರುವ ಅನುದಾನದಿಂದ ನಿರ್ಮಿಸಿರುವ ಅಂಕಣವನ್ನು ಆಯಾ ಕ್ರೀಡೆಗಳಿಗೆ ಮಾತ್ರ ಬಳಸಬೇಕು ಎಂದು ತಿಳಿಸಿದರು.

ಪ್ರಸ್ತುತ ನಿರ್ಮಾಣಗೊಂಡಿರುವ ಬ್ಯಾಸ್ಕೆಟ್‌ಬಾಲ್ ಅಂಕಣಕ್ಕೆ ಚಾವಣಿ, ಸಿಂಥೆಟಿಕ್ ಅಳವಡಿಸಲಾಗುವುದು. ಇದಕ್ಕಾಗಿ 40 ಲಕ್ಷ ರೂ. ಅನುದಾನ ಬಿಡುಗಡೆಯಾಗಿದ್ದು, ಕಾಮಗಾರಿ ಕಳಪೆ ಆಗದಂತೆ ಎಚ್ಚರ ವಹಿಸಬೇಕು. ಪ್ರಸ್ತುತ ಕಾಮಗಾರಿ ಗುಟ್ಟಮಟ್ಟವಾಗಿದೆ ಎಂದು ತಂತ್ರಜ್ಞರು ಹೇಳಿದ್ದಾರೆ. ಮೈದಾನದ ವೇದಿಕೆ ಹಾಗೂ ಛತ್ರಕರೆ ಪಕ್ಕದ ವೇದಿಕೆಯನ್ನು ಅಭಿವೃದ್ಧಿಗೊಳಿಸಿ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲು ಅವಕಾಶ ನೀಡಲಾಗುವುದು ಎಂದರು.

ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಚಿಲ್ಲವಂಡ ಕಾವೇರಪ್ಪ, ಪ್ರಾಂಶುಪಾಲೆ ಎನ್.ಕೆ.ಜ್ಯೋತಿ ಮಾತನಾಡಿದರು. ಪುರಸಭೆ ಸದಸ್ಯರಾದ ಪಿ.ರಂಜಿ ಪೂಣಚ್ಚ, ಎಸ್.ಎಚ್.ಮತ್ತೀನ್, ಮಹಮದ್ ರಫಿ, ಕಾಂಗ್ರೆಸ್ ನಗರಾಧ್ಯಕ್ಷ ಮಾದಂಡ ತಿಮ್ಮಯ್ಯ, ಉಪನ್ಯಾಸಕ ವಿನೋದ್ ಕುಮಾರ್, ಬ್ಯಾಸ್ಕೆಟ್ ಬಾಲ್ ಅಸೋಸಿಯೇಷನ್ ಪದಾಧಿಕಾರಿಗಳು, ಕಾಂಗ್ರೆಸ್ ಕಾರ್ಯಕರ್ತರು, ಕ್ರೀಡಾಪಟುಗಳು ಉಪಸ್ಥಿತರಿದ್ದರು.

ಅಪಾಯದ ವಿದ್ಯುತ್ ಕಂಬಗಳ ಬಗ್ಗೆ ದೂರು ನೀಡಿ

ಮಡಿಕೇರಿ, ಫೆ.4– ಜಿಲ್ಲೆಯಾದ್ಯಂತ ಬಹುತೇಕ ತೋಟಗಳು, ಅರಣ್ಯ ಪ್ರದೇಶಗಳ ಮಧ್ಯೆ ಹಾಗೂ ಕಡಿದಾದ ಬೆಟ್ಟಗುಡ್ಡಗಳ ಅಂಚಿನಲ್ಲಿ ಹಾದುಹೋಗಿರುವ ವಿದ್ಯುತ್ ವಿತರಣಾ ಮಾರ್ಗಗಳ ಕಂಬ ಹಾಗೂ ತಂತಿಗಳು ಶಿಥಿಲಗೊಂಡಿರುವುದು ಕಂಡುಬಂದರೆ ತಕ್ಷಣ ಸೆಸ್ಕ್ ಅಧಿಕಾರಿಗಳು ಅಥವಾ ಸಹಾಯವಾಣಿ 1912ಕ್ಕೆ ಸಾರ್ವಜನಿಕರು ದೂರು ನೀಡಬಹುದು. ಮಳೆಗಾಲ ಹಾಗೂ ಪ್ರಕೃತಿ ವಿಕೋಪದಂತಹ ಸಂದರ್ಭಗಳಲ್ಲಿ ಮರದ ಕೊಂಬೆಗಳು ಬೀಳುವಂತದ್ದು, ಕಡಿದಾದ ಗುಡ್ಡಗಳ ಜರಿತದಿಂದ ಕಂಬಗಳು ಬಾಗಿ, ತಂತಿಗಳು ತೀರಾ ಅಪಾಯ ಮಟ್ಟದಲ್ಲಿ ಬೀಳುವ ಸನ್ನಿವೇಶಗಳು ಎದುರಾಗಬಹುದು. ಇದರಿಂದಾಗಿ ವಿದ್ಯುತ್ ಅವಘಡ ಸಂಭವಿಸಬಹುದು.

ತೋಟಗಳಲ್ಲಿ ಕಾಳು ಮೆಣಸು ಕೀಳಲು ಮತ್ತು ಮರದ ಕೊಂಬೆಗಳನ್ನು ಕಡಿಯಲು ಅಲ್ಯೂಮಿನಿಯಂ ಏಣಿ ಮತ್ತು ನೀರು ಹಾಯಿಸಲು ಅಲ್ಯೂಮಿನಿಯಂ ಸ್ಪ್ರಿಂಕ್ಲರ್ ಪೈಪ್‌ಗಳು ವಿದ್ಯುತ್ ತಂತಿಗೆ ತಾಗಿ ಆಗಿಂದಾಗ್ಗೆ ವಿದ್ಯುತ್ ಅಪಘಾತಗಳು ಸಂಭವಿಸುತ್ತಿವೆ. ಆದ್ದರಿಂದ, ಅಲ್ಯೂಮಿನಿಯಂ, ಕಬ್ಬಿಣದ ಏಣಿ ಬದಲು ಫೈಬರ್ ಏಣಿಗಳನ್ನು ಕಡ್ಡಾಯವಾಗಿ ಉಪಯೋಗಿಸಬೇಕೆಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಅಖಿಲ ಕೊಡವ ಸಮಾಜ ನೇತೃತ್ವದ 'ಕೊಡವಾಮೆ ಬಾಳೋ' ಪಾದಯಾತ್ರೆಯಲ್ಲಿ

3ನೇ ದಿನ ಸಾವಿರಾರು ಜನ ಭಾಗಿ



ಅಖಿಲ ಕೊಡವ ಸಮಾಜದ ನೇತೃತ್ವದಲ್ಲಿ ನಡೆಯುತ್ತಿರುವ 3ನೇ ದಿನದ 'ಕೊಡವಾಮೆ ಬಾಳೋ' ಪಾದಯಾತ್ರೆಯಲ್ಲಿ ಸಾವಿರಾರು ಜನ ಪಾಲ್ಗೊಂಡಿದ್ದರು.

ಮಡಿಕೇರಿ, ಫೆ.4–ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅಖಿಲ ಕೊಡವ ಸಮಾಜ ನೇತೃತ್ವದಲ್ಲಿ ಹಮ್ಮಿಕೊಂಡಿರುವ ಕುಟ್ಟದಿಂದ ಮಡಿಕೇರಿವರೆಗಿನ 'ಕೊಡವಾಮೆ ಬಾಳೋ' ಪಾದಯಾತ್ರೆ 3ನೇ ದಿನವಾದ ಮಂಗಳವಾರ ಪೊನ್ನಂಪೇಟೆಯಿಂದ ವಿರಾಜಪೇಟೆ ಬಿಟ್ಟಂಗಾಲದವರೆಗೆ ಸಾಗಿತು.

ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ಕೊಡವ ಕೊಡವತಿಯರ ಸಹಿತ ಮಕ್ಕಳು ಹಾಗೂ ವೃದ್ಧರು ಪಾದಯಾತ್ರೆಯಲ್ಲಿ ಹೆಜ್ಜೆ ಹಾಕಿದರು. ಪಾದಯಾತ್ರೆಗೂ ಮುನ್ನ ಪೊನ್ನಂಪೇಟೆ ಪಟ್ಟಣದ ಸ್ಥಾಪಕ ದಿವಾನ್ ಚೆಪ್ಪುಡೀರ ಪೊನ್ನಪ್ಪ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಅವರಿಗೆ ಗೌರವ ಸಲ್ಲಿಸಲಾಯಿತು.

ಹೈಸೊಡ್ಲೂರು ಗ್ರಾಮದ 68 ವರ್ಷದ ಬಯವಂಡ ಸರಸ್ವತಿ ಪೂವಯ್ಯ ಸತತ 2ನೇ ದಿನವೂ ವ್ಹೀಲ್ ಚೇರ್‌ನಲ್ಲಿ ಪಾದಯಾತ್ರೆಯಲ್ಲಿ ಸಾಗಿದರು. ಹಾಕಿ ಆಟಗಾರ ಓಲಂಪಿಯನ್ ಸಣ್ಣುವಂಡ ಉತ್ತಪ್ಪ, ಬಿ.ಕೆ.ಸುಬ್ರಮಣಿ ಮತ್ತು ಕ್ರೀಡಾ ವೀಕ್ಷಕ ವಿವರಣೆಗಾರ ಚೆಪ್ಪುಡಿರ ಕಾರ್ಯಪ್ಪ ಅವರು ಪಾದಯಾತ್ರೆಯಲ್ಲಿ ಭಾಗಿಯಾಗುವ ಮೂಲಕ ಬೆಂಬಲ ಸೂಚಿಸಿದರು.

ಫೆ.8ರಂದು ಯಳಂದೂರಿನಲ್ಲಿ ಐಎಎಸ್ ಕಾರ್ಯಾಗಾರ



ಸುದ್ದಿಗೋಷ್ಠಿಯಲ್ಲಿ ಸಮರ್ಪಣ ಫೌಂಡೇಷನ್ ಅಧ್ಯಕ್ಷ ಎಂ.ಎನ್.ರಾಜು ಅಗರ ಮಾತನಾಡಿದರು.

ಚಾಮರಾಜನಗರ, ಫೆ.4–ಯಳಂದೂರಿನಲ್ಲಿ ಫೆ.8ರಂದು ಸಮರ್ಪಣ ಫೌಂಡೇಷನ್‌ನಿಂದ ಸುರಕ್ಷಿತ ಭಾರತ ನಿರ್ಮಾಣ ಘೋಷಣೆಯಡಿ 'ನಾನು ಐಎಎಸ್' ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಫೌಂಡೇಷನ್ ಅಧ್ಯಕ್ಷ ಎಂ.ಎನ್.ರಾಜು ಅಗರ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಅಂದು ಬೆಳಗ್ಗೆ 10 ಗಂಟೆಗೆ ನಡೆಯುವ ಕಾರ್ಯಾಗಾರವನ್ನು ಜಿಲ್ಲಾಧಿಕಾರಿ ಶಿಲ್ಪನಾಗ್ ಉದ್ಘಾಟಿಸಲಿದ್ದಾರೆ. ಮಾಜಿ ಸಚಿವ ಎನ್.ಮಹೇಶ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಸಾಧನಾ ಅಕಾಡೆಮಿಯ ಬಿ.ಮಂಜುನಾಥ್ ವಿಶೇಷ ಉಪನ್ಯಾಸ ನೀಡಲಿದ್ದು, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಹೆಚ್.ವಿ. ಚಂದ್ರು ಮತ್ತಿತರರು ಪಾಲ್ಗೊಳ್ಳಲಿದ್ದಾರೆ. ಜಿಲ್ಲೆಯ ವಿವಿಧ ಕಾಲೇಜು ವಿದ್ಯಾರ್ಥಿಗಳು, ಸ್ಪರ್ಧಾತ್ಮಕ ಪರೀಕ್ಷಾ ಆಕಾಂಕ್ಷಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿ ಪ್ರಯೋಜನ ಪಡೆಯಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಫೌಂಡೇಷನ್‌ನ ದಿಲೀಪ್ ಉಪ್ಪಿನಮೋಳೆ, ಸುರೇಶ್ ಹೊಸೂರು, ಮಹೇಶ್ ಕಂದಳ್ಳಿ, ಶ್ರೀನಿವಾಸ್ ಕೊಳ್ಳೇಗಾಲ ಹಾಜರಿದ್ದರು.

ಸಾಲಗಾರರಿಗೆ ಕಿರುಕುಳ ನೀಡುವ ಮೈಕ್ರೋ ಫೈನಾನ್ಸ್‌ಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ

ಲೀಡ್ ಬ್ಯಾಂಕ್ ಅಧಿಕಾರಿಗಳ ಸಭೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪನಾಗ್ ಎಚ್ಚರಿಕೆ



ಚಾಮರಾಜನಗರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಮೈಕ್ರೋ ಫೈನಾನ್ಸ್ ಪ್ರತಿನಿಧಿಗಳ ಸಭೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪನಾಗ್ ಮಾತನಾಡಿದರು.

ಚಾಮರಾಜನಗರ, ಫೆ.4– ಜಿಲ್ಲೆಯ ಯವುದೇ ಭಾಗದಲ್ಲಿ ಮೈಕ್ರೋ ಫೈನಾನ್ಸ್‌ಗಳು, ಲೇವಾದೇವಿದಾರರು ಹಾಗೂ ಇತರೆ ವ್ಯಕ್ತಿಗಳು ಸಾಲಗಾರರಿಗೆ ಕಿರುಕುಳ ನೀಡುವುದು ಕಂಡು ಬಂದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ಎಚ್ಚರಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಮೈಕ್ರೋ ಫೈನಾನ್ಸ್, ಆರ್‌ಬಿಐ ಪ್ರತಿನಿಧಿಗಳು ಹಾಗೂ ಲೀಡ್ ಬ್ಯಾಂಕ್ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಸಾಲ ನೀಡುವ ಮೈಕ್ರೋ ಫೈನಾನ್ಸ್‌ಗಳು ಆರ್‌ಬಿಐ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಸಾಲಗಾರರು ಅಥವಾ ಅವರ ಕುಟುಂಬದ ಸದಸ್ಯರ ಮೇಲೆ ಸಾಲ ವಸೂಲಾತಿಗಾಗಿ ವಿನಾಕಾರಣ ಒತ್ತಡ ತರುವಂತಿಲ್ಲ. ಸಾಲ ಪಡೆದವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸುವುದು, ಅವಮಾನಿಸುವುದು, ಹಿಂಸೆ ನೀಡುವಂತಿಲ್ಲ ಸಾಲಗಾರರ ಸ್ವಾಧೀನದಲ್ಲಿರುವ ವಸ್ತು, ಆಸ್ತಿಗಳ ಬಳಕೆಗೆ ಅಡ್ಡಿಪಡಿಸಬಾರದು ಎಂದು ಸೂಚಿಸಿದರು.

ಸಾಲ ವಸೂಲಿ ಮಾಡಲು ಯಾವುದೇ ಬಲವಂತದ ಕ್ರಮ ಅನುಸರಿಸಬಾರದು. ಸಾಲ ವಸೂಲಿಗಾಗಿ ಹೊರ ವ್ಯಕ್ತಿಗಳು, ಅಪರಾಧ ಹಿನ್ನಲೆ ಹೊಂದಿರುವವರನ್ನು ಬಳಸಿ ಬೆದರಿಕೆ ಹಾಕಬಾರದು. ಮೈಕ್ರೋ ಫೈನಾನ್ಸ್ ಕಂಪನಿಗಳು ಮತ್ತು ಲೇವಾದೇವಿದಾರರು ನೀಡುತ್ತಿರುವ ಕಿರುಕುಳದಿಂದ ಸಾಲಗಾರರನ್ನು ರಕ್ಷಿಸಲು ಸರ್ಕಾರದಿಂದ ಹೊರಡಿಸಲಾಗುವ ಹೊಸ ಆಜ್ಞೆ ಹಾಗೂ ಆದೇಶಗಳನ್ನು ನಿರೀಕ್ಷಿಸಲಾಗಿದೆ. ಇದರಂತೆ ಕಿರುಕುಳ ನೀಡುವ ಮೈಕ್ರೊ ಫೈನಾನ್ಸ್‌ಗಳ ವಿರುದ್ಧ ಕ್ರಮ ವಹಿಸಲಾಗುವುದು ಎಂದರು.

ಮೈಕ್ರೊ ಫೈನಾನ್ಸ್‌ಗಳ ಕಿರುಕುಳ ಕುರಿತ ದೂರು ಸಲ್ಲಿಸಲು ಸಹಾಯವಾಣಿ ತೆರೆಯಲಾಗಿದೆ. ನೋಂದಣಿ ಪರವಾನಗಿ ಹೊಂದಿರುವವರು ಹಾಗೂ ಇಲ್ಲದಿರುವ ಎಲ್ಲಾ ಮೈಕ್ರೋ ಫೈನಾನ್ಸ್‌ಗಳು, ಲೇವಾದೇವಿದಾರರು ಇತರೆ ಸಾಲ ನೀಡುವವರ ಮೇಲೆ ನಿಗಾವಹಿಸಲಾಗಿದೆ. ಎಲ್ಲಾ ಮಾಹಿತಿಯನ್ನು ಕಲೆ ಹಾಕಲಾಗುತ್ತಿದ್ದು, ಜಿಲ್ಲೆಯ ಎಲ್ಲಿಯೇ ಆಗಲಿ ಸಾಲಗಾರರಿಗೆ ಅನಾವಶ್ಯಕವಾಗಿ ತೊಂದರೆ ನೀಡುವವರ ವಿರುದ್ಧ ಕ್ರಮ ವಹಿಸುತ್ತೇವೆ. ಮೈಕ್ರೋ ಫೈನಾನ್ಸ್‌ಗಳು ನಿಯಮಾವಳಿ, ಮಾರ್ಗಸೂಚಿ ಉಲ್ಲಂಘನೆ ಮಾಡಬಾರದು ಎಂದು ಕಟುನಿಟ್ಟಿನ ಸೂಚನೆ ನೀಡಿದರು.

ಆರ್‌ಬಿಐ ನಿಯಮಗಳ ಪ್ರಕಾರ ನೀಡಲಾಗುವ ಸಾಲದ ಮೊತ್ತ, ವಿಧಿಸಿರುವ ಬಡ್ಡಿ ದರ, ಮಾಸಿಕ ಕಂತುಗಳು ಸೇರಿದಂತೆ ಎಲ್ಲಾ ವಿವರಗಳನ್ನು ಸ್ಥಳೀಯ ಭಾಷೆಯಲ್ಲಿ ಸಾಲ ಪಡೆದವರಿಗೆ ವಿವರಿಸಬೇಕು. ಪಾರದರ್ಶಕವಾಗಿ ಪ್ರಕ್ರಿಯೆ ಇರಬೇಕು. ಜಿಲ್ಲೆಯಲ್ಲಿ ವ್ಯಾಪಕವಾಗಿ ಜನರಿಗೆ ಅರಿವು ಮೂಡಿಸುವ ಕಾರ್ಯಕ್ರಮ ಆಯೋಜಿಸಲಾಗುವುದು. ಗ್ರಾಮಸಭೆಗಳಲ್ಲೂ ಜಾಗೃತಿ, ಶಿಬಿರ ಹಮ್ಮಿಕೊಳ್ಳಲು ಸೂಚನೆ ನೀಡಲಾಗಿದೆ. ಇಂತಹ ಕಾರ್ಯ ಕ್ರಮಗಳಲ್ಲಿ ಮೈಕ್ರೋ ಫೈನಾನ್ಸ್‌ಗಳ ಪ್ರತಿನಿಧಿಗಳು ಭಾಗವಹಿಸಿ ಜನರಿಗೆ ವಾಸ್ತವ ಅಂಶ ಮನವರಿಕೆ ಮಾಡಿಕೊಡಬೇಕೆಂದು ತಿಳಿಸಿದರು.

> ಮೈಕ್ರೊ ಫೈನಾನ್ಸ್‌ಗಳು ಮರುಪಾವತಿಸುವ ಸಾಮರ್ಥ್ಯಕ್ಕೆ ಅನುಗುಣವಾಗಿ ಸಾಲ ವಿತರಿಸಬೇಕು. ನಿಯಮಾವಳಿಗಳ ಪ್ರಕಾರ ಬೆಳಗ್ಗೆ 9 ರಿಂದ ಸಂಜೆ 5 ಗಂಟೆ ವರೆಗೆ ಮಾತ್ರ ಸಾಲಗಾರರ ಮನೆ ಬಳಿ ತೆರಳಬೇಕು. ನಿಗದಿತ ವೇಳೆ ನಂತರ ಸಾಲ ವಸೂಲಿ ಮಾಡುವಂತಿಲ್ಲ.
>
> -ವಿಜಯಶ್ರೀ, ಆರ್‌ಬಿಐನ ಲೀಡ್ ಜಿಲ್ಲಾ ಅಧಿಕಾರಿ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಮಾತನಾಡಿ, ಸಾಲಗಾರರನ್ನುಗೆ ಶೋಷಣೆ ಮಾಡುವಂತಿಲ್ಲ. ಸಾಲ ಕಟ್ಟುವ ಸಾಮರ್ಥ್ಯವಿಲ್ಲದಿದ್ದರೂ ಲಾಭವನ್ನಷ್ಟೇ ಕೇಂದ್ರೀಕರಿಸಿ ಸಾಲ ನೀಡಿ ಬಳಿಕ ಬಲವಂತದ ವಸೂಲಿಗೆ ಫೈನಾನ್ಸ್‌ಗಳು ಮುಂದಾಗಬಾರದು. ಸಾಲ ನೀಡುವ ಮುನ್ನ ಸಾಲಗಾರರ ಆದಾಯ ನೋಡಬೇಕು. ಕಿರುಕುಳಕ್ಕೆ ಸಂಬಂಧಿಸಿದ ದೂರುಗಳು ಬಂದರೆ ನಿಯಮಾನುಸಾರ ಪ್ರಕರಣ ದಾಖಲು ಮಾಡಿ ತ್ವರಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್, ಉಪವಿಭಾಗಾಧಿಕಾರಿ ಬಿ.ಆರ್.ಮಹೇಶ್, ಲೀಡ್ ಬ್ಯಾಂಕ್ ವ್ಯವಸ್ಥಾಪಕ ಎಂ.ಎನ್.ಸುರೇಖ, ತಹಸೀಲ್ದಾರ್‌ಗಳು, ತಾಪಂ ಇಓಗಳು, ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು, ಮೈಕ್ರೋ ಫೈನಾನ್ಸ್ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಆಕಸ್ಮಿಕ ಬೆಂಕಿಗೆ 2 ಎಕರೆ ಕುರುಚಲು ಗಿಡ ಭಸ್ಮ



ಚಾಮರಾಜನಗರ, ಫೆ.4– ಆಕಸ್ಮಿಕ ಬೆಂಕಿ ತಗುಲಿ ಸುಮಾರು ಎರಡು ಎಕರೆ ಪ್ರದೇಶದ ಕುರುಚಲು ಗಿಡಗಳು ಸುಟ್ಟು ಭಸ್ಮವಾಗಿರುವ ಘಟನೆ ಸಮೀಪದ ನಂಜನಗೂಡು ರಸ್ತೆಯ ಚಾಮರಾಜನಗರ ವಿಶ್ವವಿದ್ಯಾಲಯ ಅಕ್ಕಪಕ್ಕ ಮಂಗಳವಾರ ನಡೆದಿದೆ. ಬೆಂಕಿ ಬಿದ್ದಿರುವ ವಿಚಾರ ತಿಳಿದು ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳದ ಅಧಿಕಾರಿ ಶಿವಾಜಿರಾವ್ ಪವರ್ ನೇತೃತ್ವದಲ್ಲಿ ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು.


ನಿಧನ



ಗುರುಲಿಂಗಪ್ಪ

ಚಾಮರಾಜನಗರ, ಫೆ.4– ತಾಲೂಕಿನ ನಂಜೇದೇವನಪುರ ಗ್ರಾಮದ ಮುಖಂಡ ಸೊಸೈಟಿ ಗುರುಲಿಂಗಪ್ಪ (87) ಮಂಗಳವಾರ ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರಿಯರು, ಪುತ್ರ ಇದ್ದಾರೆ. ಮೃತ ದೇಹವನ್ನು ನಗರದ ಮೆಡಿಕಲ್ ಕಾಲೇಜಿಗೆ ನೀಡುವುದಾಗಿ ಕುಟುಂಬದವರು ತಿಳಿಸಿದ್ದಾರೆ.

ಆಲೂರು ಜಯಮ್ಮ



ಯಳಂದೂರು, ಫೆ.4–ಸಮೀಪದ ಆಲೂರು ಗ್ರಾಮದ ಪರಿಶಿಷ್ಟ ಬಡಾವಣೆಯ ದಿ.ರಂಗಸ್ವಾಮಿ ಅವರ ಪತ್ನಿ ಜಯಮ್ಮ (70) ಅನಾರೋಗ್ಯದಿಂದ ಮಂಗಳವಾರ ನಿಧನರಾದರು.

ಮೃತರಿಗೆ ಇಬ್ಬರು ಪುತ್ರರು, ಪುತ್ರಿ ಇದ್ದಾರೆ. ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಬಸ್ ಚಾಲನೆ ಮಾಡಿದ್ದ ಶಿಕ್ಷಕ ಅಮಾನತು


ಚಾಮರಾಜನಗರ, ಫೆ.4– ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳು ಶೈಕ್ಷಣಿಕ ಪ್ರವಾಸಕ್ಕೆ ತೆರಳಿದ್ದ ಸಂದರ್ಭದಲ್ಲಿ ಪ್ರವಾಸಿ ಬಸ್ ಅನ್ನು ಚಾಲನೆ ಮಾಡಿದ್ದ ಶಿಕ್ಷಕನನ್ನು ಅಮಾನತುಗೊಳಿಸಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇ ಅರಸ್ ಆದೇಶ ಹೊರಡಿಸಿದ್ದಾರೆ.

ತಾಲೂಕಿನ ಗುಂಬಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ಶಿಕ್ಷಕ ವೀರಭದ್ರಸ್ವಾಮಿ ಅಮಾನತುಗೊಂಡಿದ್ದು, ಈತ ಡಿ.28ರಿಂದ 4 ದಿನಗಳ ಶೈಕ್ಷಣಿಕ ಪ್ರವಾಸಕ್ಕೆ ತೆರಳಿದ್ದ ವೇಳೆ ಪ್ರವಾಸಿ ಬಸ್ ಅನ್ನು ಚಾಲನೆ ಮಾಡಿದ್ದರು. ವಿದ್ಯಾರ್ಥಿಗಳು ಅದನ್ನು ಚಿತ್ರೀಕರಣ ಮಾಡಿದ್ದರು. ಈ ವಿಡಿಯೋ ತುಣುಕು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು.

ಈ ಸಂಬಂಧ ಶಿಕ್ಷಕರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಶಾಲಾ ಶಿಕ್ಷಣ ಇಲಾಖೆಗೆ ದೂರು ನೀಡಲಾಗಿತ್ತು. ಬಳಿಕ ಇಲಾಖೆಯಿಂದ ಶಿಕ್ಷಕ ವೀರಭದ್ರಸ್ವಾಮಿ ಮತ್ತು ದೈಹಿಕ ಶಿಕ್ಷಣ ಶಿಕ್ಷಕರ ವಿರುದ್ಧ ನೋಟಿಸ್ ಜಾರಿಗೊಳಿಸಲಾಗಿತ್ತು. ಯಳಂದೂರು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸೂಚನೆ ನೀಡಲಾಗಿತ್ತು. ಬಿಇಓ ವರದಿ ಆಧರಿಸಿ ಇಲಾಖೆ ವಿಚಾರಣೆಯನ್ನು ಬಾಕಿ ಇರಿಸಿ, ಶಿಕ್ಷಕ ವೀರಭದ್ರಸ್ವಾಮಿ ಅವರನ್ನು ಅಮಾನತುಗೊಳಿಸಲಾಗಿದೆ.

ಚಾಮುಂಡೇಶ್ವರಿಗೆ ವಜ್ರಾಂಗಿ ಆಭರಣ

ಚಾಮರಾಜನಗರ, ಫೆ.4–ನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಚಾಮುಂಡೇಶ್ವರಿ ದೇವಿಗೆ ಸ್ವರ್ಣಲೇಪಿತ ವಜ್ರಾಂಗಿ ಆಭರಣ ತೊಡಿಸಲಾಯಿತು. ಚಾಮರಾಜೇಶ್ವರ ದೇವಸ್ಥಾನ ಪ್ರಧಾನ ಅರ್ಚಕರಾಗಿ ಸೇವೆ ಸಲ್ಲಿಸಿದ್ದ ಹುಲ್ಲಹಳ್ಳಿ ಹೆಚ್.ವಿ.ವಿಶ್ವೇಶ್ವರ ಪಂಡಿತ ಅವರ ಪುತ್ರ ಶ್ರೀಕಂಠಸ್ವಾಮಿ ಧಾರ್ಮಿಕ ವಿಧಿವಿಧಾನಗಳೊಂದಿಗೆ ಪೂಜೆ ಸಲ್ಲಿಸಿದ ಬಳಿಕ ದೇವಿಗೆ ಆಭರಣ ತೊಡಿಸಲಾಯಿತು. ಈ ಸಂದರ್ಭದಲ್ಲಿ ಶ್ರೀಕಂಠಸ್ವಾಮಿ ಹಾಗೂ ಅವರ ಕುಟುಂಬ, ತಹಸೀಲ್ದಾರ್ ಗಿರಿಜಾ, ದೇವಾಲಯ ಆಗಮಿಕರಾದ ಡಾ.ನಾಗರಾಜ ದೀಕ್ಷಿತ್, ದರ್ಶನ್, ಗಣೇಶ್ ದೀಕ್ಷಿತ್, ಪ್ರದೀಪ್ ಕುಮಾರ್ ದೀಕ್ಷಿತ್ ಮತ್ತಿತರರಿದ್ದರು.



ಹೊಸಹಂಪಾಪುರದಲ್ಲಿ ಚಿರತೆ ಮರಿ ಪ್ರತ್ಯಕ್ಷ

ಕೊಳ್ಳೇಗಾಲ: ತಾಲೂಕಿನ ಹೊಸಹಂಪಾಪುರ ಗ್ರಾಮದಲ್ಲಿ ಚಿರತೆ ಮರಿ ಓಡುತ್ತಿರುವ ದೃಶ್ಯವನ್ನು ಗ್ರಾಮಸ್ಥರು ವಿಡಿಯೋದಲ್ಲಿ ಸೆರೆ ಹಿಡಿದಿದ್ದಾರೆ. ಗ್ರಾಮದ ಹೊರವಲಯದ ಹೌಸಿಂಗ್ ಬೋರ್ಡ್ ನಿವೇಶನದಲ್ಲಿ ಚಿರತೆ ಮರಿ ಓಡುತ್ತಿರುವ ದೃಶ್ಯ ವೈರಲ್ ಆಗಿದೆ. ಚಿರತೆ ಮರಿ ಕಬ್ಬಿನಗದ್ದೆಯತ್ತ ಓಡಿ ಹೋಗಿದೆ. ಸ್ಥಳಕ್ಕೆ ಪಿಎಸ್ಐ ವರ್ಷಾ ಹಾಗೂ ಸಿಬ್ಬಂದಿ ವೀರೇಂದ್ರ ಸೇರಿದಂತೆ ಇನ್ನಿತರರು ಭೇಟಿ ನೀಡಿ ಪರಿಶೀಲಿಸಿದ್ದಾರೆ. ಬಳಿಕ ಅರಣ್ಯಾಧಿಕಾರಿ ಭರತ್ ಮತ್ತು ಸಿಬ್ಬಂದಿ ಭೇಟಿ ನೀಡಿ ಗ್ರಾಮಸ್ಥರಿಂದ ಮಾಹಿತಿ ಪಡೆದರು.

ಯರಿಯೂರಲ್ಲಿ ಕೊಂಡೋತ್ಸವ: ಸೌದೆ ಮೆರವಣಿಗೆ



ಯರಿಯೂರು ಗ್ರಾಮಕ್ಕೆ ಕೊಂಡೋತ್ಸವದ ಸೌದೆಯನ್ನು ಮೆರವಣಿಗೆ ಮೂಲಕ ಕೊಂಡೊಯ್ಯಲಾಯಿತು.

ಯಳಂದೂರು, ಫೆ.4–ತಾಲೂಕಿನ ಯರಿಯೂರು ಗ್ರಾಮದಲ್ಲಿ ಫೆ.17ರಂದು ನಡೆಯಲಿರುವ ಮಂಟೇಸ್ವಾಮಿ ಕೊಂಡೋತ್ಸವಕ್ಕೆ ಸೌದೆಯನ್ನು ಸೋಮವಾರ ಮೆರವಣಿಗೆ ಮೂಲಕ ಕೊಂಡೊಯ್ಯಲಾಯಿತು.

ಹತ್ತಾರು ಅಲಂಕೃತ ಎತ್ತಿನಗಾಡಿ, ಟ್ರ್ಯಾಕ್ಟರ್ ಹಾಗೂ ಗೂಡ್ಸ್ ಆಟೋಗಳಲ್ಲಿ ತಾಲೂಕಿನ ಗುಂಬಳ್ಳಿ ಗ್ರಾಮದಿಂದ ಸೌದೆಯನ್ನು ಯಳಂದೂರು ಪಟ್ಟಣದ ಮೂಲಕ ಯರಿಯೂರು ಗ್ರಾಮಕ್ಕೆ ಕೊಂಡೊಯ್ಯಲಾಯಿತು.

ಯರಿಯೂರು ಗ್ರಾಮದ ಅಂಬೇಡ್ಕರ್ ಸಮುದಾಯ ಭವನದ ಮುಂಭಾಗ ಮಂಟೇಸ್ವಾಮಿ ಕೊಂಡೋತ್ಸವ ನಡೆಯಲಿದ್ದು, ಪ್ರತಿವರ್ಷ ಅದ್ಧೂರಿ ಮೆರವಣಿಗೆ ಮೂಲಕ ಸೌದೆ ತರಲಾಗುವುದು. ಅದರಂತೆ ಈ ಬಾರಿಯೂ ರಸ್ತೆಯುದ್ದಕ್ಕೂ ಪಟಾಕಿ ಸಿಡಿಸಿ, ಮಂಗಳವಾದ್ಯ ಸೇರಿದಂತೆ ವಿವಿಧ ಕಲಾತಂಡ, ದೇವರ ಕುಣಿತದ ಮೂಲಕ ಸೌದೆ ತರಲಾಯಿತು.

ಗೋಕಳ್ಳರ ಮೇಲೆ ಸ್ಥಳದಲ್ಲೇ ಶೂಟೌಟ್

ಸಚಿವ ಮಂಕಾಳ್ ವೈದ್ಯ ಹೇಳಿಕೆಗೆ ವ್ಯಾಪಕ ವಿರೋಧ

ಬೆಂಗಳೂರು, ಫೆ.4– ಗೋಕಳ್ಳತನ ಮಾಡುವವರ ಮೇಲೆ ಸ್ಥಳದಲ್ಲೇ ಶೂಟೌಟ್ ಮಾಡಲಾಗುವುದು ಎಂಬ ಕಾಂಗ್ರೆಸ್ ಸಚಿವ ಮಂಕಾಳ್ ವೈದ್ಯ ನೀಡಿದ ಹೇಳಿಕೆಗೆ ವ್ಯಾಪಕ ವಿರೋಧ ವ್ಯಕ್ತವಾಗಿದೆ.



ಒಂದೆಡೆ ಸಾಮಾಜಿಕ ಜಾಲತಾಣದಲ್ಲಿ ಹಲವರು ಮಂಕಾಳ್ ವೈದ್ಯ ಅವರ ಹೇಳಿಕೆಯನ್ನು ಆರ್‌ಎಸ್‌ಎಸ್ ಮನಸ್ಸಿಗೆ ಹೋಲಿಕೆ ಮಾಡಿದ್ದು, ಮತ್ತೊಂದೆಡೆ ಸರ್ಕಾರಕ್ಕೆ ತೀವ್ರ ಮುಜುಗರ ಉಂಟು ಮಾಡಿದ್ದು ಸಚಿವರ ಹೇಳಿಕೆಯನ್ನು ಖಂಡಿಸಲೂ ಆಗದೇ, ಸಮರ್ಥಿಸಿಕೊಳ್ಳಲೂ ಆಗದೇ ಇರುವ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಪಕ್ಷ ಇದೆ.

ತಮ್ಮ ಸಹೋದ್ಯೋಗಿ ಸಚಿವ ಮಂಕಾಳ್ ವೈದ್ಯ ಅವರ ಹೇಳಿಕೆಗಳ ಪ್ರತಿಕ್ರಿಯೆ ಕೇಳಿದ ಮಾಧ್ಯಮಗಳಿಗೆ ಉತ್ತರಿಸಿರುವ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಮಂಕಾಳ್ ವೈದ್ಯ ಅವರದ್ದು ವೈಯಕ್ತಿಕ ಹೇಳಿಕೆ. ಈ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ.

ಮಂಕಾಳ್ ವೈದ್ಯ ಅವರ ಹೇಳಿಕೆಗೆ ಹಲವರಿಂದ ವಿರೋಧ ವ್ಯಕ್ತವಾಗುತ್ತಿದ್ದು, ಮಂಕಾಳ್ ವೈದ್ಯ ಸಮಾಜವಾದಿ ಸಿದ್ದರಾಮಯ್ಯ ಅವರ ಸರ್ಕಾರದ ಸಚಿವರಾ, ಮಂಕಾಳ್ ವೈದ್ಯ ಅವರು ಸಿದ್ದರಾಮಯ್ಯ ಸರ್ಕಾರವನ್ನು ಬಿಜೆಪಿ ಸರ್ಕಾರ ಎಂದು ಭಾವಿಸಿದ್ದಾರಾ, ದನಕಳ್ಳತನ ಮಾಡಿದರೆ ಅವರಿಗೆ ಶಿಕ್ಷೆ ಕೊಡಿಸುವ ವ್ಯವಸ್ಥೆ ಇದೆ ಎಂಬುದನ್ನೂ ಮರೆತು ಮಾತನಾಡುತ್ತಿರುವ ಸಚಿವರ ಹೇಳಿಕೆ ಸರ್ವಾಧಿಕಾರಿತನವನ್ನು ತೋರುತ್ತಿದೆ. ಇಂತಹ ಮಂತ್ರಿಯನ್ನು ತಕ್ಷಣವೇ ಸಿದ್ದರಾಮಯ್ಯ ವಜಾಗೊಳಿಸಬೇಕೆಂಬ ಆಗ್ರಹವೂ ಕೇಳಿಬಂದಿದೆ.

ಚೆನ್ನೈ ಮೂಲದ ಕಂಪನಿಯ 1,000 ಕೋಟಿಯ ಸ್ವತ್ತು ಮುಟ್ಟುಗೋಲು ಹಾಕಿಕೊಂಡ ಇಡಿ!

ನವದೆಹಲಿ, ಫೆ.4– ಛತ್ತೀಸಗಢದಲ್ಲಿ ಮೋಸದಿಂದ ಕಲ್ಲಿದ್ದಲು ನಿಕ್ಷೇಪವನ್ನು ಸ್ವಾಧೀನಪಡಿಸಿಕೊಂಡ ಆರೋಪ ಎದುರಿಸುತ್ತಿರುವ ಚೆನ್ನೈ ಮೂಲದ ಸಂಸ್ಥೆಯೊಂದರ ಮೇಲೆ ಇತ್ತೀಚೆಗೆ ದಾಳಿ ನಡೆಸಿದ್ದ ಜಾರಿ ನಿರ್ದೇಶನಾಲಯವು(ಇಡಿ) 1,000 ಕೋಟಿ ಮೌಲ್ಯದ ಹಣ ಮತ್ತು ಸ್ವತ್ತನ್ನು ಮುಟ್ಟುಗೋಲು ಹಾಕಿಕೊಂಡಿದೆ.

ಆರೋಪ ಎದುರಿಸುತ್ತಿರುವ ಕಂಪನಿ ಆರ್‌ಕೆಎಂ ಪವರ್‌ಜೆನ್ ಪ್ರೈವೇಟ್ ಲಿಮಿಟೆಡ್ (ಆರ್‌ಕೆಎಂಪಿಪಿಎಲ್) ಮತ್ತು ಸಂಬಂಧಿತ ವ್ಯಕ್ತಿಗಳಾದ ಆಂಡಾಲ್ ಅರುಮುಗಂ, ಎಸ್.ಅರುಮುಗಂ ಮತ್ತು ಇತರರ ಮೇಲೆ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ(ಪಿಎಂಎಲ್‌ಎ) ಅಡಿಯಲ್ಲಿ ದಾಳಿ ನಡೆಸಲಾಗಿದೆ ಎಂದು ಇ.ಡಿ ತಿಳಿಸಿದೆ.

ಕಲ್ಲಿದ್ದಲು ಸಚಿವಾಲಯವು ವಿದ್ಯುತ್ ವಲಯಕ್ಕೆ ಮಂಜೂರು ಮಾಡಿದ್ದ ಛತ್ತೀಸಗಢದ ಫತೇಪುರ ಪೂರ್ವ ಕಲ್ಲಿದ್ದಲು ನಿಕ್ಷೇಪವನ್ನು ಮೋಸದ ಮೂಲಕ ಆಕ್ರಮಿಸಿಕೊಂಡ ಆರೋಪದ ಮೇಲೆ ಸಿಬಿಐ ದಾಖಲಿಸಿರುವ ಪ್ರಕರಣ ಆಧರಿಸಿ ಇ.ಡಿ ಪಿಎಂಎಲ್‌ಎ ಪ್ರಕರಣ ದಾಖಲಿಸಿಕೊಂಡಿದೆ.

ಕಲ್ಲಿದ್ದಲು ನಿಕ್ಷೇಪ ಹಂಚಿಕೆಯ ಆಧಾರದ ಮೇಲೆ ಆರ್‌ಕೆಎಂಪಿಪಿಎಲ್ ಸಂಸ್ಥೆಯು ಪವರ್ ಫೈನಾನ್ಸ್ ಕಾರ್ಪೊರೇಷನ್‌ನಿಂದ(ಪಿಎಫ್‌ಸಿ) ಸಾಲವನ್ನು ಪಡೆದುಕೊಂಡಿದೆ. ಈ ಸಾಲದ ಹಣದ ಒಂದು ಭಾಗ 3,800 ಕೋಟಿಯನ್ನು ಎಂಐಪಿಪಿ ಎಂಬ ವಿದೇಶಿ ಘಟಕಕ್ಕೆ ವರ್ಗಾವಣೆ ಮಾಡಲಾಗಿದೆ ಎಂದು ಆರೋಪಿಸಲಾಗಿದೆ.

ಕಲ್ಲಿದ್ದಲು ನಿಕ್ಷೇಪ ಹಂಚಿಕೆಯ ನಂತರ ಸಂಸ್ಥೆಯು ತನ್ನ ಷೇರುಗಳ ಶೇಕಡ 26ರಷ್ಟನ್ನು ಮಲೇಷ್ಯಾ ಮೂಲದ ಮುದಜಯ ಕಾರ್ಪೊರೇಶನ್‌ಗೆ ಮತ್ತು ಶೇಕಡ 10.95ರಷ್ಟನ್ನು ಎನರ್ಕ್ ಇಂಟರ್‌ನ್ಯಾಶನಲ್ ಹೋಲ್ಡಿಂಗ್ಸ್ ಲಿಮಿಟೆಡ್‌ಗೆ ಪ್ರತಿ ಷೇರಿಗೆ 240 ಪ್ರೀಮಿಯಂನಲ್ಲಿ ವಿತರಿಸಿದೆ ಎಂದು ಇ.ಡಿ ತಿಳಿಸಿದೆ

ರಜನಿಕಾಂತ್ ನಟನೆಯ ಕಬಾಲಿ ಸಿನಿಮಾ ನಿರ್ಮಾಪಕ ಕೆ.ಪಿ. ಚೌಧರಿ ಆತ್ಮಹತ್ಯೆ

ಪಣಜಿ, ಫೆ.4– ತೆಲುಗು ಚಲನಚಿತ್ರ ನಿರ್ಮಾಪಕ ಕೆ.ಪಿ. ಚೌಧರಿ(44) ಅವರ ಪಾರ್ಥಿವ ಶರೀರ ಸೋಮವಾರ (ಫೆ.3 ರಂದು) ಉತ್ತರ ಗೋವಾದ ಹಳ್ಳಿಯೊಂದರ ಬಾಡಿಗೆ ಮನೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ಕೆ.ಪಿ.ಚೌಧರಿ, ರಜನಿಕಾಂತ್ ಅಭಿನಯದ 'ಕಬಾಲಿ' ಚಿತ್ರವನ್ನು ತೆಲುಗು ಭಾಷೆಯಲ್ಲಿ ನಿರ್ಮಿಸಿದ್ದರು. ಅಂಜುನಾ ಪೊಲೀಸ್ ಠಾಣೆಯ ಸಿಯೋಲಿಮ್ ಹೊರಠಾಣೆಗೆ ಸಾವಿನ ಬಗ್ಗೆ ಮಾಹಿತಿ ಸಿಕ್ಕಿದ್ದು, ಹೆಚ್ಚಿನ ತನಿಖೆ ನಡೆಯುತ್ತಿದೆ.

ಸೂಕ್ತ ಸಮಯದಲ್ಲಿ ವಿವರಗಳನ್ನು ಹಂಚಿಕೊಳ್ಳಲಾಗುವುದು ಎಂದು ಪೊಲೀಸ್ ವರಿಷ್ಠಾಧಿಕಾರಿ (ಉತ್ತರ) ಅಕ್ಷತ್ ಕೌಶಲ್ ಸುದ್ದಿಗಾರರಿಗೆ ತಿಳಿಸಿದ್ದಾರೆ. 2023ರಲ್ಲಿ ಮಾದಕ ದ್ರವ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಸೈಬರಾಬಾದ್ ವಿಶೇಷ ಕಾರ್ಯಾಚರಣೆ ತಂಡವು ಚೌಧರಿ ಅವರನ್ನು ಬಂಧಿಸಿತ್ತು.

ಸಾಮೂಹಿಕ ಸೂರ್ಯ ನಮಸ್ಕಾರ



ರಥಸಪ್ತಮಿ ಹಿನ್ನೆಲೆಯಲ್ಲಿ ಮಂಗಳವಾರ ಮೈಸೂರಲ್ಲಿ ಮೈಂಡ್ ಅಂಡ್ ಬಾಡಿ ಲೈನ್ಸ್ ಯೋಗ ಸಂಸ್ಥೆ ಹಾಗೂ ನಮ್ಭಾರತ ನಿರ್ಮಾಣ್ ಸೇವಾ ಟ್ರಸ್ಟ್ ಸಹಯೋಗದಲ್ಲಿ ಸಾಮೂಹಿಕ 108 ಸೂರ್ಯ ನಮಸ್ಕಾರ ಟ್ರಸ್ಟ್‌ನ ಅಧ್ಯಕ್ಷರಾದ ಕೆ.ವಿ.ಶ್ರೀಧರ್ ನೇತೃತ್ವದಲ್ಲಿ ನೆರವೇರಿತು.

ನೇತಾಜಿ ನಗರ ನಿವಾಸಿಗಳದ್ದು ನಿತ್ಯವೂ ಗೋಳಿನ ಬಾಳು!

ರಸ್ತೆಗಳೇ ಇಲ್ಲ; ಇದ್ದರೂ ಡಾಂಬರ್ ಕಂಡೇ ಇಲ್ಲ; ಒಳಚರಂಡಿ ನೀರು ಉಕ್ಕಿ ಹರಿಯುತ್ತಿದೆ; ಬಡಾವಣೆಯೆಲ್ಲಾ ದುರ್ವಾಸನೆ; ಸಾಂಕ್ರಾಮಿಕ ರೋಗಗಳ ಭೀತಿಯಲ್ಲಿ ನಿವಾಸಿಗಳು





ಮೈಸೂರು, ಫೆ.4(ಎಂಕೆ)– ಬಹುತೇಕ ಹಾಲಿ ಮತ್ತು ಮಾಜಿ ಅಧಿಕಾರಿಗಳೇ ನೆಲೆಸಿರುವ 'ನೇತಾಜಿ'ನಗರದ ಗುಂಡಿ ಬಿದ್ದ ರಸ್ತೆಗಳು, ಉಕ್ಕಿ ಹರಿಯುತ್ತಿರುವ ಮ್ಯಾನ್ ಹೋಲ್‌ಗಳು ನಿವಾಸಿಗಳನ್ನ ಹೈರಾಣಾಗಿಸಿದೆ...!

ಮೈಸೂರಿನ ಟಿ.ನರಸೀಪುರ ರಸ್ತೆ ಮಾರ್ಗವಾಗಿ ಬರುವ ಆಲನಹಳ್ಳಿ, ಗಿರಿದರ್ಶಿನಿ ಬಡಾವಣೆ, ನಂದಿನಿ ಬಡಾವಣೆ ನಡುವಿನ ನೇತಾಜಿನಗರ ಅವ್ಯವಸ್ಥೆಗಳ ಕೂಪವಾಗಿ ಬದಲಾಗಿದೆ. ಸುಮಾರು 30 ವರ್ಷಗಳ ಹಿಂದೆಯೇ ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘದಿಂದ ಅಭಿವೃದ್ಧಿಗೊಂಡ ನೇತಾಜಿನಗರ ಅಕ್ಷರಶಃ ದೂಳು, ಕೊಳಚೆ, ಕಟ್ಟಡ ತ್ಯಾಜ್ಯ, ಕಸದ ರಾಶಿಗಳಿಂದ ವಿರೂಪವಾಗಿ ಬದಲಾಗಿದೆ.

ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಸುಮಾರು 350ಕ್ಕೂ ಅಧಿಕ ಮನೆಗಳಿರುವ ನೇತಾಜಿನಗರದಲ್ಲಿ ವಾಸಿಸುವ ಬಹುತೇಕ ನಿವಾಸಿಗಳು ಸರ್ಕಾರಿ ಹಾಲಿ ಮತ್ತು ಮಾಜಿ ಅಧಿಕಾರಿಗಳೇ ಆಗಿದ್ದಾರೆ. ಅದರಲ್ಲೂ ಶೇ.50ರಷ್ಟು ಪೊಲೀಸ್ ಇಲಾಖೆಯಲ್ಲಿ ಕಾರ್ಯನಿರ್ವಹಿಸಿದವರಿದ್ದು, ಲಕ್ಷಾಂತರ ರೂ. ಖರ್ಚು ಮಾಡಿ ಮನೆಗಳನ್ನು ಕಟ್ಟಿಕೊಂಡಿದ್ದರೂ ಸಂಚಾರಕ್ಕೆ ಸರಿಯಾದ ರಸ್ತೆ ಇಲ್ಲದೆ, ಯುಜಿಡಿ ಅವ್ಯವಸ್ಥೆಯಿಂದ ಕಂಗೆಟ್ಟಿದ್ದಾರೆ.

ನೇತಾಜಿನಗರದಲ್ಲಿ 8–9 ಮುಖ್ಯ ರಸ್ತೆಗಳು, ಹತ್ತಾರು ಅಡ್ಡ ರಸ್ತೆಗಳಿದ್ದು, ಒಂದೇ ಒಂದು ರಸ್ತೆಯೂ ಗುಂಡಿಗಳಿಲ್ಲ ಎನ್ನುವಂತಿಲ್ಲ. ಎಲ್ಲಾ ರಸ್ತೆಗಳು ಗುಂಡಿಮಯವಾಗಿದ್ದು, ಮೃತ್ಯುಕೂಪವಾಗಿ ಕಾಣುತ್ತಿವೆ. ದಿನಬೆಳಗಾದರೆ ದ್ವಿಚಕ್ರ ವಾಹನಗಳಿಂದ ಬಿದ್ದು ಆಸ್ಪತ್ರೆ ಸೇರುವವರ ಸಂಖ್ಯೆಯೂ ದಿನೇ ದಿನೆ ಹೆಚ್ಚಾಗುತ್ತಲೇ ಇದೆ.

ಟಿ.ನರಸೀಪುರ ಮುಖ್ಯ ರಸ್ತೆಯಿಂದ ನೇತಾಜಿನಗರಕ್ಕೆ ಬರುವ ಮುಖ್ಯ ರಸ್ತೆ ಸೇರಿದಂತೆ ಬಡಾವಣೆ ಎಲ್ಲಾ ರಸ್ತೆಗಳು ಸಂಪೂರ್ಣವಾಗಿ ಹದಗೆಟ್ಟಿದ್ದು, ಧೂಳು, ಮಣ್ಣಿನಿಂದ ಆವೃತವಾಗಿವೆ. ಗುಂಡಿಗಳ ಆಳ–ಅಗಲ ಮಾತ್ರ ಹೇಳತೀರದಾಗಿದೆ. ಜೊತೆಗೆ ಇಡೀ ನೇತಾಜಿನಗರ ಯುಜಿಡಿ ವ್ಯವಸ್ಥೆ, ಅವ್ಯವಸ್ಥೆಯಿಂದ ಕೂಡಿದ್ದು, ದಿನ ಬೆಳಗಾದರೆ ಒಂದಲ್ಲ, ಒಂದು ಯುಜಿಡಿ ಮ್ಯಾನ್‌ಹೋಲ್ ಉಕ್ಕಿ ಹರಿಯುವುದು ಸಾಮಾನ್ಯವಾಗಿ ಬಿಟ್ಟಿದೆ.

ನೇತಾಜಿನಗರದಿಂದ ಲಲಿತಾದ್ರಿಪುರಕ್ಕೆ ಕನೆಕ್ಟ್ ಆಗುವ ರಸ್ತೆಯುದ್ದಕ್ಕೂ ರಾಶಿ ರಾಶಿ ಕಸ ಹಾಗೂ ಲೋಡ್‌ಗಟ್ಟಲೇ ಕಟ್ಟಡ ತ್ಯಾಜ್ಯವನ್ನು ಸುರಿದಿದ್ದು, ತಿರುಗಾಡುವ ರಸ್ತೆಯನ್ನೇ ಮುಚ್ಚುವಂತಹ ದುಸ್ಥಿತಿ ಎದುರಾಗಿದೆ. ರಸ್ತೆ ಪಕ್ಕದಲ್ಲಿರುವ ಅಂಕದಕಟ್ಟೆ(ಕೆರೆ) ಭಾಗಶಃ ಕಸ ಮತ್ತು ಕಟ್ಟಡ ತ್ಯಾಜ್ಯದಿಂದ ಮುಚ್ಚಿ ಹೋಗುತ್ತಿದ್ದು, ಮುಂದೊಂದು ದಿನ ಇಲ್ಲಿ ಕೆರೆಯೇ ಇಲ್ಲವೆಂಬಂತೆ ಮಾಡುವ ಹುನ್ನಾರದಂತೆಯೂ ಗೋಚರವಾಗುತ್ತಿದೆ.

ಅಲೆದಾಡಿಸುತ್ತಿದ್ದಾರೆ!: ಆಲನಹಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿದ್ದ ನೇತಾಜಿನಗರ, ಈಗ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಬರುತ್ತೆ ಎನ್ನುತ್ತಿದ್ದಾರೆ. ಆದರೆ, ರಮ್ಮನಹಳ್ಳಿ ಪಪಂಗೆ ಏನಾದ್ರೂ ಸಮಸ್ಯೆ ಹೇಳೋಕೆ ಹೋದ್ರೆ ಆಲನಹಳ್ಳಿ ಗ್ರಾಪಂಗೆ ಹೋಗಿ ಎನ್ನುತ್ತಾರೆ. ಆಲನಹಳ್ಳಿ ಗ್ರಾಪಂಗೆ ಹೋದ್ರೆ, ರಮ್ಮನಹಳ್ಳಿ ಪಪಂಗೆ ಹೋಗಿ ಎಂದು ಅಲೆದಾಡಿಸುತ್ತಿದ್ದಾರೆ. ನೇತಾಜಿನಗರ ದಿಕ್ಕು–ದೆಸೆ ಇಲ್ಲದ ಬಡಾವಣೆಯಂತಾಗಿದೆ ಎಂದು ನಿವಾಸಿಗಳಾದ ಗಂಟಯ್ಯ(ಕೃಷ್ಣಪ್ಪ), ನಿವೃತ್ತ ಪ್ರಾಂಶುಪಾಲ ಎಸ್.ಲೋಲಕುಮಾರ್, ನಿವೃತ್ತ ಸಬ್‌ಇನ್ಸ್‌ಪೆಕ್ಟರ್‌ಗಳಾದ ಪಿ.ಬಸಪ್ಪ, ಮರಿಲಿಂಗಯ್ಯ, ವಿವಿಧ ಇಲಾಖೆಯ ನಿವೃತ್ತ ಅಧಿಕಾರಿಗಳಾದ ಕೃಷ್ಣಪ್ಪ, ಗುರುಪ್ರಸಾದ್, ಪುಟ್ಟರಂಗಯ್ಯ ಇನ್ನಿತರರು 'ಮೈಸೂರು ಮಿತ್ರ'ನಲ್ಲಿ ಅಳಲು ತೋಡಿಕೊಂಡರು.

ಮನವಿಗಳ ಸಾಲು: ನೇತಾಜಿನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದಿಂದ ರಸ್ತೆ ಅಭಿವೃದ್ಧಿ, ಯುಜಿಡಿ ದುರಸ್ತಿಗೆ ಸಾಲು ಸಾಲು ಮನವಿಗಳನ್ನು ಕೊಟ್ಟಿದ್ದೇವೆ. ಸ್ಥಳೀಯ ಶಾಸಕರು, ಸಂಸದರು, ಜನಪ್ರತಿನಿಧಿಗಳು, ಕಡೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಮನವಿ ಕೊಟ್ಟಿದ್ದೇವೆ. ಆದರೆ, ಯಾವುದೇ ಪ್ರಯೋಜನವಾಗಿಲ್ಲ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಶಾಪಗ್ರಸ್ಥ ಬಡಾವಣೆ...!

ನೇತಾಜಿನಗರದ ರಸ್ತೆಗಳಿಗೆ ಡಾಂಬರ್ ಹಾಕಿ 30 ವರ್ಷಗಳೇ ಆಗಿದೆ. ಇಲ್ಲಿಯವರೆಗೆ ಯಾವೊಂದು ರಸ್ತೆಯೂ ಡಾಂಬರ್ ಕಂಡಿಲ್ಲ. ಯುಜಿಡಿ ಮ್ಯಾನ್ ಹೋಲ್‌ಗಳು ಅಲ್ಲಲ್ಲಿ ಉಕ್ಕಿ ಹರಿದು ದುರ್ವಾಸನೆಗೆ ನಿವಾಸಿಗಳು ನಿಟ್ಟುಸಿರು ಬಿಡುವಂತಾಗಿದೆ. ಒಟ್ಟಾರೆ ಇದೊಂದು ಶಾಪಗ್ರಸ್ಥ ಬಡಾವಣೆ. 'ನೇತಾಜಿ'ನಗರ ಅಂತ ಹೆಸರಿಟ್ಟು, ಪುಣ್ಯಾತ್ಮರಿಗೂ ಅಪಮಾನ ಮಾಡಿದ ಸಾಧನೆ ಸಂಬಂಧ ಪಟ್ಟ ಅಧಿಕಾರಿ ಮತ್ತು ಜನಪ್ರತಿನಿದಿಗಳದ್ದು.

-ಗಂಟಯ್ಯ(ಕೃಷ್ಣಪ್ಪ) ಸ್ಥಳೀಯ ನಿವಾಸಿ

ಮನೆಯೊಳಕ್ಕೇ ಯುಜಿಡಿ ತ್ಯಾಜ್ಯ ನೀರು...!

ಮಳೆಗಾಲದಲ್ಲಿ ಮನೆಯೊಳಗೆ ಇರೋದೆ ತುಂಬಾ ಕಷ್ಟ. ಯುಜಿಡಿ ತ್ಯಾಜ್ಯ ನೀರು ಉಕ್ಕಿ ನಮ್ಮ ಮನೆಯೊಳಗೆ ಹರಿದು ಬರುತ್ತೆ. ಕಕ್ಕಸೆಲ್ಲಾ ಮನೆ ಮುಂದೆ ಶೇಖರಣೆ ಆಗುತ್ತೆ. ರಸ್ತೆಗಳಂತೂ ಸಂಪೂರ್ಣವಾಗಿ ಹಾಳಾಗಿವೆ. 25 ವರ್ಷದಿಂದಲೂ ನಮ್ಮದು ಇದೇ ದುಸ್ಥಿತಿಯಾಗಿದೆ.

- ಮರಿಸ್ವಾಮಿ, ನಿವೃತ್ತ ಡಿವೈಎಸ್‌ಪಿ

ಕೇಂದ್ರ, ರಾಜ್ಯ ಸರ್ಕಾರ ವಿಶೇಷಚೇತನರಿಗೆ ಬದುಕು ರೂಪಿಸುವ ವಾತಾವರಣ ಕಲ್ಪಿಸಬೇಕಿದೆ

ಮೈಸೂರು, ಫೆ.4(ಎಸ್‌ಪಿಎನ್)– ವಿಶೇಷ ಚೇತನರಿಗೆ ಸಮಾಜದಲ್ಲಿ ಸ್ವಾಭಿಮಾನದ ಬದುಕಿಗಾಗಿ ಸೂಕ್ತ ವಾತಾವರಣವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರ ರೂಪಿಸಬೇಕು ಎಂದು ಕನಕಪುರ ಸ್ತುತಿ ಕಂಪ್ಯೂಟರ್ ಶಿಕ್ಷಕರ ತರಬೇತಿ ಕೇಂದ್ರದ ಸಂಸ್ಥಾಪಕ ಎನ್.ಕುಮಾರ್ ಅಭಿಪ್ರಾಯಪಟ್ಟರು.



ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿಕಲಚೇತರನ್ನು ಸನ್ಮಾನಿಸಲಾಯಿತು.

ಮೈಸೂರು ನಜರ್‌ಬಾದ್‌ನಲ್ಲಿರುವ ಜಿಲ್ಲಾ ಆರೋಗ್ಯಾಧಿಕಾರಿಗಳ ಕಚೇರಿ ಆವರಣದಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಚೆನ್ನೈನ ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಹಾಗೂ ಸ್ಥಳೀಯ ವಿವಿಧ ಸಂಘ–ಸಂಸ್ಥೆಗಳ ಸಹಭಾಗಿತ್ವದೊಂದಿಗೆ ಸಾಧಕ ವಿಕಲಚೇತನರಿಗೆ ಪ್ರಶಸ್ತಿ ಪ್ರದಾನ ಮತ್ತು ಬಲವರ್ಧನ ಕಾರ್ಯಾಗಾರದ ಸಮಾರೋಪದಲ್ಲಿ ಮಾತನಾಡಿದರು.

ನಮ್ಮ ಶರೀರಕ್ಕೆ ಅಂಗವೈಕಲ್ಯ ಇದೆಯೇ ಹೊರತು ಮನಸ್ಸಿಗಲ್ಲ. ಆತ್ಮವಿಶ್ವಾಸದಿಂದ ಕೆಲಸ ಮಾಡಿದಾಗ ಮಾತ್ರ ಸಮಾಜದಲ್ಲಿ ಉಳಿದುಕೊಳ್ಳಲು ಸಾಧ್ಯ. ವಿಕಲಚೇತನರು ಕೇವಲ ಬಸ್ ಪಾಸ್, ಪಿಂಚಣಿ ಸೌಲಭ್ಯಕ್ಕಾಗಿ ಬದುಕುವುದಲ್ಲ. ಸಮಾಜದಲ್ಲಿ ಬದಲಾವಣೆ ತರಲು ಹುಟ್ಟಿದ್ದೇವೆ ಎಂಬ ಮನೋಸ್ಥೈರ್ಯ ಬೆಳೆಸಿಕೊಳ್ಳಬೇಕು ಎಂದರು.

ನನಗೆ 16 ವರ್ಷದವರೆಗೆ ಎಲ್ಲಾ ಅಂಗಾಂಗಗಳು ಸರಿಯಿತ್ತು. ಅಪಘಾತದ ಕಾರಣದಿಂದಾಗಿ ಅಂಗವಿಕಲನಾದೆ, ಕುತ್ತಿಗೆಯ ಕೆಳಗಿನ ಭಾಗದ ಬಲ ಇಲ್ಲದಾಯಿತು. ನಂತರ ಎರಡು ವರ್ಷ ನಿರಂತರ ಥೆರಪಿ ಬಳಿಕ ಗಾಲಿಕುರ್ಚಿಯಲ್ಲಿ ಕೂರುವಂತಾಯಿತು. ಮೊದಲು ಕಾಯಿನ್ ಬೂತ್‌ನಲ್ಲಿ ಕೆಲಸ ಮಾಡುತ್ತಿದ್ದೆ. ಇದು ಮರೆಯಾದ ನಂತರ ಬಂದ್ ಆಗುತ್ತಿದ್ದ ಕಂಪ್ಯೂಟರ್ ಕೇಂದ್ರವನ್ನು ಖರೀದಿಸಿ ಇಂದಿಗೂ ಮುನ್ನಡೆಸುತ್ತಿದ್ದೇನೆ ಎಂದು ಹೇಳಿದರು.

ನನ್ನ ಕೇಂದ್ರದಲ್ಲಿ 20 ಕಂಪ್ಯೂಟರ್‌ಗಳಿವೆ. ಪ್ರಸ್ತುತ ಮೂರು ಜನ ಶಿಕ್ಷಕಿಯರು ಕೆಲಸ ಮಾಡುತ್ತಿದ್ದಾರೆ. ಸುಮಾರು 6 ಸಾವಿರ ವಿದ್ಯಾರ್ಥಿಗಳು ಇದೇ ಕೇಂದ್ರದಲ್ಲಿ ಕಂಪ್ಯೂಟರ್ ಶಿಕ್ಷಣ ಪಡೆದುಕೊಂಡಿದ್ದಾರೆ. ತಿಂಗಳಿಗೆ 40 ಸಾವಿರ ಗಳಿಸಿ, ಸ್ವಾಭಿಮಾನದ ಬದುಕು ರೂಪಿಸಿಕೊಂಡಿದ್ದೇನೆ. ಮುಂದೆ ಸಾವಿರ ಮಂದಿ ವಿಕಲಚೇತನರಿಗೆ ಉದ್ಯೋಗ ನೀಡಬೇಕೆಂಬ ಕನಸು ಕಂಡಿದ್ದೇನೆ. ಆತ್ಮವಿಶ್ವಾಸವಿದ್ದರೆ ಎಲ್ಲವೂ ಸಾಧ್ಯ ಎಂದು ಹೇಳಿದರು.

ವಿಕಲಚೇತನರಿಗೆ ಪ್ರೋತ್ಸಾಹ ನೀಡಿದ ಕೊಡಗು ಜಿಲ್ಲೆಯ ಗೋಣಿಕೊಪ್ಪಲು ಪಂಚಾಯಿತಿ ಹಾಗೂ ನಂಜನಗೂಡಿನ ದೇವಿರಮ್ಮ ಪಂಚಾಯಿತಿ, ಮಾದರಿ ಕೆಲಸ ಮಾಡಿದ ನಂಜನಗೂಡು ಹೊಸಕೋಟೆ ಬಸವೇಶ್ವರ ವಿಶೇಷಚೇತನರ ಸಂಘ ಮತ್ತು ಎಚ್.ಡಿ.ಕೋಟೆ ತಾಲೂಕಿನ ಹೈರಿಗೆ ಗ್ರಾಮದ ಶ್ರೀ ಕೃಷ್ಣ ಸ್ವಸಹಾಯ ಸಂಘದ ಸದಸ್ಯರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕೊಡಗು ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿ ಕೆ.ಜಿ.ವಿಮಲಾ, ಭಾರತ್ ಪೆಟ್ರೋಲಿಯಂ ಕಾರ್ಪೊರೇಶನ್ ಸಂಸ್ಥೆಯ ಪ್ರಾದೇಶಿಕ ವ್ಯವಸ್ಥಾಪಕ ವಿಕ್ರಾಂತ್ ಹಟೆ, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಡಾ.ಜಿ.ಎಸ್.ಕುಮಾರ್, ಎಸ್.ಆರ್.ದೀಪಶ್ರೀ ಇದ್ದರು.

ಉತ್ತರಾಖಂಡ್ ನಂತರ ಈಗ ಗುಜರಾತ್‌ನಲ್ಲಿ ಯುಸಿಸಿ ಜಾರಿಗೆ ಕ್ರಮ

ಅಹ್ಮದಾಬಾದ್, ಫೆ.4– ಉತ್ತರಾಖಂಡದ ನಂತರ, ಗುಜರಾತ್ ರಾಜ್ಯ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತರಲು ಸಜ್ಜಾಗಿದ್ದು, ಕರಡು ಮಾರ್ಗಸೂಚಿಗಳನ್ನು ತಯಾರಿಸಲು ಐದು ಸದಸ್ಯರ ಸಮಿತಿಯನ್ನು ರಚಿಸಿದೆ. ನಿವೃತ್ತ ಸುಪ್ರೀಂಕೋರ್ಟ್ ನ್ಯಾಯಾಧೀಶೆ ರಂಜನಾ ದೇಸಾಯಿ ಅಧ್ಯಕ್ಷತೆಯ ಈ ಸಮಿತಿಯು 45 ದಿನಗಳಲ್ಲಿ ತನ್ನ ವರದಿಯನ್ನು ಸಲ್ಲಿಸುವಂತೆ ಕೇಳಲಾಗಿದೆ.

ಈ ಮಾಹಿತಿಯನ್ನು ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅಧಿಕೃತವಾಗಿ ಘೋಷಿಸಿದ್ದು, ಪ್ರಧಾನಿ ನರೇಂದ್ರ ಮೋದಿ ಎಲ್ಲರಿಗೂ ಸಮಾನ ಹಕ್ಕುಗಳನ್ನು ಪ್ರತಿಪಾದಿಸುತ್ತಾರೆ ಮತ್ತು ಯುಸಿಸಿ ಆ ದಿಕ್ಕಿನಲ್ಲಿ ಒಂದು ಹೆಜ್ಜೆಯಾಗಿದೆ ಎಂದು ಹೇಳಿದರು.

ರಂಜನಾ ದೇಸಾಯಿ ಅವರಲ್ಲದೆ, ಸಮಿತಿಯಲ್ಲಿ ಹಿರಿಯ ಐಎಎಸ್ ಅಧಿಕಾರಿ ಸಿಎಲ್ ಮೀನಾ, ಹಿರಿಯ ವಕೀಲೆ ಆರ್‌ಸಿ ಕೊಡೇಕರ್, ಮಾಜಿ ಉಪಕುಲಪತಿ ದ್ಕ್ಷೇಶ್ ಠಾಕರ್ ಮತ್ತು ಸಾಮಾಜಿಕ ಕಾರ್ಯಕರ್ತೆ ಗೀತಾಬೆನ್ ಶ್ರಾಫ್ ಇದ್ದಾರೆ.

ಬಿಜೆಪಿಯ ಪ್ರಮುಖ ಭರವಸೆಗಳಲ್ಲಿ ಒಂದಾದ ಏಕರೂಪ ನಾಗರಿಕ ಸಂಹಿತೆಯು ಮದುವೆ, ವಿಚ್ಛೇದನ, ಉತ್ತರಾಧಿಕಾರ, ದತ್ತು ಇತ್ಯಾದಿ ವಿಷಯಗಳಲ್ಲಿ ಎಲ್ಲಾ ಧಾರ್ಮಿಕ ಸಮುದಾಯಗಳಿಗೆ ಒಂದೇ ಕಾನೂನನ್ನು ಒದಗಿಸುವ ಉದ್ದೇಶ ಹೊಂದಿದೆ.

ಗುಜರಾತ್‌ನ ಬಿಜೆಪಿ ಸರ್ಕಾರ ಈ ಕಲ್ಪನೆಯೊಂದಿಗೆ ಬಹಳ ಸಮಯದಿಂದ ಕೆಲಸ ಮಾಡುತ್ತಿದೆ. 2022ರಲ್ಲಿ, ರಾಜ್ಯದಲ್ಲಿ ನಾಗರಿಕ ಸಂಹಿತೆಯ ಕಾರ್ಯಸಾಧ್ಯತೆ ಮತ್ತು ಅಗತ್ಯವನ್ನು ಅನ್ವೇಷಿಸಲು ಸರ್ಕಾರ ಒಂದು ಸಮಿತಿಯನ್ನು ಸ್ಥಾಪಿಸಿತ್ತು. ಸಮಿತಿಯ ಪಾತ್ರವು ಅಂತಹ ಸಂಹಿತೆಯ ಅಗತ್ಯವನ್ನು ಪರಿಶೀಲಿಸುವುದಕ್ಕೆ ಸೀಮಿತವಾಗಿತ್ತು.

ಕಳೆದ ತಿಂಗಳು, ಉತ್ತರಾಖಂಡ್ ಭಾರತ ಸ್ವಾತಂತ್ರ್ಯ ಪಡೆದ ನಂತರ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತಂದ ಮೊದಲ ರಾಜ್ಯವಾಯಿತು. ಇದು ಜನವರಿ 27ರಿಂದ ಜಾರಿಗೆ ಬಂದಿದೆ.

ಉತ್ತರಾಖಂಡ ನಾಗರಿಕ ಸಂಹಿತೆಯು ಎಲ್ಲಾ ವಿವಾಹಗಳಿಗೆ ಮತ್ತು ಲಿವ್–ಇನ್ ಸಂಬಂಧಗಳಿಗೆ ನೋಂದಣಿಯನ್ನು ಕಡ್ಡಾಯಗೊಳಿಸುತ್ತದೆ. ಅದರ ಪ್ರಮುಖ ನಿಬಂಧನೆಗಳಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಸಮಾನ ಆಸ್ತಿ ಹಕ್ಕುಗಳು, ವಿಚ್ಛೇದನಕ್ಕೆ ಸಮಾನ ಆಧಾರಗಳು ಮತ್ತು ಲಿವ್–ಇನ್ ಸಂಬಂಧಗಳಿಂದ ಜನಿಸಿದ ಮಕ್ಕಳಿಗೆ ಕಾನೂನುಬದ್ಧತೆ ಸೇರಿವೆ.

ಪುಷ್ಕರ್ ಧಾಮಿ ನೇತೃತ್ವದ ಬಿಜೆಪಿ ಸರ್ಕಾರ ಮದುವೆ, ವಿಚ್ಛೇದನ ಮತ್ತು ಉತ್ತರಾಧಿಕಾರದ ನೋಂದಣಿಯನ್ನು ಸುಗಮಗೊಳಿಸಲು ಆನ್‌ಲೈನ್ ಪೋರ್ಟಲ್‌ನ್ನು ಪರಿಚಯಿಸಿದೆ.

ಮಂಗಳೂರಿನ ಕೋಟೆಕಾರು ಬ್ಯಾಂಕ್ ದರೋಡೆಯಿಂದ ಎಚ್ಚೆತ್ತ ಬ್ಯಾಂಕ್‌ಗಳ ಆಡಳಿತ

ಮೈಸೂರಲ್ಲಿ ಅಗತ್ಯ ಮುಂಜಾಗ್ರತಾ ಕ್ರಮ; ಎಟಿಎಂಗಳಿಗೆ ಭದ್ರತಾ ಸಿಬ್ಬಂದಿ ನಿಯೋಜನೆ



ಮೈಸೂರು, ಫೆ.4(ಬಿಎಲ್‌ಯು)– ಮಂಗಳೂರಿನ ಕೋಟೆಕಾರು ಸಹಕಾರಿ ಬ್ಯಾಂಕ್‌ನಲ್ಲಿ ಕಳೆದ ವಾರ ನಡೆದ ದರೋಡೆಯಿಂದ ಮೈಸೂರಿನ ಸರ್ಕಾರಿ ಹಾಗೂ ಖಾಸಗಿ ಬ್ಯಾಂಕ್‌ಗಳು ಎಚ್ಚೆತ್ತುಕೊಂಡಿವೆ

ಮಂಗಳೂರಿನ ಕೋಟೆಕಾರು ಸಹಕಾರಿ ಬ್ಯಾಂಕ್‌ನಲ್ಲಿ ಹಾಡಹಗಲೆ 12 ಕೋಟಿ ಮೌಲ್ಯದ ನಗದು ಹಾಗೂ ಚಿನ್ನಾಭರಣ ದೋಚಿ ದರೋಡೆಕೋರರು ಪರಾರಿಯಾಗಿದ್ದರು.

ಇದರಿಂದ ಮೈಸೂರಿನ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಬ್ಯಾಂಕ್‌ಗಳು ಎಚ್ಚೆತ್ತುಕೊಂಡಿವೆ. ಬ್ಯಾಂಕ್‌ನ ಪ್ರವೇಶ ದ್ವಾರದಲ್ಲಿ ಒಬ್ಬರು ಮಾತ್ರ ಹೋಗುವಷ್ಟು ಜಾಗ ಮೀಸಲಿಟ್ಟು ಬಾಗಿಲಿಗೆ ಕಬ್ಬಿಣದ ಸರಪಳಿ ಬಿಗಿಯಲಾಗಿದೆ.

ಬ್ಯಾಂಕ್‌ನಲ್ಲಿ ಒಂದು ವೇಳೆ ದರೋಡೆ ಅಥವಾ ಕಳ್ಳತನ ನಡೆದರೂ ಆರೋಪಿಗಳು ಬಹಳ ಸುಲಭವಾಗಿ ತಪ್ಪಿಸಿಕೊಳ್ಳದಂತೆ ಪ್ರವೇಶ ದ್ವಾರದ ಅಂತರವನ್ನು ಮಿತಿಗೊಳಿಸಲಾಗಿದೆ.

2013, ನವೆಂಬರ್ 19ರಂದು ಜ್ಯೋತಿ ಉದಯ್ ಎಂಬ ಬ್ಯಾಂಕ್ ಅಧಿಕಾರಿ ಸಿಲಿಕಾನ್ ಸಿಟಿ ಬೆಂಗಳೂರಿನ ಜೆ.ಸಿ.ರಸ್ತೆಯ ಕಾರ್ಪೊರೇಷನ್ ಬ್ಯಾಂಕ್ ಎಟಿಎಂನಲ್ಲಿ ಹಣ ಡ್ರಾ ಮಾಡಲು ಒಳ ಹೋದಾಗ ಮಧುಕರ್ ರೆಡ್ಡಿ ಎಂಬ ಪಾತಕಿಯೊಬ್ಬ ಮಾರಣಾಂತಿಕ ಹಲ್ಲೆ ನಡೆಸಿದ್ದ.

ಈ ಪ್ರಕರಣದ ತರುವಾಯ ರಾಜ್ಯಾದ್ಯಂತ ಎಟಿಎಂಗಳಿಗೆ ಭದ್ರತಾ ವ್ಯವಸ್ಥೆ ಕಲ್ಪಿಸಲಾಗಿತ್ತು. ಭದ್ರತೆಗೆ ನಿಯೋಜನೆಗೊಂಡ ಸೆಕ್ಯೂರಿಟಿ ಗಾರ್ಡ್‌ಗಳು ದಿನದ 24 ಗಂಟೆ ಮೂರು ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು.

ಆದರೆ ಪ್ರತಿ ಎಟಿಎಂಗೆ ಮೂರು ಪಾಳಿಯಲ್ಲಿ ಭದ್ರತಾ ಸಿಬ್ಬಂದಿ ನಿಯೋಜನೆಯಿಂದ ಅಧಿಕ ವೆಚ್ಚವಾಗುತ್ತದೆ ಎಂಬ ಲೆಕ್ಕಾಚಾರದಿಂದ ಕೆಲವು ಬ್ಯಾಂಕ್‌ಗಳ ಆಡಳಿತ ಮಂಡಳಿ ಎಟಿಎಂಗೆ ನಿಯೋಜಿಸಿದ್ದ ಭದ್ರತಾ ಸಿಬ್ಬಂದಿ ಕಡಿತಗೊಳಿಸಿದ್ದವು.

ಆದರೆ ಮಂಗಳೂರಿನ ಕೋಟೆಕಾರು ಸಹಕಾರಿ ಬ್ಯಾಂಕ್ ಸೇರಿದಂತೆ ಇತರೆ ಬ್ಯಾಂಕ್‌ಗಳಲ್ಲಿ ನಡೆದಿರುವ ದರೋಡೆ ಪ್ರಕರಣದಿಂದ ಎಚ್ಚೆತ್ತಿರುವ ಬ್ಯಾಂಕ್‌ಗಳು ಕೆಲವು ಎಟಿಎಂಗಳಿಗೆ ಮತ್ತೆ ಮೂರು ಪಾಳಿಯಲ್ಲೂ ಭದ್ರತಾ ಸಿಬ್ಬಂದಿಯನ್ನು ನಿಯೋಜನೆಗೊಳಿಸಿವೆ. ಅಲ್ಲದೆ ಬ್ಯಾಂಕ್ ಒಳಗೆ ಮತ್ತು ಹೊರಗೆ ಹಾಗೂ ಎಟಿಎಂಗಳಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮರಾಗಳು ದಿನದ 24 ಗಂಟೆ ಚಾಲನೆಯಲ್ಲಿ ಇರುವಂತೆ ಎಚ್ಚರ ವಹಿಸಲಾಗುತ್ತಿದೆ.

ಬಜೆಟ್‌ನಲ್ಲಿ ಉತ್ತರಕ್ಕೆ ಬೆಣ್ಣೆ, ದಕ್ಷಿಣಕ್ಕೆ ಸುಣ್ಣ

ಮೈಸೂರು, ಫೆ.4(ಜಿಎ)–ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಉತ್ತರ ಭಾರತಕ್ಕೆ ಬೆಣ್ಣೆ, ದಕ್ಷಿಣ ಭಾರತಕ್ಕೆ ಸುಣ್ಣ, ಕೈಯ್ಯಿಗೆ ಚಿಪ್ಪು ನೀಡಿದೆ ಎಂದು ಖಂಡಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಹಳೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಕೈಯ್ಯಲ್ಲಿ ತೆಂಗಿನಕಾಯಿ ಚಿಪ್ಪು ಹಿಡಿದು ಅಣುಕು ಪ್ರದರ್ಶನದ ಮೂಲಕ ಪ್ರತಿಭಟನೆ ನಡೆಸಲಾಯಿತು.

ಬಿಜೆಪಿ ಅಥವಾ ಕಾಂಗ್ರೆಸ್ ಆಗಲಿ ನಿರಂತರವಾಗಿ ಸಾಕಷ್ಟು ಸಂಸದರು ಗೆಲ್ಲಿಸಿ, ಕೇಂದ್ರ ಸರ್ಕಾರದ ರಚನೆಗೆ ಸಹಕಾರ ನೀಡುತ್ತಿರುವ ರಾಜ್ಯಕ್ಕೆ ನಿರಂತರವಾಗಿ ಅನ್ಯಾಯ ಮಾಡುತ್ತಿರುವುದು ದುರಂತ. ಕಾಂಗ್ರೆಸ್ ಅಧಿಕಾರದಲ್ಲಿ ಇದ್ದಾಗ ಮಹದಾಯಿ ಯೋಜನೆಗೆ ಸಂಬಂಧಪಟ್ಟಂತೆ ಕೇವಲ ಇಬ್ಬರು ಸಚಿವರು ಇರುವ ಗೋವಾ ಸರ್ಕಾರದ ಜೊತೆ ಕೈಜೋಡಿಸಿದರೆ ವಿನಃ ರಾಜ್ಯಕ್ಕೆ ಕಿಂಚಿತ್ತು ಉಪಯೋಗವಾಗಲಿಲ್ಲ. ಅದಾದ ನಂತರ ಬಿಜೆಪಿ ಸರ್ಕಾರ ಮನೋಜ್ ಪಾರಿಕರ್ ಮುಖ್ಯಮಂತ್ರಿ ಆದ ಸಂದರ್ಭದಲ್ಲಿ ಗೋವಾ ಸರ್ಕಾರ ಪರ ನಿಂತರೆ ಹೊರತು ರಾಜ್ಯ ಸರ್ಕಾರಕ್ಕೆ ಕವಡೆ ಕಾಸು ಕಿಮ್ಮತ್ತು ಕೊಡಲಿಲ್ಲ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ರಾಜ್ಯದಿಂದ ಇಪ್ಪತ್ತು ಜನ ಸಂಸದರನ್ನು ಆಯ್ಕೆ ಮಾಡಿ ಕೇಂದ್ರ ಬಿಜೆಪಿ ಸರ್ಕಾರಕ್ಕೆ ಕೊಟ್ಟರೆ ಯಾರೂ ಸಹ ನೀರಾವರಿ ಯೋಜನೆ ಬಗ್ಗೆ ಚಕಾರ ಎತ್ತಲಿಲ್ಲ. ರಾಜ್ಯದಿಂದ ಆಯ್ಕೆಯಾಗಿ ಬೃಹತ್ ಕೈಗಾರಿಕಾ ಸಚಿವರಾದ ಕುಮಾರಸ್ವಾಮಿಯವರು ಕುಡಿಯುವ ನೀರಿನ ಯೋಜನೆಯನ್ನು ಈ ಬಾರಿ ಬಜೆಟ್‌ನಲ್ಲಿ ಕೇಂದ್ರ ಸರ್ಕಾರಕ್ಕೆ ಒತ್ತಾಯ ಹೇರಿ ತಂದೆ ತರುತ್ತೇನೆ ಎಂಬ ಭರವಸೆ ಹುಸಿಯಾಯಿತು. ಕುಮಾರಸ್ವಾಮಿ ಅವರು ಆಂಧ್ರಪ್ರದೇಶದ ವಿಶಾಖಪಟ್ಟಣ ಉಪ್ಪು ಕಾರ್ಖಾನೆಯನ್ನು ಪುನಶ್ಚೇತನಗೊಳಿಸಲು ಕೇಂದ್ರ ಸರ್ಕಾರ 11,000 ಕೋಟಿ ಬಿಡುಗಡೆ ಮಾಡುತ್ತದೆ.

ತೆಂಗಿನಕಾಯಿ ಚಿಪ್ಪು ಹಿಡಿದು ಮೈಸೂರಲ್ಲಿ ಪ್ರತಿಭಟನೆ



ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಉತ್ತರ ಭಾರತಕ್ಕೆ ಬೆಣ್ಣೆ, ದಕ್ಷಿಣ ಭಾರತಕ್ಕೆ ಸುಣ್ಣ, ಕೈಯ್ಯಿಗೆ ಚಿಪ್ಪು ನೀಡಿದೆ ಎಂದು ಖಂಡಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಹಳೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಕೈಯ್ಯಲ್ಲಿ ತೆಂಗಿನಕಾಯಿ ಚಿಪ್ಪು ಹಿಡಿದು ಅಣುಕು ಪ್ರದರ್ಶನದ ಮೂಲಕ ಪ್ರತಿಭಟನೆ ನಡೆಸಲಾಯಿತು.

ಆದರೆ ಕರ್ನಾಟಕದಲ್ಲಿರುವ ಭದ್ರಾವತಿಯ ವಿಶ್ವೇಶ್ವರಯ್ಯ ಉಕ್ಕಿನ ಕಾರ್ಖಾನೆಗೆ ಕವಡೆ ಕಾಸು ನೀಡಲಿಲ್ಲ. ಇದರ ಬಗ್ಗೆ ನಮ್ಮ ಸಚಿವರು ಮಾತಾಡಲಿಲ್ಲ. ಮಂಡ್ಯದಲ್ಲಿ ಗೆದ್ದು ಮಂಡ್ಯ ಜನತೆಗೆ ಯಾವ ಸೌಲಭ್ಯನೂ ತಂದುಕೊಡಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ದಕ್ಷಿಣ ಭಾರತದಲ್ಲಿ ಅತಿ ಹೆಚ್ಚು ತೆರಿಗೆಯನ್ನು ಭರಿಸುತ್ತಿರುವ ರಾಜ್ಯ ಕರ್ನಾಟಕ. ಆದರೆ ಬಿಡುಗಡೆ ಆಗುತ್ತಿರುವ ಹಣ ಅತ್ಯಲ್ಪ. ಇದು ಎಷ್ಟರ ಮಟ್ಟಿಗೆ ಸರಿ. ಬಿಜೆಪಿಯಿಂದ ಆಯ್ಕೆಯಾದ ಸಂಸದರು ಯೋಚನೆ ಮಾಡಬೇಕಾದಂತ ವಿಷಯ. ಕೇಂದ್ರ ಸರ್ಕಾರದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ 8ನೇ ಬಾರಿ ಬಜೆಟ್ ಅನ್ನು ಮಂಡಿಸಿದರು. ರೈತರ ಸಮಸ್ಯೆಯನ್ನು ಬಗೆಹರಿಸುವಂತಹ ಮಹದಾಯಿ ಯೋಜನೆ, ಮೇಕೆದಾಟು ಕುಡಿಯುವ ನೀರಿನ ಯೋಜನೆ, ಬೃಹತ್ ಕೈಗಾರಿಕೆಗಳು, ವಿಮಾನ ನಿಲ್ದಾಣಗಳನ್ನು ಮೇಲ್ದರ್ಜೆಗೆ ಏರಿಸದೆ ಇರುವುದು ಕನ್ನಡ ನಾಡಿನ ವಿರೋಧಿ ನೀತಿಯನ್ನು ಎತ್ತಿ ತೋರುತ್ತಿದೆ. ಇನ್ನಾದರೂ ಎಚ್ಚೆತ್ತು ಪಕ್ಷಾತೀತವಾಗಿ ಸಂಸದರು ಧ್ವನಿಯನ್ನು ಎತ್ತುವ ಮೂಲಕ ರಾಜ್ಯಕ್ಕೆ ಆದ ಅನ್ಯಾಯವನ್ನು ಸರಿಪಡಿಸಬೇಕೆಂದು ಆಗ್ರಹಿಸಿದರು.

ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ನಾಲಾಬೀದಿ ರವಿ, ಗುರುಬಸಪ್ಪ ಗೋಪಿ, ಬೋಗಾದಿ ಸಿದ್ದೇಗೌಡ, ಪ್ಯಾಲೇಸ್ ಬಾಬು, ಸಿದ್ದಪ್ಪ ಎಲ್‌ಐಸಿ, ಗೋವಿಂದ್‌ರಾಜ್, ಸ್ವಾಮಿ, ಬೀಡಾಬಾಬು, ಮನೋಹರ್, ಹರೀಶ್, ಮಾದಪ್ಪ, ಅರವಿಂದ, ಮದನ್, ಸ್ವಾಮಿ ಗೈಡ್, ಚಿನ್ನಪ್ಪ, ಸುನಿಲ್, ಶಿವು ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನಂ.ಗೂಡಲ್ಲಿ ಆಹಾರ ವಲಯ ಉದ್ಘಾಟನೆ



ಫುಡ್‌ಜೋನ್ ಅನ್ನು ಶಾಸಕರಾದ ದರ್ಶನ್, ಗಣೇಶ್ ಪ್ರಸಾದ್ ಉದ್ಘಾಟಿಸಿದರು.

ನಂಜನಗೂಡು, ಫೆ.4– ನಗರದ ಶ್ರೀಕಂಠಪುರಿ ಬಡಾವಣೆ ನಾಲೆ ಕವರ್ ಡಕ್ ಬಳಿ ರಸ್ತೆಬದಿ ತಳ್ಳುವ ಗಾಡಿ ವ್ಯಾಪಾರಸ್ಥರಿಗಾಗಿ ನಿರ್ಮಿಸಿರುವ ಆಹಾರ ವಲಯ(ಫುಡ್ ಜೋನ್) ಅನ್ನು ಶಾಸಕರಾದ ಗಣೇಶ್ ಪ್ರಸಾದ್, ದರ್ಶನ್ ಉದ್ಘಾಟಿಸಿದರು.

ಶಾಸಕ ದರ್ಶನ್ ಮಾತನಾಡಿ, ನಗರದ ಹಲವು ಕಡೆಗಳಲ್ಲಿ ತಳ್ಳುವ ಗಾಡಿಗಳಲ್ಲಿ ರಸ್ತೆಬದಿ ಪಾನಿಪುರಿ, ಗೋಬಿ ಮಂಚೂರಿ, ಚುರುಮುರಿ, ಫಾಸ್ಟ್‌ಫುಡ್ ವ್ಯಾಪಾರ ಮಾಡುತ್ತಿದ್ದವರಿಗೆ ನಗರಸಭೆ ವತಿಯಿಂದ ಶ್ರೀಕಂಠಪುರಿ ಬಡಾವಣೆಯ 5ನೇ ಕ್ರಾಸ್‌ನಿಂದ 10ನೇ ಕ್ರಾಸ್‌ವರೆಗೆ ನಾಲೆಯ ಕವರ್ ಡಕ್ ಮೇಲೆ ಆಹಾರ ವಲಯ (ಫುಡ್‌ಜೋನ್) ನಿರ್ಮಿಸಿ ಕೊಡಲಾಗಿದೆ. ಆಹಾರ ವಲಯಕ್ಕೆ ಮೂಲ ಸೌಕರ್ಯ ಕಲ್ಪಿಸುವ ಸಲುವಾಗಿ ಈಗಾಗಲೇ 10 ಲಕ್ಷ ರೂ. ವೆಚ್ಚದಲ್ಲಿ ಶೌಚಾಲಯ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸೌಲಭ್ಯ, ಕುಳಿತುಕೊಳ್ಳಲು ಆಸನ ವ್ಯವಸ್ಥೆ, ಸಿಸಿ ಕ್ಯಾಮರಾ ಸೇರಿದಂತೆ ಹಂತ–ಹಂತವಾಗಿ ಅಗತ್ಯ ಮೂಲ ಸೌಲಭ್ಯ ಕಲ್ಪಿಸಿಕೊಡಲಾಗುವುದು. ಬೀದಿಬದಿ ವ್ಯಾಪಾರಸ್ಥರಿಗಾಗಿ ನಗರಸಭೆ ವತಿಯಿಂದ ಗುರುತಿನ ಚೀಟಿ ವಿತರಿಸಲಾಗಿದೆ. ವ್ಯಾಪಾರಿಗಳು ಸ್ವಚ್ಛತೆ ಕಾಪಾಡಿಕೊಂಡು ಜನರ ಆರೋಗ್ಯ ದೃಷ್ಟಿಯಿಂದ ಗುಣಮಟ್ಟದ ಆಹಾರ ನೀಡಬೇಕು ಎಂದರು.

ಶಾಸಕ ಗಣೇಶ್ ಪ್ರಸಾದ್ ಮಾತನಾಡಿ, ನಗರದ ಸ್ವಚ್ಛತೆಯ ಹಿತದೃಷ್ಟಿಯಿಂದ ಹಾಗೂ ನಗರವನ್ನು ಸರ್ವತೋಮುಖವಾಗಿ ಅಭಿವೃದ್ಧಿ ಪಡಿಸಬೇಕು ಎಂಬ ಚಿಂತನೆ ಇಟ್ಟುಕೊಂಡು ಶಾಸಕ ದರ್ಶನ್ ಬೀದಿಬದಿ ವ್ಯಾಪಾರಸ್ಥರಿಗಾಗಿ ಫುಡ್‌ಜೋನ್ ನಿರ್ಮಿಸಿ ಸ್ಥಳಾವಕಾಶ ಕಲ್ಪಿಸಿರುವುದು ಉತ್ತಮ ಬೆಳವಣಿಗೆ. ಈ ಕೆಲಸ ಬೇರೆ ಕ್ಷೇತ್ರಗಳಿಗೆ ಪ್ರೇರಣೆಯಾಗಲಿದೆ ಎಂದರು.

ನಗರಸಭೆ ಆಯುಕ್ತ ವಿಜಯ್ ಮಾತನಾಡಿ, ನಗರದ ಪ್ರಮುಖ ರಸ್ತೆಗಳ ಬದಿ ಫಾಸ್ಟ್ ಫುಡ್ ವ್ಯಾಪಾರದ ತಳ್ಳುವ ಗಾಡಿಗಳಿಂದಾಗಿ ಸಂಚಾರಕ್ಕೆ ತೊಂದರೆ ಉಂಟಾಗಿತ್ತು. ಜೊತೆಗೆ ರಸ್ತೆಬದಿ ಮಣ್ಣು, ಧೂಳು ಹೆಚ್ಚಾಗಿ ಆಹಾರಕ್ಕೆ ಸೇರುತ್ತಿತ್ತು. ಈ ಸಮಸ್ಯೆಯನ್ನು ಶಾಸಕರ ಗಮನಕ್ಕೆ ತಂದು 2018ರ ರಸ್ತೆಬದಿ ವ್ಯಾಪಾರಿಗಳ ಕಾಯ್ದೆ ಪ್ರಕಾರ ಫುಡ್ ಜೋನ್ ನಿರ್ಮಿಸಿ ಕೊಡಲಾಗಿದೆ. ಜನರ ಆರೋಗ್ಯ ದೃಷ್ಟಿಯಿಂದ ಪ್ಲಾಸ್ಟಿಕ್ ಬಳಸದಂತೆ ವ್ಯಾಪಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕೇಶವಮೂರ್ತಿ, ನಗರಸಭೆ ಅಧ್ಯಕ್ಷ ಶ್ರೀಕಂಠಸ್ವಾಮಿ, ಉಪಾಧ್ಯಕ್ಷೆ ರೆಹಾನಬಾನು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಮಹೇಶ್, ಸಿ.ಎಂ. ಶಂಕರ್, ನಗರಸಭಾ ಸದಸ್ಯರಾದ ಮಹೇಶ್ ಅತ್ತಿಖಾನೆ, ಗಂಗಾಧರ್, ಎಸ್.ಪಿ.ಮಹೇಶ್, ಪ್ರದೀಪ್, ಮಹದೇವ ಪ್ರಸಾದ್, ಮಂಗಳಮ್ಮ, ವಿಜಯಲಕ್ಷ್ಮಿ, ಶ್ವೇತಲಕ್ಷ್ಮಿ, ಎನ್.ಎಸ್.ಯೋಗೇಶ್, ಪ್ರದೀಪ್, ಕೆ.ಎಂ.ಬಸವರಾಜು, ರಮೇಶ್, ವಿಜಯಲಕ್ಷ್ಮಿ, ಮುಖಂಡರಾದ ಯು.ಎನ್. ಪದ್ಮನಾಭರಾವ್, ದೊರೆಸ್ವಾಮಿ, ಮುರುಗೇಶ್, ಗೋವಿಂದ ರಾಜು, ಮುದ್ದುಮಾದಶೆಟ್ಟಿ, ಸೇರಿದಂತೆ ಇತರರಿದ್ದರು.

ಫೆ.7, ಬಸವರಾಜಸ್ವಾಮಿಗಳ ಗದ್ದುಗೆ ಉದ್ಘಾಟನೆ



ಸುದ್ದಿಗೋಷ್ಠಿಯಲ್ಲಿ ಮುರುಗಿ ಮಠದ ಇಮ್ಮಡಿ ಮುರುಗಿ ಸ್ವಾಮೀಜಿ ಮಾತನಾಡಿದರು

ನಂಜನಗೂಡು/ಮಲ್ಕುಂಡಿ, ಫೆ.4– ತಾಲೂಕಿನ ಶಿರಮಳ್ಳಿ ಗ್ರಾಮದ ಮುರುಗಿ ಮಠದಲ್ಲಿ ಫೆ.7 ಮತ್ತು 8ರಂದು ಬಸವರಾಜಸ್ವಾಮಿಗಳ ಗದ್ದುಗೆ ಉದ್ಘಾಟನೆ, ರಾಜದ್ವಾರ ಲೋಕಾರ್ಪಣೆ ಹಾಗೂ ಮಠದ ಸ್ವಾಮಿಗಳ 11ನೇ ವರ್ಷದ ಪಟ್ಟಾಧಿಕಾರ ಮಹೋತ್ಸವ ನಡೆಯಲಿದೆ ಎಂದು ಮಠಾಧ್ಯಕ್ಷ ಇಮ್ಮಡಿ ಮುರುಗಿ ಸ್ವಾಮೀಜಿ ತಿಳಿಸಿದರು.

ಸೋಮವಾರ ತಾಲೂಕಿನ ಶಿರಮಳ್ಳಿ ಗ್ರಾಮದ ಮಠದ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 450 ವರ್ಷಗಳ ಇತಿಹಾಸ ಹೊಂದಿರುವ ಮುರುಗಿ ಮಠ, ಬಸವ ಬಳಗ ಅಕ್ಕನ ಬಳಗ ಆರಂಭಿಸಿ ಭಕ್ತರಿಗೆ ಸಂಸ್ಕಾರ ಪಸರಿಸುತ್ತಿದೆ. 2022ರಲ್ಲಿ ಬಸವರಾಜ ಸ್ವಾಮಿಗಳ ಗದ್ದುಗೆ ನಿರ್ಮಾಣ ಕಾಮಗಾರಿ ಆರಂಭಿಸಿ ಭಕ್ತರ ಸಹಕಾರದಿಂದ ಪೂರ್ಣಗೊಳಿಸಲಾಗಿದ್ದು, ಮಠದ ಗದ್ದುಗೆ ಲೋಕಾರ್ಪಣೆಗೊಳಿಸಲಾಗುತ್ತಿದೆ.

11ನೇ ವರ್ಷದ ಪಟ್ಟಾಧಿಕಾರ ಮಹೋತ್ಸವ ಕಾರ್ಯಕ್ರಮದಲ್ಲಿ ತುಮಕೂರಿನ ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ದೇವನೂರು ಮಠದ ಮಹಾಂತ ಸ್ವಾಮೀಜಿ, ಹೊಸ ಮಠದ ಚಿದಾನಂದ ಸ್ವಾಮೀಜಿ, ವಾಟಾಳು ಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ದೇಗುಲ ಮಠದ ಚೆನ್ನಬಸವ ಸ್ವಾಮೀಜಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಮೇಘಾಲಯ ರಾಜ್ಯಪಾಲ ವಿಜಯಶಂಕರ, ಸಚಿವ ಹೆಚ್.ಸಿ.ಮಹದೇವಪ್ಪ, ಎಂಎಲ್‌ಸಿ ಡಾ.ಯತೀಂದ್ರ, ಶಾಸಕರಾದ ದರ್ಶನ್, ಗಣೇಶ್ ಪ್ರಸಾದ್, ರಾಜ್ಯ ವೀರಶೈವ ಲಿಂಗಾಯಿತ ಮಹಾಸಭಾ ಅಧ್ಯಕ್ಷ ಶಂಕರ್ ಎಂ.ಬಿದರಿ ಭಾಗವಹಿಸಲಿದ್ದಾರೆ.

ಕಾರ್ಯಕ್ರಮದ ಪ್ರಯುಕ್ತ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಸಾವಯವ ಕೃಷಿ ಬಗ್ಗೆ ಸಾಧಕ ರೈತರಿಂದ ಮಾರ್ಗದರ್ಶನ, ಸಾಧಕ ರೈತರಿಗೆ ಸನ್ಮಾನ, ಆಯುರ್ವೇದ, ಯೋಗ, ಆರೋಗ್ಯ ಸಂದೇಶಗಳು ಭಕ್ತರಿಗೆ ತಿಳಿಸುವ ಮೂಲಕ ಜಾಗೃತಿ ಮೂಡಿಸುವಂತಹ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಭಕ್ತರಿಗೆ 3 ದಿನವೂ ಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಭಕ್ತರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ಮಠದ ಟ್ರಸ್ಟ್ ಕಾರ್ಯದರ್ಶಿ ಶಿವಪಾದು, ನಾಗೇಶ, ಪೂಜಾ ಸಿಬ್ಬಂದಿ ನೀಲಕಂಠದೇವ ಉಪಸ್ಥಿತರಿದ್ದರು.

ಮಲೇರಿಯಾ ವಿರೋಧಿ ಮಾಸಾಚರಣೆ



ಮೂಗೂರಿನ ಸಮುದಾಯದ ಆರೋಗ್ಯ ಕೇಂದ್ರದಲ್ಲಿ ನಡೆದ ಮಲೇರಿಯಾ ವಿರೋಧಿ ಮಾಸಾಚರಣೆ ಕಾರ್ಯಕ್ರಮವನ್ನು ಮೂಗೂರು ವೈದ್ಯಾಧಿಕಾರಿಗಳಾದ ಡಾ.ರಮೇಶ್, ಡಾ.ಹರ್ಷ ಉದ್ಘಾಟಿಸಿದರು. ಈ ವೇಳೆ ಹಿರಿಯ ಆರೋಗ್ಯ ಸಂರಕ್ಷಣಾಧಿಕಾರಿ ಮೀನಾಕ್ಷಿ, ಚಿಕ್ಕತಾಯಮ್ಮ, ಆಶಾ ಕಾರ್ಯಕರ್ತೆ ಶೋಭಾ, ಕೃಷ್ಣಮೂರ್ತಿ, ಸವಿತಾ, ರಘುರಾಂ, ಮಲ್ಲಮ್ಮ ಸೇರಿದಂತೆ ಗ್ರಾಮಸ್ಥರಿದ್ದರು.

ನಿರ್ದೇಶಕರಾಗಿ ಆಯ್ಕೆ



ತಿ.ನರಸೀಪುರ, ಫೆ.4– ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (ಪಿಎಲ್‌ಡಿ) ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ ಯಾಚೇನಹಳ್ಳಿ ಸಾಲಗಾರರ ಕ್ಷೇತ್ರಕ್ಕೆ ಟಿ.ಎಸ್.ಪ್ರಸನ್ನ ಆಯ್ಕೆಯಾಗಿದ್ದಾರೆ. ಚುನಾವಣೆಯಲ್ಲಿ ಪ್ರಸನ್ನ ಅವರು 38 ಮತಗಳನ್ನು ಪಡೆದು ಜಯಗಳಿಸಿ ನಿರ್ದೇಶಕರಾಗಿ ಆಯ್ಕೆಯಾದರೇ, ಪ್ರತಿಸ್ಪರ್ಧಿ ಟಿ.ಎಸ್. ಸಿದ್ದರಾಜು 21 ಮತಗಳನ್ನು ಪಡೆದು ಪರಾಭವಗೊಂಡಿದ್ದಾರೆ ಎಂದು ಚುನಾವಣಾಧಿಕಾರಿ ಎಸ್.ಎಚ್.ಮನೋಜ್ ಕುಮಾರ್ ತಿಳಿಸಿದ್ದಾರೆ.

ರಥಸಪ್ತಮಿ ಅಂಗವಾಗಿ ಸಾಮೂಹಿಕ ಸೂರ್ಯ ನಮಸ್ಕಾರ

ನಂಜನಗೂಡು, ಫೆ.4– ರಥಸಪ್ತಮಿ ಅಂಗವಾಗಿ ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿಯಿಂದ ಮಂಗಳವಾರ ಮುಂಜಾನೆ ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಎದುರಿನ ಆವರಣದಲ್ಲಿ ಯೋಗ ಬಂಧುಗಳಿಂದ 108 ಸಾಮೂಹಿಕ ಸೂರ್ಯ ನಮಸ್ಕಾರ ನಡೆಯಿತು.

ಯೋಗ ಮಹಾಮನೆ ಪ್ರಧಾನ ಯೋಗ ಶಿಕ್ಷಕ ಪ್ರಕಾಶ್ ಜಿ.ಉಡಿಗಾಲ ಮಾರ್ಗದರ್ಶನದಲ್ಲಿ 300ಕ್ಕೂ ಹೆಚ್ಚು ಯೋಗ ಬಂಧುಗಳು ಸಮವಸ್ತ್ರಧಾರಿಗಳಾಗಿ 3 ಹಂತದಲ್ಲಿ 50 ನಿಮಿಷಗಳ ಕಾಲ 108 ಬಾರಿ ಆಸನ ಪ್ರದರ್ಶಿಸುವ ಮೂಲಕ ಸೂರ್ಯ ದೇವನಿಗೆ ಭಕ್ತಿ ಪೂರ್ವ ನಮನ ಸಲ್ಲಿಸಿದರು.

3 ಹಂತದಲ್ಲಿ ತಲಾ 36 ಸೂರ್ಯ ನಮಸ್ಕಾರ ಮಾಡಿದ ಯೋಗಪಟುಗಳಿಗೆ 5 ನಿಮಿಷ ವಿರಾಮದ ವೇಳೆ ದಣಿವು, ಆಯಾಸ ನೀಗಿಸಲು ಬೆಲ್ಲ, ಒಣದ್ರಾಕ್ಷಿ ವಿತರಣೆ ಮಾಡಲಾಯಿತು.

ಪ್ರಧಾನ ಯೋಗ ಶಿಕ್ಷಕ ಪ್ರಕಾಶ್ ಜಿ.ಉಡಿಗಾಲ ಮಾತನಾಡಿ, ಕಣ್ಣಿಗೆ ಕಾಣುವ ಪ್ರತ್ಯಕ್ಷ ದೈವ ಸೂರ್ಯದೇವ ಋತುಮಾನಕ್ಕೆ ತಕ್ಕಂತೆ ತನ್ನ ಪಥ ಬದಲಾಯಿಸುವ ದಿನವನ್ನು ಸ್ವಾಗತಿಸುವ ರಥಸಪ್ತಮಿ ದಿನ ವಿಶೇಷವಾದದ್ದು. ಕಾಲಕ್ಕೆ ತಕ್ಕಂತೆ ಋತುಮಾನ ಹೇಗೆ ಸಮತ್ವವನ್ನು ಸಾಧಿಸುತ್ತದೆಯೋ ಹಾಗೇ ನಾವು ಕೂಡ ದೈಹಿಕ, ಮಾನಸಿಕ ಸಮತ್ವ ಸಾಧಿಸಲು ಸೂರ್ಯ ನಮಸ್ಕಾರ ಮಾಡುವುದರಿಂದ ನಮ್ಮ ದೇಹ, ಮನಸ್ಸು ಕ್ರಿಯಾಶೀಲತೆಯಿಂದ ಕೂಡಿರುತ್ತದೆ. ಹಾಗಾಗಿ ನಿತ್ಯ ಸೂರ್ಯ ನಮಸ್ಕಾರ ಮಾಡುವ ನಿಟ್ಟಿನಲ್ಲಿ ಎಲ್ಲರೂ ಸಂಕಲ್ಪ ಮಾಡಬೇಕಾಗಿದೆ ಎಂದರು.



ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿಯ ಯೋಗ ಬಂಧುಗಳು 108 ಸಾಮೂಹಿಕ ಸೂರ್ಯ ನಮಸ್ಕಾರ ಮಾಡಿದರು.

ಸೂರ್ಯ ನಮಸ್ಕಾರದಿಂದ ನಮ್ಮ ದೇಹದ ಶಕ್ತಿಕೇಂದ್ರವಾಗಿರುವ ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ ಹಾಗೂ ಸಹಸ್ರಾರ ಚಕ್ರಗಳು ಉದ್ದೀಪನಗೊಳ್ಳುವುದರಿಂದ ನಾವು ಚೈತನ್ಯದಾಯಕರಾಗಿರಲು ಸಾಧ್ಯವಾಗುತ್ತದೆ.

> 108 ಸೂರ್ಯ ನಮಸ್ಕಾರ ಮಾಡಲು ಮಾನಸಿಕ ಹಾಗೂ ದೈಹಿಕವಾಗಿ ಸದೃಢರಾಗಿರಬೇಕು. ಸೂರ್ಯದೇವನ ಕೃಪೆ ಇದ್ದರೆ ಸರಳವಾಗಿ ಸುಸೂತ್ರವಾಗಿ ಮಾಡಬಹುದು ಎಂಬುದಕ್ಕೆ ನಮ್ಮ ಯೋಗ ಬಂಧುಗಳೇ ಸಾಕ್ಷಿಯಾಗಿದ್ದಾರೆ. ಕಳೆದ 17 ವರ್ಷಗಳಿಂದ ನಿರಂತರವಾಗಿ ಸಾಮೂಹಿಕ ಸೂರ್ಯ ನಮಸ್ಕಾರ ಹಮ್ಮಿಕೊಳ್ಳುತ್ತಾ ಬರಲಾಗಿದೆ.
>
> – ಎನ್.ಆರ್.ಗಣೇಶ್‌ಮೂರ್ತಿ, ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಕಾರ್ಯದರ್ಶಿ.

ಸಪ್ತ ಚಕ್ರಗಳು ಸಮತ್ವ ಸಾಧಿಸುವುದರಿಂದ ನಮ್ಮ ಇಂದ್ರಿಯಗಳು ಕೂಡ ಹತೋಟಿಯಲ್ಲಿರುತ್ತವೆ. ಇದರಿಂದ ಸುಂದರ ಜೀವನ ಕಂಡುಕೊಳ್ಳಲು ಸಹಕಾರಿಯಾಗಲಿದೆ. ಹಾಗಾಗಿಯೇ ನಮ್ಮ ಋಷಿಮುನಿಗಳು ಬಹಳ ಅಚ್ಚುಕಟ್ಟಾಗಿ ಸೂರ್ಯ ನಮಸ್ಕಾರವನ್ನು ವಿನ್ಯಾಸ ಮಾಡಿ ಕೊಡುಗೆ ನೀಡಿದ್ದಾರೆ. ಇದರ ಮಹತ್ವವನ್ನು ನಮ್ಮ ಮುಂದಿನ ಪೀಳಿಗೆಗೆ ತಿಳಿಯಪಡಿಸುವ ಮಹತ್ತರ ಜವಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಅಧ್ಯಕ್ಷ ಆರ್.ವಿ. ರೇವಣ್ಣ, ನಂಜನಗೂಡು ಯೋಗ ಫೌಂಡೇಶನ್ ಅಧ್ಯಕ್ಷ ಡಿಗ್ಗೇನಹಳ್ಳಿ ಪ್ರಕಾಶ್, ಗೌರವಾಧ್ಯಕ್ಷ ಹಂಡುವಿನಹಳ್ಳಿ ಹೆಚ್.ಎಸ್.ರಾಜು ಸೇರಿದಂತೆ ಶಾಖಾ ಪ್ರಮುಖರು ಹಾಗೂ ಯೋಗ ಶಿಕ್ಷಕರು ಭಾಗವಹಿಸಿದ್ದರು.

ಸಂವಿಧಾನದ ಆಶಯಗಳನ್ನು ಪ್ರತಿಯೊಬ್ಬರೂ ಪಾಲಿಸಿ

ಲೇಖಕ ಮಂಗಳೂರು ವಿಜಯ ಸಲಹೆ



ಕಾರ್ಯಕ್ರಮದಲ್ಲಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ತಿ.ನರಸೀಪುರ, ಫೆ.4– ಸಂವಿಧಾನ ಮಾನವೀಯ ಮೌಲ್ಯಗಳನ್ನು ತಿಳಿಸುವ ಗ್ರಂಥವಾಗಿದ್ದು, ಅದರ ಮಹತ್ವವನ್ನು ಪ್ರತಿಯೊಬ್ಬರು ಅರಿತು ಸಂವಿಧಾನದ ಆಶಯಗಳನ್ನು ಪಾಲಿಸಬೇಕಿದೆ ಎಂದು ಲೇಖಕ ಮಂಗಳೂರು ವಿಜಯ ತಿಳಿಸಿದರು.

ಪಟ್ಟಣದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಕಾಲೇಜು ಶಿಕ್ಷಣ ಇಲಾಖೆ, ದಲಿತ ಸಂಘರ್ಷ ಸಮಿತಿ ಬಣ ರಹಿತ, ರಾಷ್ಟ್ರೀಯ ಸೇವಾ ಯೋಜನೆ ಸಹಯೋಗದಲ್ಲಿ ನಮ್ಮ ಹೆಮ್ಮೆಯ ಭಾರತ ಸಂವಿಧಾನ ಕುರಿತ ಜಾಗೃತಿ ಕಾರ್ಯಕ್ರಮ ಮತ್ತು ನಮ್ಮ ಸಂವಿಧಾನ ಸಂಕ್ಷಿಪ್ತ ಪುಸ್ತಕ ಉಚಿತ ವಿತರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಸಂವಿಧಾನವನ್ನು ಒಂದು ವಾಕ್ಯದಲ್ಲಿ ಹೇಳುವುದಾದರೆ ನಮ್ಮ ಜೀವನ ನಿರ್ವಹಣೆ ಹಾಗೂ ಪಾಲನೆಯ ಗ್ರಂಥ. ಅಂಬೇಡ್ಕರ್ ನೀಡಿದ ಸಂವಿಧಾನದ ಆಶಯಗಳನ್ನು ಪಾಲಿಸಿದರೆ ನಾವು ಹೇಗೆ ನೆಮ್ಮದಿಯ ಬದುಕು ಕಾಣಬಹುದು ಎಂದು ತಿಳಿಯುತ್ತದೆ. ಆದರೆ ನಾವು ಒಪ್ಪಿಕೊಂಡು ನಡೆಸಿಕೊಂಡು ಬರುತ್ತಿರುವ ಸಂವಿಧಾನದ ಬಗ್ಗೆ ಪ್ರಸ್ತುತ ಅದರ ವಿರುದ್ಧ ಮಾತನಾಡುತ್ತಿರುವುದು ಸರಿಯಲ್ಲ ಸಂವಿಧಾನವನ್ನು ಪ್ರತಿಯೊಬ್ಬರು ತಿಳಿಯಬೇಕು ಎಂದು ಪ್ರತಿಪಾದಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತ, ಎಸ್‌ಎಸ್‌ಎಲ್‌ಸಿ ಹಂತದಲ್ಲಿ ಮಕ್ಕಳು ಸೂಕ್ತ ನಿರ್ಣಯ ಕೈಗೊಳ್ಳಲು ಕಷ್ಟ ಆದರೆ ಪದವಿ ಹಂತದಲ್ಲಿ ನಿರ್ಧರಿಸುವ ಸಾಮರ್ಥ್ಯ ಇರುತ್ತದೆ. ಆದ್ದರಿಂದ ಉಜ್ವಲ ಭವಿಷ್ಯ, ಉತ್ತಮ ಬದುಕು ಹಾಗೂ ಸಾಧನೆಗೆ ಪೂರಕವಾಗಿ ಸೂಕ್ತ ಮತ್ತು ಉತ್ತಮ ನಿರ್ಧಾರ ಕೈಗೊಳ್ಳಬೇಕು. ಪ್ರಸಕ್ತ ಸನ್ನಿವೇಶದಲ್ಲಿ ಹೆಣ್ಣು ಮಕ್ಕಳು ಹೆಚ್ಚು ಜಾಗೃತರಾಗಿರಬೇಕು ಹಾಗೂ ಉನ್ನತ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಿ ಶ್ರದ್ಧೆಯಿಂದ ಅಧ್ಯಯನ, ಸಾಧನೆ ಮಾಡುವಂತೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಭಾರತ ಸಂವಿಧಾನದ ಸಂಕ್ಷಿಪ್ತ ಕಿರುಪುಸ್ತಕವನ್ನು ಮೈಸೂರು ಜಿಲ್ಲಾ ಗ್ರಾಮಾಂತರ ವೈದ್ಯಕೀಯ ವಿಭಾಗದ ಅಧ್ಯಕ್ಷ ಡಾ.ಬಿ.ಪ್ರದೀಪ್ ವಿದ್ಯಾರ್ಥಿಗಳಿಗೆ ವಿತರಿಸಿದರು. ದೈಹಿಕ ಶಿಕ್ಷಣ ನಿರ್ದೇಶಕಿ ಪಿ.ಕೆ.ಶಶಿರೇಖಾ ಅವರು ಸಂವಿಧಾನದ ಪೀಠಿಕೆ ವಾಚಿಸಿ, ಪ್ರತಿಜ್ಞಾವಿಧಿ ಬೋಧಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಪಿ.ಇಂದಿರಾ ಅವರು ಸಂವಿಧಾನದ ಮಹತ್ವದ ಬಗ್ಗೆ ತಿಳಿಸಿದರು. ದಲಿತ ಸಂಘರ್ಷ ಸಮಿತಿ(ಬಣ ರಹಿತ) ಜಿಲ್ಲಾ ಸಂಚಾಲಕ ಸಿ.ಉಮಾ ಮಹದೇವ, ಚಿಂತಕ ಹಾಗೂ ಪೊಲೀಸ್ ಅಧಿಕಾರಿ ಡಾ.ಎಸ್.ಜಯಕುಮಾರ್, ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ಅಲತ್ತೂರು ಶಿವರಾಜ್, ಬಿ.ಪಿ.ಸುರೇಶ್ ಅಶೋಕಪುರಂ, ಮೂಡಳ್ಳಿ ಮಹದೇವ, ತಾಲೂಕು ಸಂಚಾಲಕ ಕೇತುಪುರ ಶಿವರಾಜ್, ದಲಿತ ಮಹಿಳಾ ಮುಖಂಡರಾದ ವನಜ, ಅಲಗೂಡು ಲಿಂಗರಾಜು, ತಾಲೂಕು ಸಂಘಟನಾ ಸಂಚಾಲಕರಾದ ರವೀಂದ್ರ, ಕಾಲೇಜಿನ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಶಾಲಾ ಮಕ್ಕಳಿಗೆ ಉಚಿತ ಬ್ಯಾಗ್ ವಿತರಣೆ

ಹೆಚ್.ಡಿ.ಕೋಟೆ ತಾಲೂಕಿನ ಆಡಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ರೋಟರಿ ಕ್ಲಬ್ ವತಿಯಿಂದ ಉಚಿತವಾಗಿ ಬ್ಯಾಗ್ ಹಾಗೂ ಲೇಖನ ಸಾಮಗ್ರಿ ವಿತರಿಸಲಾಯಿತು. ಈ ವೇಳೆ ರೋಟರಿ ಕ್ಲಬ್ ಅಧ್ಯಕ್ಷ ನಿರಂಜನ್, ಕಾರ್ಯದರ್ಶಿ ಶಿವಣ್ಣ, ಶಾಲೆ ಎಸ್‌ಡಿಎಂಸಿ ಅಧ್ಯಕ್ಷ ಸಣ್ಣಸ್ವಾಮಿಗೌಡ, ಸದಸ್ಯರು ಹಾಗೂ ಗ್ರಾಪಂ ಮಾಜಿ ಅಧ್ಯಕ್ಷ ದಾಸೇಗೌಡ, ಆಶಾ, ಭಾಗ್ಯ, ಮಹೇಶ್ವರಿ, ಚಿಕ್ಕನಂಜಯ್ಯ, ಸೋಮಣ್ಣ, ಜ್ಯೋತಿ, ಶಿವರಾಜು, ಸುಬ್ರಹ್ಮಣ್ಯ, ಮುಖ್ಯಶಿಕ್ಷಕ ವಿ.ಮಂಜುನಾಥ, ನಾರಾಯಣಮೂರ್ತಿ, ಶಶಿ, ರಶ್ಮಿ, ಎಸ್.ಸುಧಾಕರ್, ಜಯಶೀಲ ಇನ್ನಿತರರಿದ್ದರು.



ಶ್ರೀಚಿಕ್ಕದೇವಮ್ಮನವರ ಅದ್ಧೂರಿ ಪೂಜಾ ಮಹೋತ್ಸವ



ಶ್ರೀಚಿಕ್ಕದೇವಮ್ಮನವರ 48ನೇ ಪೂಜಾ ಮಹೋತ್ಸವ ಅದ್ಧೂರಿಯಾಗಿ ನಡೆಯಿತು.

ಸರಗೂರು, ಫೆ.4– ಪಟ್ಟಣದಲ್ಲಿ ನಾಯಕ ಸಮಾಜದಿಂದ ಶ್ರೀಚಿಕ್ಕದೇವಮ್ಮನವರ 48ನೇ ಪೂಜಾ ಮಹೋತ್ಸವ ಅದ್ಧೂರಿಯಾಗಿ ನೆರವೇರಿತು.

ಪೂಜಾ ಮಹೋತ್ಸವ ಅಂಗವಾಗಿ ದೇವಾಲಯವನ್ನು ವಿದ್ಯುತ್ ದೀಪ, ತಳಿರು ತೋರಣಗಳಿಂದ ಅಲಂಕರಿಸಲಾಗಿತ್ತು. ಶ್ರೀಚಿಕ್ಕದೇವಮ್ಮ ದೇವಾಲಯದಲ್ಲಿ ಮಂಗಳವಾದ್ಯದೊಂದಿಗೆ ಸಂಕಲ್ಪ, ಮಹಾಗಣಪತಿ ಪೂಜೆ, ಪುಣ್ಯಾಹ, ಕಳಸ ಸ್ಥಾಪನೆ, ನವಗ್ರಹ ಹೋಮ, ದುರ್ಗ ಹೋಮ, ಅಮ್ಮನವರಿಗೆ ಪಂಚಾಮೃತ ಅಭಿಷೇಕ, ಸಹಸ್ರ ನಾಮ ನಡೆಸಲಾಯಿತು. ಬಳಿಕ ಪೂರ್ಣಕುಂಭದೊಂದಿಗೆ ಚಿಕ್ಕದೇವಮ್ಮನವರ ಹೂವಿನ ಪಲ್ಲಕ್ಕಿ ಉತ್ಸವವನ್ನು ಮಂಗಳ ವಾದ್ಯದೊಡನೆ ಕಪಿಲಾ ನದಿ ದಡಕ್ಕೆ ಬಿಜಂಗೈದು ಬ್ಯಾಂಡ್ ಸೆಟ್, ಸತ್ತಿಗೆ, ವೀರಗಾಸೆ ಇನ್ನಿತರ ಕಲಾ ತಂಡಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ದೇವಾಲಯಕ್ಕೆ ತಂದು ವಿಶೇಷ ಪೂಜೆ ನಡೆಸಿ ಮಹಾಮಂಗಳಾರತಿ ಮಾಡಿ ಪ್ರಸಾದ ವಿನಿಯೋಗ ಮಾಡಲಾಯಿತು. ಮೆರವಣಿಗೆಯಲ್ಲಿ ಹೊಸ ಬಟ್ಟೆ ತೊಟ್ಟ ಹೆಣ್ಣು ಮಕ್ಕಳು 101 ಕಳಸ ಹೊತ್ತು ಹರಕೆ ತೀರಿಸಿದರೇ, ಮನೆ ಎದುರು ಬಂದ ಪಲ್ಲಕ್ಕಿ ಉತ್ಸವಕ್ಕೆ ಮಹಿಳೆಯರು ಆರತಿ ಮಾಡಿ ಈಡುಗಾಯಿ ಸೇವೆ ಸಲ್ಲಿಸಿದರು. ಪೂಜೆಯನ್ನು ಪುರೋಹಿತ್ ಹರೀಶ್, ಗೋಪಿನಾಥ್, ಸುಕ್ರುತ್ ಭಾರದ್ವಾಜ್ ನೆರವೇರಿಸಿದರು.

ಬನ್ನೂರಲ್ಲಿ ಮಡಿವಾಳ ಮಾಚಿದೇವರ ಜಯಂತ್ಯುತ್ಸವ

ಸಮಾಜದ ಮುಖ್ಯವಾಹಿನಿಗೆ ಬರಲು ಪ್ರಯತ್ನಿಸಬೇಕು: ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು



ಕಾರ್ಯಕ್ರಮದಲ್ಲಿ ಮೈಮುಲ್ ಅಧ್ಯಕ್ಷ ಚೆಲುವರಾಜು ಮಾತನಾಡಿದರು.

ಬನ್ನೂರು, ಫೆ.4– ಮಡಿವಾಳ ಸಮುದಾಯ ಸಮಾಜದ ಮುಖ್ಯವಾಹಿನಿಗೆ ಬರಲು ಪ್ರಯತ್ನಿಸಬೇಕು ಎಂದು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ತಿಳಿಸಿದರು.

ಪಟ್ಟಣದಲ್ಲಿ ಮಂಗಳವಾರ ನಡೆದ ಶ್ರೀವೀರ ಮಡಿವಾಳ ಮಾಚಿದೇವರ ಜಯಂತ್ಯುತ್ಸವ ಹಾಗೂ ಸಂಘದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 12ನೇ ಶತಮಾನದಲ್ಲಿ ಬಸವಣ್ಣನವರ ಸಮಕಾಲೀನರಾಗಿದ್ದ ಮಡಿವಾಳ ಮಾಚಿದೇವರ ಜ್ಞಾನ ಅಗಾಧವಾಗಿತ್ತು. ಅದನ್ನು ಅರಿತಿರುವ ಸಮಾಜದ ಬಂಧುಗಳು ಅವರ ಜಯಂತಿ ಆಚರಿಸುವ ಮೂಲಕ ಅವರಿಗೆ ಗೌರವ ಸಲ್ಲಿಸುತ್ತಿದ್ದಾರೆ ಎಂದರು.

ವಿಧಾನ ಪರಿಷತ್ ಸದಸ್ಯ ಡಿ.ತಿಮ್ಮಯ್ಯ ಮಾತನಾಡಿದರು. ಈ ವೇಳೆ ವಾಟಾಳು ಮಠದ ಡಾ.ಸಿದ್ಧಲಿಂಗಶಿವಾಚಾರ್ಯ ಸ್ವಾಮೀಜಿ, ಕಾಂಗ್ರೆಸ್ ಮುಖಂಡ ಅನಿಲ್ ಬೋಸ್, ಪ್ರಭಾಕರ್, ಮಡಿವಾಳ ಜನಾಂಗದ ಅಧ್ಯಕ್ಷ ನಾಗರಾಜು, ಪ್ರಧಾನ ಕಾರ್ಯದರ್ಶಿ ಜಿ.ಎಸ್.ರವಿ, ಸಿದ್ದೇಗೌಡ, ಶಿವಕುಮಾರ್, ಟಿ.ಹೆಚ್.ಮಂಜುನಾಥ್, ನಾರಾಯಣ್, ಮಯಿಂಗಯ್ಯ, ನಿಂಗರಾಜು, ಕಾಂತರಾಜು, ಮಂಗಳ, ಮಹದೇವಶೆಟ್ಟಿ, ಚೆಲುವಯ್ಯ, ಮಾದಶೆಟ್ಟಿ, ಬಿ.ಕೆ.ರಾಮದಾಸು, ಹನುಮಂತ, ಗೀತಾ, ನಾಗರಾಜು ಇದ್ದರು.

ಉಪ್ಪಲಗೇರಿಯಲ್ಲಿ ರಸ್ತೆ ಒತ್ತುವರಿ ಮಾಡಿಕೊಂಡಿರುವ ಕಾಂಪೌಂಡ್ ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಿ

ವೀರಶೈವ ಲಿಂಗಾಯತ ಸಮಾಜದ ಯುವ ಘಟಕದ ಕಾರ್ಯದರ್ಶಿ ಎಂ.ಪ್ರವೀಣ್ ಒತ್ತಾಯ



ಸುದ್ದಿಗೋಷ್ಠಿಯಲ್ಲಿ ವೀರಶೈವ ಲಿಂಗಾಯತ ಸಮಾಜದ ಯುವ ಘಟಕದ ಕಾರ್ಯದರ್ಶಿ ಎಂ.ಪ್ರವೀಣ್ ಮಾತನಾಡಿದರು.

ತಿ.ನರಸೀಪುರ, ಫೆ.4– ವ್ಯಕ್ತಿಯೊಬ್ಬರು ಸಾರ್ವಜನಿಕ ರಸ್ತೆ ಒತ್ತುವರಿ ಮಾಡಿಕೊಂಡು ನಿರ್ಮಿಸಿರುವ ಕಾಂಪೌಂಡ್ ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡುವಂತೆ ವೀರಶೈವ ಲಿಂಗಾಯತ ಸಮಾಜದ ಯುವ ಘಟಕದ ಕಾರ್ಯದರ್ಶಿ ಎಂ.ಪ್ರವೀಣ್ ಒತ್ತಾಯಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಿ.ನರಸೀಪುರ ಪುರಸಭೆ ವ್ಯಾಪ್ತಿಯ ಉಪ್ಪಲಗೇರಿ ಬಡಾವಣೆ ಖಾತೆ ನಂಬರ್ 1278/1283/1199ರ 25x60ರ ಖಾಲಿ ನಿವೇಶನವನ್ನು ಮಹೇಶ್ ಎಂಬುವರಿಗೆ 2007ರಲ್ಲಿ 75 ಸಾವಿರ ರೂ.ಗಳಿಗೆ ಲೇ.ಸಿದ್ದು ಅವರ ಪತ್ನಿ ಮಾದಮ್ಮ ಎಂಬುವರು ಶುದ್ಧ ಕ್ರಯ ಪತ್ರ ಮಾಡಿಕೊಟ್ಟಿದ್ದರಾದರೂ ನಂತರದಲ್ಲಿ ಪುರಸಭೆಯವರು ಅಕ್ರಮವಾಗಿ ತಿದ್ದುಪಡಿ ಮಾಡಿ 25x60 ಅಳತೆಯ ನಿವೇಶನವನ್ನು 43x60 ಎಂದು ಅಕ್ರಮವಾಗಿ ತಿದ್ದುಪಡಿ ಮಾಡಿ ಖಾತೆ ಮಾಡಿಕೊಟ್ಟಿದ್ದಾರೆ ಎಂದು ದೂರಿದರು.

ಪ್ರಸ್ತುತ ಅಕ್ರಮವಾಗಿ ಕಾಂಪೌಂಡ್ ನಿರ್ಮಿಸಿರುವ ಜಾಗ ಸಾರ್ವಜನಿಕ ಆಸ್ತಿಯಾಗಿದ್ದು, ತಲಕಾಡು–ತಿ.ನರಸೀಪುರ ಮೂಲಕ ಅಕ್ರಮವಾಗಿ ಕಾಂಪೌಂಡ್ ನಿರ್ಮಿಸಿರುವ ಜಾಗದ ಮೂಲಕವೇ ರಾಷ್ಟ್ರೀಯ ಹೆದ್ದಾರಿಗೆ ಸಂಪರ್ಕ ಕಲ್ಪಿಸುವುದಾಗಿದೆ. ಈಗ ಅಕ್ರಮ ಖಾತೆ ಮಾಡಿಸಿಕೊಂಡಿರುವ ವ್ಯಕ್ತಿ ಸದರಿ ಸ್ಥಳದಲ್ಲಿ ಅಕ್ರಮವಾಗಿ ಕಾಂಪೌಂಡ್ ನಿರ್ಮಾಣ ಮಾಡಿಕೊಂಡಿದ್ದು, ಅತಿಕ್ರಮ ಪ್ರಶ್ನಿಸುವವರ ಮೇಲೆಯೇ ಆಂತರಿಕ ಬೆದರಿಕೆ ಒಡ್ಡುವ ಕೆಲಸದಲ್ಲಿ ನಿರತರಾಗಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು.

ಈ ಹಿಂದಿನ ಪುರಸಭೆ ಮುಖ್ಯಾಧಿಕಾರಿ ಬಸವರಾಜು ಎಂಬುವರು 2022ರಲ್ಲಿ ಗ್ಯಾರೇಜ್ ಮಹೇಶ್ ಎಂಬುವರಿಗೆ ಅಕ್ರಮವಾಗಿ ಖಾತೆ ಬದಲಾವಣೆ ಮಾಡಿಕೊಟ್ಟಿರುವುದಕ್ಕೆ ಅನೇಕ ದಾಖಲಾತಿಗಳಿವೆ. 25x60 ಅಳತೆಯ ನಿವೇಶನವನ್ನು ಅಕ್ರಮವಾಗಿ 43x60 ಎಂದು ತಿದ್ದುಪಡಿ ಮಾಡಿ ಸರ್ಕಾರಿ ರಜಾ ದಿನವಾದ ಭಾನುವಾರ ಕಂದಾಯ ಕಟ್ಟಿದ ರಶೀದಿ ನೀಡಲಾಗಿದೆ. ಅಲ್ಲದೇ 23/04/2022ರ ನಾಲ್ಕನೇ ಶನಿವಾರ ಸರ್ಕಾರಿ ರಜಾ ದಿನದಂದು ಈ–ಸ್ವತ್ತು ಪ್ರಿಂಟ್ ತೆಗೆದು ಅಪ್ರೂವಲ್ ನೀಡಲಾಗಿದೆ. ದಾಖಲಾತಿಗಳನ್ನು ಕಚೇರಿಯಲ್ಲಿ ಸಿದ್ಧಪಡಿಸುತ್ತಾರೊ ಅಥವಾ ತಮ್ಮ ಮನೆಯಲ್ಲಿ ಕುಳಿತು ಸಿದ್ಧಪಡಿಸುತ್ತಾರೋ ಎಂದು ಪುರಸಭೆ ಕಾರ್ಯವೈಖರಿಯನ್ನು ತೀವ್ರವಾಗಿ ಖಂಡಿಸಿದರು.

ಅಕ್ರಮವಾಗಿ ಖಾತೆ ಮಾಡಿಸಿಕೊಂಡು ಸಾರ್ವಜನಿಕ ರಸ್ತೆಯಲ್ಲಿ ಕಾಂಪೌಂಡ್ ನಿರ್ಮಿಸುತ್ತಿರುವ ವ್ಯಕ್ತಿ ಈಗ ನನ್ನ ಮೇಲೆ ಕಾಂಪೌಂಡ್ ನಿರ್ಮಾಣಕ್ಕೆ ಅಡ್ಡಿಪಡಿಸುವ ಆರೋಪ ಹೊರಿಸುವ ಮೂಲಕ ಅಕ್ರಮ ಪ್ರಶ್ನಿಸುವುದನ್ನು ತಡೆಗಟ್ಟಲು ಹಾಗೂ ನನ್ನ ಎದೆಗುಂದಿಸುವ ಕಾರ್ಯದಲ್ಲಿ ನಿರತನಾಗಿದ್ದಾನೆ. ಆದರೆ ಡಾ.ಬಿ.ಆರ್ ಅಂಬೇಡ್ಕರ್ ಬರೆದ ಸಂವಿಧಾನದಲ್ಲಿ ಅಕ್ರಮ ಪ್ರಶ್ನಿಸುವ ಅಧಿಕಾರ ಎಲ್ಲರಿಗೂ ಇದೆ. ಅವರ ಬಳಿ ದಾಖಲಾತಿಗಳಿದ್ದರೆ ಅದನ್ನು ಸಂಬಂಧಿಸಿದ ಅಧಿಕಾರಿಗಳಿಗೆ ಕೊಟ್ಟು ಖಾತೆ ಮಾಡಿಸಿಕೊಳ್ಳಲಿ ಎಂದರು.

ಈ ಸಂಬಂಧ ಪುರಸಭೆ ಮುಖ್ಯಾಧಿಕಾರಿ ಬಿ.ಕೆ.ವಸಂತಕುಮಾರಿ ಅವರಿಗೆ ದಾಖಲಾತಿ ಸಲ್ಲಿಸಲಾಗಿದೆ. ಸ್ಥಳ ಪರಿಶೀಲಿಸಿರುವ ಅವರು ಕಾಂಪೌಂಡ್ ತೆರವುಗೊಳಿಸುವ ಭರವಸೆ ನೀಡಿದ್ದಾರೆ. ತ್ವರಿತವಾಗಿ ತೆರವು ಕಾರ್ಯಾಚರಣೆ ಮಾಡುವ ಮೂಲಕ ಪುರಸಭೆಯವರು ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿಕೊಡಬೇಕು. ಸರ್ಕಾರಿ ಜಾಗದ ರಕ್ಷಣೆಯಾಗಬೇಕು. ತಿ.ನರಸೀಪುರ ಪುರಸಭೆ ವ್ಯಾಪ್ತಿಯಲ್ಲಿ ಇಂತಹ ಅನೇಕ ಅಕ್ರಮ ಪ್ರಕರಣಗಳು ನಡೆಯುತ್ತಿದ್ದು, ನಮ್ಮ ಗಮನಕ್ಕೆ ಬಂದರೆ ಯಾವ ಮುಲಾಜಿಗೂ ಬಗ್ಗದೆ ಪ್ರತಿಭಟನೆ ನಡೆಸುವುದಾಗಿ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ದಿನೇಶ್ ಹಾಗೂ ಚೇತನ್ ಹಾಜರಿದ್ದರು.

ರಾಮನ್ ನಿಧನ



ನಂಜನಗೂಡು, ಫೆ.4– ಪಟ್ಟಣದ ನಾಗೇಶ್ವರ ಲೇಔಟ್ ನಿವಾಸಿ, ರೈಲ್ವೆ ಇಲಾಖೆಯ ನಿವೃತ್ತ ಸಿಬ್ಬಂದಿ ಎಸ್. ರಾಮನ್ (ರಾಮಸ್ವಾಮಿ) ಮಂಗಳವಾರ ಬೆಳಗ್ಗೆ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 72 ವರ್ಷ ವಯಸ್ಸಾಗಿತ್ತು.

ದಿವಂಗತರು ಪುತ್ರಿಯರಾದ ಸಂಗೀತ ವಿದುಷಿ ನಂಜನಗೂಡಿನ ಶ್ರೀ ವಿದ್ಯಾ ಸಂಗೀತ ಮತ್ತು ನೃತ್ಯಶಾಲೆಯ ಮುಖ್ಯಸ್ಥೆ ಶ್ರೀ ವಿದ್ಯಾ ಮತ್ತು ವೈಷ್ಣವಿ ಸುಬ್ರಮಣ್ಯ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮಂಗಳವಾರ ಸಂಜೆ ನಂಜನಗೂಡಿನ ಕಪಿಲಾತೀರದ ರುದ್ರಭೂಮಿಯಲ್ಲಿ ದಿವಂಗತರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಥಸಪ್ತಮಿ: ಮೈಸೂರಲ್ಲಿ ಸಾಮೂಹಿಕ ಸೂರ್ಯ ನಮಸ್ಕಾರ





ಮೈಸೂರು ಯೋಗ ಅಸೋಸಿಯೇಷನ್, ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ ಹಾಗೂ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಸಹಯೋಗದಲ್ಲಿ ರಾಮಕೃಷ್ಣನಗರದ ರಾಮಕೃಷ್ಣ ವೃತ್ತದಲ್ಲಿ ಸಾಮೂಹಿಕ ಸೂರ್ಯ ನಮಸ್ಕಾರದಲ್ಲಿ ಯೋಗಪಟುಗಳು. ಮತ್ತೊಂದು ಚಿತ್ರದಲ್ಲಿ ಮೈಸೂರು ಯೋಗ ಒಕ್ಕೂಟವು ಮಂಗಳವಾರ ಅರಮನೆ ಉತ್ತರ ದ್ವಾರದ ಮುಂಭಾಗ ಏರ್ಪಡಿಸಿದ್ದ 108 ಸೂರ್ಯ ನಮಸ್ಕಾರ ಕಾರ್ಯಕ್ರಮದಲ್ಲಿ ನೂರಾರು ಯೋಗಪಟುಗಳು ಪಾಲ್ಗೊಂಡಿದ್ದರು

ಮೈಸೂರು,ಫೆ.4(ಎಂಟಿವೈ)– ರಥ ಸಪ್ತಮಿ ಹಿನ್ನೆಲೆಯಲ್ಲಿ ಮೈಸೂರಿನ ವಿವಿಧೆಡೆ ಯೋಗ ಶಿಕ್ಷಣ ಸಂಸ್ಥೆಗಳು ಆಯೋಜಿಸಿದ್ದ ಸಾಮೂಹಿಕ ಸೂರ್ಯ ನಮಸ್ಕಾರ ಕಾರ್ಯಕ್ರಮದಲ್ಲಿ ನೂರಾರು ಯೋಗಪಟುಗಳು 108 ಬಾರಿ ಮಂತ್ರ ಜಪ, ಸೂರ್ಯ ನಮಸ್ಕಾರದ ಮೂಲಕ ಗಮನ ಸೆಳೆದರು.

ಮೈಸೂರು ಯೋಗ ಅಸೋಸಿಯೇಷನ್, ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ ಹಾಗೂ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಸಹಯೋಗದಲ್ಲಿ ರಾಮಕೃಷ್ಣನಗರದ ರಾಮಕೃಷ್ಣ ವೃತ್ತದಲ್ಲಿ ಸಾಮೂಹಿಕ ಸೂರ್ಯ ನಮಸ್ಕಾರ ಆಯೋಜಿಸಿದ್ದರೆ, ಮೈಸೂರು ಯೋಗ ಒಕ್ಕೂಟವು ಅರಮನೆ ಮುಂಭಾಗದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಆವರಣದಲ್ಲಿ ಸೂರ್ಯ ನಮಸ್ಕಾರ ಹಾಗೂ ಸೂರ್ಯ ಯಜ್ಞ ಕಾರ್ಯಕ್ರಮ ಏರ್ಪಡಿಸಿತ್ತು. ಈ ಎರಡೂ ಕಾರ್ಯಕ್ರಮದಲ್ಲಿ ವಿದೇಶಿಗರು, ಮಕ್ಕಳು, ಮಹಿಳೆಯರು, ಹಿರಿಯ ನಾಗರಿಕರೂ ಸೇರಿದಂತೆ ನೂರಾರು ಮಂದಿ ಪಾಲ್ಗೊಂಡು ಸತತ 108 ಬಾರಿ ಮಂತ್ರ ಜಪ ಮಾಡಿ, ಸೂರ್ಯ ನಮಸ್ಕಾರದ ಮೂಲಕ ರಥಸಪ್ತಮಿ ಸಂಭ್ರಮಿಸಿದರು.

ರಾಮಕೃಷ್ಣ ಪರಮಹಂಸ ವೃತ್ತ: ರಾಮಕೃಷ್ಣನಗರದ ರಾಮಕೃಷ್ಣ ವೃತ್ತದಲ್ಲಿ ಆಯೋಜಿಸಿದ್ದ ಸಾಮೂಹಿಕ 108 ಸೂರ್ಯ ನಮಸ್ಕಾರ ಕಾರ್ಯಕ್ರಮದಲ್ಲಿ ವಿವಿಧ ಯೋಗ ಸಂಸ್ಥೆಗಳ ನೂರಾರು ಯೋಗಪಟುಗಳು ಪಾಲ್ಗೊಂಡಿದ್ದರು. ರಾಮಕೃಷ್ಣ ಪರಮಹಂಸ ವೃತ್ತದಿಂದ ವಿಶ್ವಮಾನವ ಜೋಡಿ ರಸ್ತೆಯುದ್ದಕ್ಕೂ ಯೋಗಪಟುಗಳು ಬೆಳಗ್ಗೆ 5.45ರಿಂದ 7.45ರವರೆಗೆ ಜಪ ಮಂತ್ರ ಪಠಿಸಿ, ಸಾಮೂಹಿಕ ಸೂರ್ಯ ನಮಸ್ಕಾರ ಮಾಡಿದರು. ಬಳಿಕ ಆರ್ಯ ಸಮಾಜದಿಂದ ಸೂರ್ಯ ಯಜ್ಞ ಕಾರ್ಯಕ್ರಮವೂ ನಡೆಯಿತು.

ನಂತರ ನಡೆದ ಸಭಾ ಕಾರ್ಯಕ್ರಮಕ್ಕೆ ಯೋಗಗುರು ಡಾ.ಬಿಎನ್‌ಎಸ್ ಅಯ್ಯಂಗಾರ್ ಚಾಲನೆ ನೀಡಿ ಮಾತನಾಡಿ, ಸೂರ್ಯ ನಮಸ್ಕಾರವನ್ನು ಪ್ರತಿದಿನ ಮಾಡುವುದರಿಂದ ಆರೋಗ್ಯ ಕಾಪಾಡಿಕೊಳ್ಳಬಹುದು. ವಿವಿಧ ಆಸನ, ಯೋಗಭಂಗಿಗಳಿಂದ ಸಂಯೋಜಿತಗೊಂಡಿರುವ ಸೂರ್ಯ ನಮಸ್ಕಾರ ಅಭ್ಯಾಸದಿಂದ ಮನುಷ್ಯ ಪರಿಪೂರ್ಣ ಆರೋಗ್ಯ ಹೊಂದುತ್ತಾನೆ ಎಂದರು.

ರಥಸಪ್ತಮಿಯ ಮಹತ್ವದ ಕುರಿತು ಮಾತನಾಡಿದ ಸಂಸ್ಕೃತ ವಿದುಷಿ ಡಾ.ಕೆ. ಲೀಲಾಪ್ರಕಾಶ್, ಈ ಜಗತ್ತಿನ ಅಸ್ತಿತ್ವಕ್ಕೆ ಕಾರಣೀಭೂತನಾಗಿರುವ ಸೂರ್ಯನನ್ನು ಆರಾಧಿಸುವ ವೈಶಿಷ್ಟ್ಯಪೂರ್ಣವಾದ ಹಿರಿಮೆಯನ್ನು ರಥಸಪ್ತಮಿ ಹೊಂದಿದೆ. ಮಾಘ ಮಾಸದ ಶುಕ್ಲ ಪಕ್ಷದ ಸಪ್ತಮಿ ಎಂದು ಆಚರಿಸಲ್ಪಡುವ ರಥಸಪ್ತಮಿಯ ನಂತರ ಸಪ್ತಾಶ್ವಗಳಿಂದ ಕೂಡಿದ ರಥವನ್ನು ಸೂರ್ಯನು ಉತ್ತರಕ್ಕೆ ತಿರುಗಿಸಿ, ಉತ್ತರಾಯಣ ಪುಣ್ಯಕಾಲಕ್ಕೆ ಅನುವು ಮಾಡಿಕೊಡುತ್ತಾನೆ. ರಥಸಪ್ತಮಿಯಂದು ಮಾಡುವ ಸೂರ್ಯನಮಸ್ಕಾರದ ಪದ್ಧತಿ ಸೂರ್ಯನ ಅನುಗ್ರಹ ಸಂಪಾದನೆಗೆ ಅತ್ಯುತ್ತಮ ಮಾರ್ಗ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ಅಧ್ಯಕ್ಷರೂ, ವಿಧಾನಪರಿಷತ್ ಮಾಜಿ ಸದಸ್ಯರೂ ಆದ ಡಿ.ಮಾದೇಗೌಡ, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮೈಸೂರು ಯೋಗ ಅಸೋಸಿಯೇಷನ್ ಅಧ್ಯಕ್ಷ ಡಾ.ಸಿ.ರಮೇಶ್ ಶೆಟ್ಟಿ, ಕಾರ್ಯದರ್ಶಿ ಎನ್.ಅನಂತ, ಉಪಾಧ್ಯಕ್ಷರಾದ ಎನ್.ಪಶುಪತಿ, ಡಾ.ಬಿ. ಶ್ರೀನಾಥ್, ವಿವೇಕ ವಿದ್ಯಾಲಯ ಪಿಯು ಕಾಲೇಜಿನ ನಿರ್ದೇಶಕ ಎಂ.ಎಸ್.ನಾಗೇಶ್, ಪತಂಜಲಿ ಯೋಗ ಶಿಕ್ಷಣ ಸಮಿತಿಯ ಸಂಚಾಲಕ ನಾಗೇಂದ್ರ ರಾಜೇಅರಸ್, ಜಿಎಸ್‌ಎಸ್ ಯೋಗ ಸಂಸ್ಥೆಯ ಮುಖ್ಯಸ್ಥ ಶ್ರೀಹರಿ, ಆರ್ಯ ಸಮಾಜದ ಅಧ್ಯಕ್ಷ ಎಸ್.ಹೇಮಚಂದ್ರ, ಕೃಷ್ಣಮೂರ್ತಿ ಹರ್ಷವರ್ಧನ ಇನ್ನಿತರರು ಪಾಲ್ಗೊಂಡಿದ್ದರು.

ಅರಮನೆ ಮುಂಭಾಗ: ಮೈಸೂರು ಯೋಗ ಒಕ್ಕೂಟವು ಅರಮನೆಯ ಉತ್ತರ ದ್ವಾರದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗ ಇಂದು ಬೆಳಗ್ಗೆ ಆಯೋಜಿಸಿದ್ದ ಒಕ್ಕೂಟದ 24ನೇ ವಾರ್ಷಿಕೋತ್ಸವ ಹಾಗೂ ರಥಸಪ್ತಮಿ ಸಾಮೂಹಿಕ 108 ಸೂರ್ಯ ನಮಸ್ಕಾರದಲ್ಲಿ ಎಲ್ಲಾ ವಯೋಮಾನದ ನೂರಾರು ಮಂದಿ ಭಾಗಿಯಾಗಿ ಸೂರ್ಯ ನಮಸ್ಕಾರ ಮಾಡಿದರು. ಮುಂಜಾನೆ 5.45ರಿಂದ 7.45ರವರೆಗೆ ಸೂರ್ಯ ನಮಸ್ಕಾರ ಹಾಗೂ ಜಪಮಂತ್ರ ಪಠಣ ಮಾಡಿದರು.

ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಕೆ.ಜಿ. ದೇವರಾಜು ಪ್ರಾಸ್ತಾವಿಕ ಭಾಷಣ ಮಾಡಿ, ಒಕ್ಕೂಟವು 2001 ರಲ್ಲಿ ಪ್ರಾರಂಭವಾಗಿದ್ದು, ಅನೇಕ ಯೋಗ ಮತ್ತು ಆರೋಗ್ಯ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. ಪ್ರತಿವರ್ಷ ರಥಸಪ್ತಮಿ ಅಂಗವಾಗಿ ಅರಮನೆ ಉತ್ತರ ದ್ವಾರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಸಾಮೂಹಿಕ 108 ಸೂರ್ಯ ನಮಸ್ಕಾರಗಳು ಹಾಗೂ ಸೂರ್ಯಯಜ್ಞ ಧಾರ್ಮಿಕ ಕಾರ್ಯಕ್ರಮ ನಡೆಸುತ್ತಿದೆ ಎಂದರು.

ಹಿರಿಯ ಸಮಾಜ ಸೇವಕ ಕೆ. ರಘುರಾಂ ಮಾತನಾಡಿ, ಮೈಸೂರಿನಲ್ಲಿ ಯೋಗ ಬೆಳವಣಿಗೆಗೆ ಯದುವಂಶದ ಕೊಡುಗೆ ಅಪಾರ. ಅದೇ ರೀತಿ ಹಲವಾರು ಸಾಧಕರು ಯೋಗ ವಿಶ್ವಮಟ್ಟದಲ್ಲಿ ಪ್ರಸಿದ್ಧಿಯಾಗಲು ಕಾರಣರಾಗಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ಯೋಗ ಒಕ್ಕೂಟದ ಗೌರವಾಧ್ಯಕ್ಷ ಡಾ.ಎ.ಎಸ್. ಚಂದ್ರಶೇಖರ್ ವಹಿಸಿದ್ದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಒಕ್ಕೂಟದ ಗೌರವಾಧ್ಯಕ್ಷ ಟಿ. ಜಲೇಂದ್ರಕುಮಾರ್, ಕಾರ್ಯಾಧ್ಯಕ್ಷರಾದ ಡಾ.ಬಿ.ಪಿ. ಮೂರ್ತಿ, ಶಾಂತಾರಾಮ್, ಎಂ.ಎಸ್. ಶಿವಪ್ರಕಾಶ್, ಉಪಾಧ್ಯಕ್ಷರಾದ ಎಂ.ಎಸ್. ರಮೇಶ್‌ಕುಮಾರ್, ಆಶಾದೇವಿ, ಪ್ರಧಾನ ಕಾರ್ಯದರ್ಶಿ ಯೋಗಕುಮಾರ್, ಖಜಾಂಚಿ ನರಸಿಂಹ, ರಾಜಶೇಖರ್, ಶುಭಲಕ್ಷ್ಮಿ, ಎಸ್.ಪುರುಷೋತ್ತಮ್, ಶಿಲ್ಪಾ ಪ್ರಶಾಂತ್, ಕೆ. ಚಂದ್ರು, ಕುಮುದಾ, ಮಣಿಕಂಠನ್, ಎಂ.ಡಿ. ರಾಜಶೇಖರಮೂರ್ತಿ ಇನ್ನಿತರರು ಪಾಲ್ಗೊಂಡಿದ್ದರು. ಇದೇ ವೇಳೆ ಹಿರಿಯ ಸಮಾಜ ಸೇವಕ ಕೆ. ರಘುರಾಂ, ಒಕ್ಕೂಟದ ಮಾಜಿ ಅಧ್ಯಕ್ಷ ಎಸ್.ವಿ. ವೆಂಕಟೇಶಯ್ಯ, ಸ್ವಾಸ್ಥ್ಯ ಮತ್ತು ಆಹಾರ ತಜ್ಞೆ ನಂದಿನಿ ಮೂರ್ತಿ ಅವರನ್ನು ಸನ್ಮಾನಿಸಲಾಯಿತು.

ಭೌತ ವಿಜ್ಞಾನಗಳ ಪ್ರಗತಿ ಕುರಿತು ಅಂತರರಾಷ್ಟ್ರೀಯ ವಿಚಾರ ಸಂಕಿರಣ



ಮೈಸೂರು, ಫೆ. 4– ಅಮೃತ ವಿಶ್ವ ವಿದ್ಯಾಪೀಠಂ ಮೈಸೂರು ಕ್ಯಾಂಪಸ್‌ನ ವಿಜ್ಞಾನ ವಿಭಾಗದ ವತಿಯಿಂದ ಇತ್ತೀಚೆಗೆ ರಾಸಾಯನಿಕ ಮತ್ತು ಭೌತ ವಿಜ್ಞಾನಗಳಲ್ಲಿನ ಪ್ರಗತಿಗಳ ಕುರಿತಾದ ಎರಡನೇ ಅಂತರರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು.

ಮೈಸೂರಿನ ಡಿಫೆನ್ಸ್ ಇನ್ಸ್ಟಿಟ್ಯೂಟ್ ಆಫ್ ಬಯೋಡಿಫೆನ್ಸ್ ಟೆಕ್ನಾಲಜೀಸ್‌ನ (ಡಿಐಬಿಟಿ) ವಿಜ್ಞಾನಿ 'ಜಿ' ಮತ್ತು ಅಸೋಸಿಯೇಟ್ ಸೆಂಟರ್ ಮುಖ್ಯಸ್ಥ ಡಾ. ವಿ. ಎ. ಸಜೀವಕುಮಾರ್ ಅವರು ವಿಚಾರ ಸಂಕಿರಣವನ್ನು ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ತಂತ್ರಜ್ಞಾನದ ಅಡಿಪಾಯ ಸ್ತಂಭಗಳಾಗಿ ರಸಾಯನ ಶಾಸ್ತ್ರ ಮತ್ತು ಭೌತಶಾಸ್ತ್ರ ಮುಖ್ಯ ಪಾತ್ರವನ್ನು ವಹಿಸುತ್ತವೆ. ನೈಜ–ಪ್ರಪಂಚದ ನಾವೀನ್ಯತೆಗಳಲ್ಲಿ ಈ ವಿಜ್ಞಾನಗಳು ಬಹು ಮುಖ್ಯವಾದ ಕೊಡುಗೆಗಳನ್ನು ನೀಡುತ್ತಿವೆ. ದೇಶದ ಅಭಿವೃದ್ಧಿಯಲ್ಲಿ ಮೂಲಭೂತ ವಿಜ್ಞಾನಗಳ ಪ್ರಭಾವವನ್ನು ವಿವರಿಸುತ್ತಾ ಭಾರತದ ರಕ್ಷಣಾ ವಲಯ ಮತ್ತು ಇಸ್ರೋಗೆ ಡಿಐಬಿಟಿಯ ಕೊಡುಗೆಯನ್ನು ಉಲ್ಲೇಖಿಸಿದರು.

ಉದ್ಘಾಟನಾ ಸಮಾರಂಭದಲ್ಲಿ ಬೆಂಗಳೂರಿನ ಕ್ವಾಂಟಮ್‌ಜೈಮ್ ಕಂಪನಿ ಮತ್ತು ಅಮೃತ ವಿಶ್ವವಿದ್ಯಾಪೀಠಂ, ಮೈಸೂರು ಕ್ಯಾಂಪಸ್‌ನ ನಡುವೆ ಸಂಶೋಧನಾ ಸಹಯೋಗಗಳನ್ನು ಬೆಳೆಸುವ ಗುರಿಯನ್ನು ಹೊಂದಿರುವ ಒಡಂಬಡಿಕೆಗೆ (ಎಂಓಯು) ಸಹಿ ಹಾಕಲಾಯಿತು. ಈ ಕಾರ್ಯಕ್ರಮದಲ್ಲಿ ವಿಜ್ಞಾನ ವಿಭಾಗ, ವಾಣಿಜ್ಯ ಮತ್ತು ನಿರ್ವಹಣಾ ವಿಭಾಗ ಮತ್ತು ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ (ಬಿಇಎಂಎಲ್)ನ ಸಹಯೋಗದೊಂದಿಗೆ ಭಾರತ ಸರ್ಕಾರದ 'ಏಕ್ ಪೆಡ್ ಮಾ ಕೆ ನಾಮ್' ಯೋಜನೆಯ ಅಡಿಯಲ್ಲಿ 'ಸುಸ್ಥಿರತೆಗಾಗಿ ವಿಜ್ಞಾನ' ಆಂದೋಲನ ವನ್ನು ಪ್ರಾರಂಭಿಸಲಾಯಿತು. ಇದರ ಅಂಗವಾಗಿ ಬಿಇಎಂಎಲ್, ಪರಿಸರ ಜಾಗೃತಿಯನ್ನು ಉತ್ತೇಜಿಸುವ ಮೂಲಕ ಭಾಗವಹಿಸಿದವರಿಗೆ 200 ಸಸಿಗಳನ್ನು ದಾನ ಮಾಡಲಾಯಿತು.

ವಿಚಾರ ಸಂಕಿರಣದಲ್ಲಿ ಪ್ರೊ. ಸುರೇಶ್ ವಲಿಯವೀಟ್ಟಿಲ್ (ಸಿಂಗಾಪುರ ರಾಷ್ಟ್ರೀಯ ವಿಶ್ವವಿದ್ಯಾನಿಲಯ), ಪ್ರೊ. ಉದಯ್ ಮೈತ್ರಾ (ಬೆಂಗಳೂರು ಐಐಎಸ್ಸಿ), ಡಾ. ನವೀನ್ ಕುಲಕರ್ಣಿ (ಸಿಇಒ, ಕ್ವಾಂಟಮ್ ಜೈಮ್, ಬೆಂಗಳೂರು), ಡಾ. ವಿನೋದ್ ಟಿ. ಪಿ. (ಕ್ರೈಸ್ಟ್ ವಿಶ್ವವಿದ್ಯಾನಿಲಯ, ಬೆಂಗಳೂರು), ಡಾ. ಬೆಟ್ಟದಯ್ಯ ಬಿ. ಕೆ (ಸಿಎಫ್‌ಟಿಆರ್‌ಐ, ಮೈಸೂರು), ಡಾ. ದೇಬಾಶಿಶ್ ಮನ್ನಾ (ಐಐಎಸ್‌ಇಆರ್ ಭೋಪಾಲ್), ಡಾ. ಅಂಕಿತಾ ತ್ರಿಪಾಠಿ (ಕ್ವಾಂಟಮ್‌ಜೈಮ್, ಬೆಂಗಳೂರು), ಮತ್ತು ಡಾ. ಸೂರಜ್ ಕೆ. (ಐಐಟಿ ಮದ್ರಾಸ್) ಅವರು ವಿವಿಧ ಗೋಷ್ಠಿಗಳನ್ನು ನಡೆಸಿಕೊಟ್ಟರು.

ಪ್ರೊ. ಶೇಖರ್ ಬಾಬು, ಅಸೋಸಿಯೇಟ್ ಡೀನ್; ಪ್ರೊ. ಜಿ. ರವೀಂದ್ರನಾಥ್, ಪ್ರಾಂಶುಪಾಲರು; ಡಾ. ಶಿವಪ್ರಸಾದ್ ಕೆ, ಸಂಶೋಧನಾ ಮುಖ್ಯಸ್ಥರು; ಮತ್ತು ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ದೇಶದ ವಿವಿಧ ಸಂಸ್ಥೆಗಳ ವಿದ್ಯಾರ್ಥಿಗಳು ಮತ್ತು ಸಂಶೋಧಕರು 60 ಕ್ಕೂ ಹೆಚ್ಚು ಸಂಶೋಧನಾ ಪೋಸ್ಟರ್‌ಗಳನ್ನು ಈ ವಿಚಾರ ಸಂಕಿರಣದಲ್ಲಿ ಪ್ರಸ್ತುತಪಡಿಸಿದರು.

ಭತ್ತಕ್ಕೆ 2300 ರೂ., ರಾಗಿಗೆ 4290 ರೂ. ಬೆಂಬಲ ಬೆಲೆ ನಿಗದಿ

ರೈತರಿಂದ ನೋಂದಣಿ ಪ್ರಕ್ರಿಯೆ ಆರಂಭ

ಮೈಸೂರು, ಫೆ. 4(ಎಂಕೆ)– ಜಿಲ್ಲೆಯಲ್ಲಿನ ಭತ್ತ ಮತ್ತು ರಾಗಿ ಖರೀದಿ ಕೇಂದ್ರಗಳಲ್ಲಿ ರೈತರ ನೋಂದಣಿ ಪ್ರಕ್ರಿಯೆ ನಡೆಯುತ್ತಿದ್ದು, ಭತ್ತಕ್ಕೆ 2,300(ಪ್ರತಿ ಕ್ವಿಂಟಾಲ್‌ಗೆ) ರೂ., ರಾಗಿಗೆ 4,290 ರೂ. ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಲಾಗಿದೆ.

2024–25ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಖರೀದಿಸಲಾಗುವ ಭತ್ತ ಮತ್ತು ರಾಗಿ ಗುಣಮಟ್ಟ ಪರಿಶೀಲನೆ ಮಾಡಲು ಗ್ರೇಡರ್‌ಗಳನ್ನು ನೇಮಿಸಿ, ಖರೀದಿ ಕೇಂದ್ರಗಳಲ್ಲಿ ರೈತರ ನೋಂದಣಿ ಚಾಲ್ತಿಯಲ್ಲಿದ್ದು, ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಖರೀದಿ ಪ್ರಕ್ರಿಯೆ ಆರಂಭವಾಗಲಿದೆ.

2023–24ನೇ ಸಾಲಿನಲ್ಲಿ ನೀಡಲಾಗಿದ್ದ ಕನಿಷ್ಠ ಬೆಂಬಲ ಬೆಲೆಗಿಂತ 2024–25ನೇ ಸಾಲಿನಲ್ಲಿ ಸ್ವಲ್ಪ ಹೆಚ್ಚಳವಾಗಿದ್ದು, ಭತ್ತಕ್ಕೆ 117(2183 ರೂ.) ರೂ. ಏರಿಕೆಯಾಗಿದೆ. ಹಾಗೆಯೇ ರಾಗಿಗೆ 444(3846 ರೂ.) ರೂ. ಹೆಚ್ಚಿಸಲಾಗಿದೆ. ಭತ್ತದಲ್ಲಿ ಸಾಮಾನ್ಯ ಭತ್ತಕ್ಕೆ 2300 ರೂ. ಹಾಗೂ 'ಎ'ಗ್ರೇಡ್ ಭತ್ತಕ್ಕೆ 2320 ರೂ.ನಿಗದಿಪಡಿಸಲಾಗಿದೆ.

2.24 ಲಕ್ಷ ಮೆಟ್ರಿಕ್ ಟನ್ ಗುರಿ: 2024–25ನೇ ಸಾಲಿನ ಮುಂಗಾರು ಋತುವಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಜ್ಯದ ರೈತರಿಂದ 2.24 ಲಕ್ಷ ಮೆಟ್ರಿಕ್ ಟನ್ ಭತ್ತ(1.50 ಲಕ್ಷ ಮೆಟ್ರಿಕ್ ಟನ್ ಪರಿವರ್ತಿತ ಅಕ್ಕಿ) ಖರೀದಿಗೆ ಕೇಂದ್ರ ಸರ್ಕಾರ ನೀಡಿರುವ ಮಾರ್ಗಸೂಚಿಗಳ ಮೇರೆಗೆ ಫೆ.28 ರವರೆಗೆ ಭತ್ತ ಖರೀದಿ ಸಂಬಂಧ ರೈತರ ನೋಂದಣಿ ಕಾರ್ಯ ಕೈಗೊಳ್ಳುವಂತೆ ರಾಜ್ಯ ಸರ್ಕಾರ ಆದೇಶಿಸಿದೆ.

ಭತ್ತವನ್ನು ಪ್ರತಿ ರೈತರಿಂದ ಪ್ರತಿ ಎಕರೆಗೆ 25 ಕ್ವಿಂಟಾಲ್‌ನಂತೆ ಗರಿಷ್ಠ 50 ಕ್ವಿಂಟಾಲ್ ಖರೀದಿಸಲು ಅವಕಾಶವಿದ್ದು, ರೈತರು ತಮ್ಮ ಚೀಲಗಳಲ್ಲಿ ತಂದು ಖರೀದಿ ಕೇಂದ್ರಕ್ಕೆ ನೀಡಿದರೆ ಪ್ರತಿ ಕ್ವಿಂಟಾಲ್ ಚೀಲಕ್ಕೆ ಖರೀದಿ ಏಜೆನ್ಸಿಗಳು ಒಂದು ಚೀಲಕ್ಕೆ 6 ರೂ.ಗಳನ್ನು ರೈತರಿಗೆ ಪಾವತಿಸಬೇಕಿದೆ.

8 ಲಕ್ಷ ಮೆಟ್ರಿಕ್ ಟನ್ ರಾಗಿ: ರಾಜ್ಯದ ರೈತರಿಂದ 8 ಲಕ್ಷ ಮೆಟ್ರಿಕ್ ಟನ್ ರಾಗಿ ಖರೀದಿಸಲು ಸೂಚಿಸಿದ್ದು, ರಾಜ್ಯದಲ್ಲಿನ ಪಡಿತರ ಫಲಾನುಭವಿಗಳಿಗೆ ಸಾರ್ವಜನಿಕ ವಿತರಣಾ ಪದ್ಧತಿಯಡಿ ವಿತರಿಸಲು ಅವಶ್ಯವಿರುವ 4.30 ಲಕ್ಷ ಮೆಟ್ರಿಕ್ ಟನ್ ರಾಗಿ ಖರೀದಿಸುವಂತೆ ರಾಜ್ಯ ಸರ್ಕಾರ ಆದೇಶ ನೀಡಿದೆ. ಅದರಂತೆ ಪ್ರತಿ ರೈತರಿಂದ ಪ್ರತಿ ಎಕರೆಗೆ 10 ಕ್ವಿಂಟಾಲ್‌ನಂತೆ ಗರಿಷ್ಠ 20 ಕ್ವಿಂಟಾಲ್ ರಾಗಿ ಖರೀದಿಸುವುದಾಗಿದೆ.

ಖರೀದಿ ಕೇಂದ್ರಗಳು: ಮೈಸೂರಿನ ಬಂಡಿಪಾಳ್ಯ ಎಪಿಎಂಸಿ ಆವರಣ, ನಂಜನಗೂಡು ಎಪಿಎಂಸಿ ಆವರಣ, ಬಿಳಿಗೆರೆ ಖರೀದಿ ಕೇಂದ್ರ, ಟಿ.ನರಸೀಪುರ ಮತ್ತು ಬನ್ನೂರು ಎಪಿಎಂಸಿ ಆವರಣ, ಹುಣಸೂರು ಮತ್ತು ರತ್ನಪುರಿ ಎಪಿಎಂಸಿ ಆವರಣ, ಕೆ.ಆರ್.ನಗರ ಮತ್ತು ಸಾಲಿಗ್ರಾಮ ಎಪಿಎಂಸಿ ಆವರಣ ಮತ್ತು ಚುಂಚನಕಟ್ಟೆ ಪ್ರವಾಸಿ ಮಂದಿರ, ಹೆಚ್.ಡಿ.ಕೋಟೆ ಎಪಿಎಂಸಿ ಆವರಣ, ಸರಗೂರು, ಪಿರಿಯಾಪಟ್ಟಣ ಮತ್ತು ಬೆಟ್ಟದಪುರ ಎಪಿಎಂಸಿ ಆವರಣ ಹಾಗೂ ಹಾರನಹಳ್ಳಿ ಮತ್ತು ರಾವಂದೂರು ರೈತ ಸಂಪರ್ಕ ಕೇಂದ್ರಗಳಲ್ಲಿ ಭತ್ತ ಮತ್ತು ರಾಗಿ ಖರೀದಿ ಮಾಡಲಾಗುವುದು.

ಬೆಂಗಳೂರು ರೈಲ್ವೆ ವಿಭಾಗಕ್ಕೆ 'ಕವಚ್' ಸುರಕ್ಷತೆ

1,144 ಕಿ.ಮೀ. ವ್ಯಾಪ್ತಿಯಲ್ಲಿ ವ್ಯವಸ್ಥೆ ಅಳವಡಿಕೆ

ನವದೆಹಲಿ: ಭಾರತೀಯ ರೈಲ್ವೆ ಅಳವಡಿಸಿಕೊಂಡಿರುವ ಸ್ವಯಂಚಾಲಿತ ರೈಲು ರಕ್ಷಾ ವ್ಯವಸ್ಥೆಯಾದ ಕವಚ್‌ನ್ನು ಬೆಂಗಳೂರು ರೈಲ್ವೆ ಜಾಲದಾದ್ಯಂತ ಅಳವಡಿಸಲಾಗುವುದು ಎಂದು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಅಮಿತೇಶ್ ಕುಮಾರ್ ಸಿನ್ಹಾ ತಿಳಿಸಿದ್ದಾರೆ.

ಲಕ್ನೋ ಮೂಲದ ಭಾರತೀಯ ರೈಲ್ವೆಯ ಸಂಶೋಧನಾ ವಿನ್ಯಾಸ ಮತ್ತು ಮಾನದಂಡಗಳ ಸಂಸ್ಥೆ ಅಭಿವೃದ್ಧಿಪಡಿಸಿದ ಕವಚ್, ಪ್ರತಿ ರೈಲಿನ ವೇಗವು ಸಿಗ್ನಲಿಂಗ್ ವ್ಯವಸ್ಥೆಯು ನಿಗದಿಪಡಿಸಿದ ಮಿತಿಯೊಳಗೆ ಉಳಿಯುವಂತೆ ನೋಡಿಕೊಳ್ಳುತ್ತದೆ. ರೈಲು ನಿಗದಿತ ವೇಗವನ್ನು ಮೀರಿದರೆ ಅಥವಾ ಪ್ರತಿಕ್ರಿಯಿಸಲು ವಿಫಲವಾದರೆ, ವ್ಯವಸ್ಥೆಯು ತುರ್ತು ಬ್ರೇಕ್‌ಗಳನ್ನು ತ್ವರಿತವಾಗಿ ಸಕ್ರಿಯಗೊಳಿಸುತ್ತದೆ ಮತ್ತು ರೈಲನ್ನು ನಿಲ್ಲಿಸುತ್ತದೆ, ಇದರಿಂದಾಗಿ ಯಾವುದೇ ರೀತಿಯ ಘರ್ಷಣೆ, ಅಪಘಾತಗಳನ್ನು ತಪ್ಪಿಸಬಹುದಾಗಿದೆ ಎಂದು ರೈಲ್ವೆ ಅಧಿಕಾರಿಯೊಬ್ಬರು ವಿವರಿಸಿದ್ದಾರೆ.

ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಅಶುತೋಷ್ ಮಾಥುರ್ ಸೋಮವಾರ TNIEಗೆ ಬೆಂಗಳೂರು ವಿಭಾಗದ 1,144 ಕಿ.ಮೀ. ವ್ಯಾಪ್ತಿಯಲ್ಲಿ ಕವಚ್ ಅನ್ನು ಎರಡು ಹಂತಗಳಲ್ಲಿ ಅಳವಡಿಸಲಾಗುವುದು ಎಂದು ಹೇಳಿದರು. ಮೊದಲ ಹಂತದಲ್ಲಿ ಒಟ್ಟು 684 ಕಿ.ಮೀ. ಮಾರ್ಗವನ್ನು 329 ಕೋಟಿ ರೂ.ಗಳಲ್ಲಿ ಮಂಜೂರು ಮಾಡಲಾಗಿದೆ. ಇದು ಬೈಯಪ್ಪನಹಳ್ಳಿಯಿಂದ ಪೆನುಕೊಂಡ, ಕೆಎಸ್‌ಆರ್ ಬೆಂಗಳೂರು ನಗರದಿಂದ ಜೋಲಾರಪೇಟೆ, ಕೆಎಸ್‌ಆರ್ ಬೆಂಗಳೂರಿಂದ ಸಂಪಿಗೆ ರಸ್ತೆ ಮತ್ತು ಕೆಎಸ್‌ಆರ್ ಬೆಂಗಳೂರಿಂದ ಯಲಿಯೂರು ಎಂಬ ನಾಲ್ಕು ಮಾರ್ಗಗಳನ್ನು ಒಳಗೊಂಡಿದೆ ಎಂದು ಅವರು ಹೇಳಿದರು.

ಎರಡನೇ ಹಂತದಲ್ಲಿ, ಧರ್ಮಪುರಿಯಿಂದ ಓಮಲೂರು, ಪೆನುಕೊಂಡದಿಂದ ಧರ್ಮಾವರಂ, ಚಿಕ್ಕಬಾಣವರದಿಂದ ಹಾಸನ ಮತ್ತು ಯಲಹಂಕದಿಂದ ಬಂಗಾರಪೇಟೆಗೆ 460 ಕಿ.ಮೀ. ಮಾರ್ಗವನ್ನು 239 ಕೋಟಿ ರೂ.ಗಳಲ್ಲಿ ಕ್ರಮಿಸಲಾಗುವುದು ಎಂದರು.


ಎನ್‌ಡಿಎ ಅವಧಿಯಲ್ಲಿ ಕರ್ನಾಟಕ ರೈಲ್ವೆ ಯೋಜನೆಗೆ ದಾಖಲೆಯ ಅನುದಾನ

ರೈಲ್ವೆ ಸಚಿವ ಅಶ್ವಿನ್ ವೈಷ್ಣವ್ ಮಾಹಿತಿ

ಮೈಸೂರು, ಫೆ.4(ಎಸ್‌ಪಿಎನ್)–ಕರ್ನಾಟಕದಲ್ಲಿ ಹೊಸ ರೈಲು ಮಾರ್ಗಗಳ ನಿರ್ಮಾಣ, ಜೋಡಿ ಹಳಿ ಹಾಗೂ ಗೇಜ್ ಪರಿವರ್ತನೆ ಸೇರಿದಂತೆ ವಿವಿಧ ಮೂಲಸೌಕರ್ಯ ಕಾಮಗಾರಿಗಳಿಗೆ ಬಜೆಟ್‌ನಲ್ಲಿ 7,564 ಕೋಟಿ ಹಂಚಿಕೆ ಮಾಡಲಾಗಿದೆ ಎಂದು ರೈಲ್ವೆ ಸಚಿವ ಅಶ್ವಿನ್ ವೈಷ್ಣವ್ ತಿಳಿಸಿದರು.

ಸೋಮವಾರ ವೀಡಿಯೋ ಕಾನ್ಫರನ್ಸ್ ಮೂಲಕ ನಡೆದ ಸಭೆಯಲ್ಲಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ ಕೇಂದ್ರ ಬಜೆಟ್‌ನಲ್ಲಿ ರೈಲ್ವೆ ಇಲಾಖೆಯಿಂದ ಕರ್ನಾಟಕಕ್ಕೆ ಮಂಜೂರಾಗಿರುವ ಕಾಮಗಾರಿ ಕುರಿತು ಮಾಹಿತಿ ನೀಡಿ, ಮಾತನಾಡಿದರು.

ಕರ್ನಾಟಕದಲ್ಲಿ ಹೊಸ ರೈಲು ಮಾರ್ಗಗಳ ನಿರ್ಮಾಣ, ಜೋಡಿ ಹಳಿ ಹಾಗೂ ಗೇಜ್ ಪರಿವರ್ತನೆ ಸೇರಿದಂತೆ ವಿವಿಧ ಮೂಲಸೌಕರ್ಯ ಕಾಮಗಾರಿಗಳಿಗೆ ಬಜೆಟ್‌ನಲ್ಲಿ 7,564 ಕೋಟಿ ಹಂಚಿಕೆ ಮಾಡಲಾಗಿದೆ. ಜೊತೆಗೆ 2009–14ರ ಯುಪಿಎ ಸರ್ಕಾರದ ಅವಧಿಯಲ್ಲಿ ರಾಜ್ಯದ ರೈಲ್ವೆ ಯೋಜನೆಗಳಿಗೆ ವಾರ್ಷಿಕ 835 ಕೋಟಿ ರೂ ಅನುದಾನ ಮಾತ್ರ ಒದಗಿಸಲಾಗಿತ್ತು. ಇದೀಗ ಈ ಅನುದಾನ ಬಿಡುಗಡೆ ಪ್ರಮಾಣ ಒಂಭತ್ತು ಪಟ್ಟು ಹೆಚ್ಚಾಗಿದೆ ಎಂದು ಅಂಕಿ–ಅಂಶಗಳ ಸಮೇತ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಸಭೆಗೆ ತಿಳಿಸಿದರು.



ರೈಲ್ವೆ ಸಚಿವ ಅಶ್ವಿನ್ ವೈಷ್ಣವ್ ನೇತೃತ್ವದಲ್ಲಿ ವೀಡಿಯೋ ಕಾನ್ಫರನ್ಸ್ ಮೂಲಕ ನಡೆದ ಸಭೆಯಲ್ಲಿ ನೈರುತ್ಯ ರೈಲ್ವೆ ವಲಯದ ಡಿಆರ್‌ಎಂ ಶಿಲ್ಪಿ ಅಗರ್ವಾಲ್, ಎಡಿಆರ್‌ಎಂ ವಿನಾಯಕ್ ಆರ್. ನಾಯಕ್ ಸೇರಿದಂತೆ ಇತರೆ ರೈಲ್ವೆ ಅಧಿಕಾರಿಗಳು ಭಾಗಿಯಾಗಿದ್ದರು.

2009–14ರವರೆಗಿನ ಯುಪಿಎ ಸರ್ಕಾರದ ಅವಧಿಯಲ್ಲಿ 113 ಹೊಸ ರೈಲು ಮಾರ್ಗಕ್ಕೆ ಅನುಮತಿ ನೀಡಲಾಗಿತ್ತು. 18 ಮಾರ್ಗಗಳಿಗೆ ವಿದ್ಯುದ್ದೀಕರಣ ಕಾಮಗಾರಿ ಆರಂಭಿಸಲಾಗಿತ್ತು. ಅಂತೆಯೇ ಎನ್‌ಡಿಎ ಸರ್ಕಾರದ ಅವಧಿಯಲ್ಲಿ 150 ನೂತನ ರೈಲ್ವೆ ಮಾರ್ಗದ ಕಾಮಗಾರಿ, 294 ಮಾರ್ಗಗಳಿಗೆ ವಿದ್ಯುದ್ದೀಕರಣ ಕಾಮಗಾರಿಗಳು ಆರಂಭಗೊಂಡಿದ್ದು, ಈ ಕಾಮಗಾರಿ ವರ್ಷಾಂತ್ಯದಲ್ಲಿ ಮುಗಿಯಲಿವೆ ಎಂದು ಮಾಹಿತಿ ನೀಡಿದರು.

ಒಟ್ಟಾರೆ ಕರ್ನಾಟಕದಲ್ಲಿ 1652 ಕಿ.ಮೀ ಉದ್ದದ ರೈಲ್ವೆ ಕಾಮಗಾರಿ ಪೂರ್ಣಗೊಂಡಿದ್ದು, ಇದು ಪಕ್ಕದ ಶ್ರೀಲಂಕಾ ದೇಶದ ರೈಲ್ವೆ ಜಾಲಕ್ಕಿಂತ ದೊಡ್ಡದು ಎಂದ ಸಚಿವರು, 2014ರಿಂದ 2025 ರವರೆಗೆ 3,233 ಕಿ.ಮೀ ಉದ್ದದ ರೈಲ್ವೆ ಮಾರ್ಗದಲ್ಲಿ ಶೇ.97 ರಷ್ಟು ವಿದ್ಯುದ್ದೀಕರಣ ಕಾಮಗಾರಿ ಮುಗಿದಿದೆ ಎಂದು ಘೋಷಿಸಿದರು. ಅಲ್ಲದೆ, 47,016 ಕೋಟಿ ರೂ ಅನುದಾನಲ್ಲಿ 31 ಹೊಸ ಮಾರ್ಗಗಳ 3,840 ಕಿ.ಮೀ ಉದ್ದದ ವಿದ್ಯುದ್ದೀಕರಣದ ಹೊಸ ಕಾಮಗಾರಿಗೆ ಅನುದಾನ ಒದಗಿಸಲಾಗಿದ್ದು, 1,981 ಕೋಟಿ ರೂ ಅನುದಾನದಲ್ಲಿ 61 ಅಮೃತ್ ರೈಲ್ವೆ ನಿಲ್ದಾಣಗಳ ಅಭಿವೃದ್ಧಿಗೆ ಒತ್ತು ನೀಡಲಾಗಿದೆ ಎಂದರು.

ಟೆಂಡರ್ ಹಂತದಲ್ಲಿರುವ 1,703 ಕಾಮಗಾರಿಗಳಿಗೆ ಅನುಮತಿ ನೀಡಲಾಗಿದೆ. 644 ರೈಲ್ವೆ ಬ್ರಿಡ್ಜ್, 335 ನಿಲ್ದಾಣಗಳಲ್ಲಿ ವೈಫೈ ಸಂಪರ್ಕ, ವಿವಿಧ ನಿಲ್ದಾಣಗಳಲ್ಲಿ 43 ಎಸ್ಕಲೇಟರ್ ಅನುಷ್ಠಾನ ಹಾಗೂ ಕರ್ನಾಟಕದ 12 ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸಲು ವಂದೇಮಾತರಂ ರೈಲುಗಳು ಓಡಾಡುತ್ತಿವೆ. ಒಂದು ಅಮೃತ್ ಭಾರತ್ ಎಕ್ಸ್‌ಪ್ರೆಸ್ ರೈಲು ಓಡಾಟ ಹಾಗೂ ಬೆಂಗಳೂರು ಸೆಂಟ್ರಲ್, ಯಶವಂತಪುರ, ತುಮಕೂರು ನಿಲ್ದಾಣದಲ್ಲಿ ಪಾರ್ಕಿಂಗ್ ವ್ಯವಸ್ಥೆಗೆ ಒತ್ತು ನೀಡಲಾಗಿದೆ ಎಂದು ಮಾಹಿತಿ ನೀಡಿದರು. ಈ ವೇಳೆ ನೈರುತ್ಯ ರೈಲ್ವೆ ವಲಯದ ಡಿಆರ್‌ಎಂ ಶಿಲ್ಪಿ ಅಗರ್ವಾಲ್, ಎಡಿಆರ್‌ಎಂ ವಿನಾಯಕ್ ಆರ್. ನಾಯಕ್ ಸೇರಿದಂತೆ ಇತರೆ ರೈಲ್ವೆ ಅಧಿಕಾರಿಗಳು ಭಾಗಿಯಾಗಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಮದಗಜರಾಜ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಾರ್ಕೋ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೇವ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಬೇಗೂರು ಕಾಲೋನಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಕೋ (ತ)+ ಮಾರ್ಕೋ (ಕ)	1+4 ಪ್ರದರ್ಶನಗಳು
ರಾಜಕಮಲ್	
ದೇವ (ಹಿಂ)	4 ಪ್ರದರ್ಶನಗಳು
ಸಂಗಂ	
ರಾಯಲ್ (ಕ)	4 ಪ್ರದರ್ಶನಗಳು
ಲಿಡೋ	
ಗಣ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮದಗಜರಾಜ (ತ)	4 ಪ್ರದರ್ಶನಗಳು
ಪ್ರಭಾ	
ರಾಜರಾಣಿ(ತ) + ಅಲ್ಲೇ ಡ್ರಾ ಅಲ್ಲೇ ಬಹುಮಾನ (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರಾಯಲ್ (ಕ): ಬೆ.10.15ಕ್ಕೆ, ಮ.1.15ಕ್ಕೆ, ರಾ.7.15ಕ್ಕೆ, ಎಮರ್ಜೆನ್ಸಿ (ಹಿಂ): ಸಂ.4.15ಕ್ಕೆ, ಛೂ ಮಂತರ್ (ಕ): ರಾ.10.10ಕ್ಕೆ.
ಸ್ಕ್ರೀನ್ 2	ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.10.35ಕ್ಕೆ, ಕುಟುಂಬಸ್ಥನ್ (ತ): ಮ.1ಕ್ಕೆ, ಸಂಕ್ರಾಂತಿಕಿ ವಸ್ತುನಾಂ (ತೆ): ಸಂ.4.05ಕ್ಕೆ, ಛೂ ಮಂತರ್ (ಕ): ರಾ.7.05ಕ್ಕೆ, ಟ್ವೈಲೈಟ್ ಆಫ್ ದಿ ವಾರಿಯರ್ಸ್ ವಾಲ್ಡ್ ಇನ್ (ಇಂ): ರಾ.10.10ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.10.25ಕ್ಕೆ, ಮಿ. ಹೌಸ್‌ಕೀಪಿಂಗ್ (ತ): ಮ.1.05ಕ್ಕೆ, ರಾಮಾಯಣ ದಿ ಲೆಜೆಂಡ್ ಆಫ್ ಪ್ರಿನ್ಸ್ ರಾಮ (ಹಿಂ): ಸಂ.4.10ಕ್ಕೆ, ರುದ್ರ ಗರುಡ ಪುರಾಣ (ಕ): ರಾ.7.05ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ರಾ.10ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.20ಕ್ಕೆ, ಮ್ಯಾಕ್ಸ್ (ಕ): ಮ.1.20ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ, ರಾ.7ಕ್ಕೆ, ರಾ.9.50ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಛೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ಸಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮಾದಕ ವಸ್ತುಗಳ ದುಷ್ಪರಿಣಾಮ ಕುರಿತಂತೆ ವಿಚಾರ ಸಂಕಿರಣ

ಮೈಸೂರು,ಫೆ.4–ಜಿಲ್ಲಾಡಳಿತ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಾರಾಜ ಪದವಿ ಪೂರ್ವ ಕಾಲೇಜು ವತಿಯಿಂದ ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮ ಕುರಿತಂತೆ ವಿಚಾರ ಸಂಕಿರಣ ಕಾರ್ಯಕ್ರಮವನ್ನು ನಾಳೆ (ಬುಧವಾರ) ಬೆಳಿಗ್ಗೆ 10:30 ಗಂಟೆಗೆ ಮಹಾರಾಜ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ.

ಮೈಸೂರು ಜಿಲ್ಲಾಧಿಕಾರಿಗಳಾದ ಜಿ.ಲಕ್ಷ್ಮಿಕಾಂತ್ ರೆಡ್ಡಿ ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ. ಪಿ.ಸಿ.ಕುಮಾರಸ್ವಾಮಿ, ಹಿರಿಯ ಪತ್ರಕರ್ತ ಸಿ.ಕೆ.ಮಹೇಂದ್ರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳಾದ ಡಾ.ನಾಗರಾಜು ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಮಹಾರಾಜ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಉದಯ ಶಂಕರ್ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಮನೋರೋಗ ತಜ್ಞರು, ಕೆ.ಆರ್. ಆಸ್ಪತ್ರೆಯ ಡಾ. ರವೀಶ್ ಬಿ.ಎನ್ ವಿಶೇಷ ಉಪನ್ಯಾಸವನ್ನು ನೀಡಲಿದ್ದಾರೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರಾದ ಹರೀಶ್ ಟಿ.ಕೆ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಣೆಯಾದ ವ್ಯಕ್ತಿಗಳ ಪತ್ತೆಗೆ ಮನವಿ

ಮೈಸೂರು, ಫೆ4–ಕಳೆದ 06–07 ತಿಂಗಳಿಂದ ಸುಮಾರು 63 ವರ್ಷದ ಶ್ರೀನಿವಾಸಚಾರ್ ಎಂಬುವವರು ಕಾಣೆಯಾಗಿದ್ದು, ಮೈಸೂರು ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಹರೆ: ಕಾಣೆಯಾದ ವ್ಯಕ್ತಿಗೆ ಸುಮಾರು 63 ವರ್ಷ ವಯಸ್ಸಾಗಿದ್ದು, 5.5 ಅಡಿ ಎತ್ತರ, ಕನ್ನಡ ಭಾಷೆ ಮಾತನಾಡುತ್ತಾರೆ. ಕೋಲುಮುಖ, ಸಾಧಾರಣ ಮೈಕಟ್ಟು, ಕಪ್ಪು ಮೈಬಣ್ಣ, ಕಪ್ಪು ಮತ್ತು ಬಿಳಿ ಮಿಶ್ರಿತ ತಲೆಕೂದಲು, ಸ್ವಲ್ಪ ದೃಷ್ಟಿದೋಷ ವಿರುತ್ತದೆ. ಕಾಣೆಯಾದ ಸಂದರ್ಭದಲ್ಲಿ ಬಿಳಿ ಅಂಗಿ ಹಾಗೂ ಕಪ್ಪು ಬಣ್ಣದ ಪ್ಯಾಂಟ್ ಹಾಕಿರುತ್ತಾರೆ. ತಲೆಯ ಭಾಗದಲ್ಲಿ ಗಂಟಿನ ಆಪರೇಷನ್ ಮಾಡಿದ ಗುರುತು ಇರುತ್ತದೆ.

ಮತ್ತೊಂದು ಪ್ರಕರಣ: ಸುಮಾರು 28 ವರ್ಷದ ಶ್ರೀ ಕೃಷ್ಣ ಎಂಬುವವರು 26–8–2022ರಂದು ಮೈಸೂರಿನ ಕುವೆಂಪುನಗರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಕಾಣೆಯಾಗಿದ್ದಾರೆ.

ಚಹರೆ: ಕಾಣೆಯಾದ ವ್ಯಕ್ತಿಗೆ ಸುಮಾರು 28 ವರ್ಷ ವಯಸ್ಸಾಗಿದ್ದು, 5.5 ಅಡಿ ಎತ್ತರ, ಕನ್ನಡ ಭಾಷೆ ಮಾತನಾಡುತ್ತಾರೆ. ದುಂಡುಮುಖ, ಸಾಧಾರಣ ಮೈಕಟ್ಟು, ಗೋಧಿ ಮೈಬಣ್ಣ, ಕಪ್ಪು ತಲೆ ಕೂದಲು, ಮಾನಸಿಕ ಅಸ್ವಸ್ಥ (ನಿರಾಶ್ರಿತ ಮನುಷ್ಯ) ರಾಗಿರುತ್ತಾರೆ. ಕಾಣೆಯಾದ ಸಂದರ್ಭದಲ್ಲಿ ನೀಲಿ ಮಿಶ್ರಿತ ಕಪ್ಪು ಬಣ್ಣದ ಟೀ ಶರ್ಟ್ ಮತ್ತು ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ.

ಕಾಣೆಯಾದ ಈ ವ್ಯಕ್ತಿಗಳ ಬಗ್ಗೆ ಮಾಹಿತಿ ಕಂಡು ಬಂದಲ್ಲಿ ದೂ. ಸಂ: 08212418324, 9480802247 ಅನ್ನು ಸಂಪರ್ಕಿಸ ಬಹುದು ಎಂದು ಕುವೆಂಪು ನಗರ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಯಳಗೀಹುಂಡಿ ಗ್ರಾಮ ಇಲ್ಲಿ ವಾಸವಾಗಿ ರುವ ಶ್ರೀಮತಿ ಜವನಮ್ಮ ಕೋಂ ಲೇಟ್ ಸಿದ್ದೇಗೌಡ @ ಸಿದ್ದಯ್ಯ ಇವರ ಇರಾದೆಯಂತೆ ಸಮಸ್ತ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತಿನಲ್ಲಿ ನಮ್ಮ ಕಕ್ಷಿದಾರರಿಗೆ ಬಾಗಾಂಶದ ಹಕ್ಕಿದ್ದು, ನಮ್ಮ ಕಕ್ಷಿದಾರರ ಪತಿ ಶ್ರೀ ಸಿದ್ದೇಗೌಡ @ ಸಿದ್ದಯ್ಯ ರವರು ಷೆಡ್ಯೂಲ್ ಸ್ವತ್ತಿನ ಸಂಬಂಧ ಭಾಗಾಂಶವನ್ನು ಕೋರಿ ದಾವೆಯನ್ನು ಸಲ್ಲಿಸಿದ್ದು, ಸದರಿಯವರ ಕಾಲಾ ನಂತರ ನಮ್ಮ ಕಕ್ಷಿದಾರರು ಹಾಗೂ ಅವರ ಮಕ್ಕಳು ವಾರಸುದಾರರಾಗಿ ಮುಂದುವರೆದಿರುತ್ತಾರೆ. ಸದರಿ ದಾವೆಯು ಮೈಸೂರಿನ ಮಾನ್ಯ 2ನೇ ಅಧಿಕ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 1449/2022 ನ್ನು ಸಲ್ಲಿಸಿದ್ದು, ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾವುದೇ ರೀತಿಯ ವ್ಯವಹರಣೆಯನ್ನು ನಡೆಸದಂತೆ ಘನ ನ್ಯಾಯಾಲಯವು ನಮ್ಮ ಕಕ್ಷಿದಾರರ ಪರ ತಾತ್ಕಾಲಿಕ ತಡೆಯಾಜ್ಞೆ ನೀಡಿದ್ದು, ಸದರಿ ದಾವೆಯು ಚಾಲ್ತಿಯಲ್ಲಿರುತ್ತದೆ. ಮೇಲ್ಕಂಡ ದಾವೆಯಲ್ಲಿ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಯಳಗೀಹುಂಡಿ ಗ್ರಾಮದ ಬೀರಪ್ಪ ಬಿನ್ ಲೇಟ್ ಶ್ರೀ ಸಿದ್ದಯ್ಯ, ಶ್ರೀಮತಿ ಮಾಲಮ್ಮ ಕೋಂ ಲೇಟ್ ಮಾಕಯ್ಯ, ಶ್ರೀ ಬೀರಯ್ಯ ಬಿನ್ ಲೇಟ್ ಶ್ರೀ ಮರಿಸಿದ್ದೇಗೌಡ ಇವರು ಪ್ರತಿವಾದಿಗಳಾಗಿರುತ್ತಾರೆ. ಸದರಿ ಪ್ರತಿವಾದಿಗಳ ಪೈಕಿ ಶ್ರೀ ಬೀರಯ್ಯ ಬಿನ್ ಲೇಟ್ ಶ್ರೀ ಮರಿಸಿದ್ದೇಗೌಡ ಇವರು ಮೇಲೆ ತಿಳಿಸಿದ ಶ್ರೀಮತಿ ಮಾಲಮ್ಮ ಮತ್ತು ಶ್ರೀ ಬೀರಯ್ಯರವರಿಂದ ಷೆಡ್ಯೂಲ್ ಸ್ವತ್ತಿನ ಸಂಬಂಧ ಹಕ್ಕು ಖುಲಾಸೆಯನ್ನು ಪಡೆದು ಷೆಡ್ಯೂಲ್ ಸ್ವತ್ತಿನ ಖಾತಾ ವರ್ಗಾವಣೆಯನ್ನು ಕಾನೂನು ಬಾಹಿರವಾಗಿ ಮಾಡಿಸಿಕೊಂಡು ಮಾರಾಟ ಮಾಡಲು ಮುಂದಾಗಿರುತ್ತಾರೆ ಎಂದು ತಿಳಿದು ಬಂದಿರುತ್ತದೆ. ಆದುದರಿಂದ ಷೆಡ್ಯೂಲ್ ಸ್ವತ್ತಿನ ಸಂಬಂದ ಯಾರೇ ಆಗಲೀ, ಯಾವುದೇ ರೀತಿಯ ವ್ಯವಹರಣೆಯನ್ನು ಮಾಡಬಾರದೆಂದು ಈ ಮೂಲಕ ತಿಳಿಸಲಾಗಿದೆ. ಒಂದು ವೇಳೆ ಬೇರೆ ಯಾರೇ ಆಗಲೀ ಯಾವುದೇ ವ್ಯವಹಾರವನ್ನು ಷೆಡ್ಯೂಲ್ ಸ್ವತ್ತಿನ ಸಂಬಂಧ ಕೈಗೊಂಡರೆ ಅಂತಹ ವ್ಯವಹರಣೆಗಳಿಗೆ ಅವರುಗಳೇ ಜವಾಬ್ದಾರರಾಗಿದ್ದು, ನಮ್ಮ ಕಕ್ಷಿದಾರರ ಅವಿಭಾಜ್ಯ ಭಾಗಾಂಶದ ಹಕ್ಕು ಮತ್ತು ಹಿತಾಸಕ್ತಿಯನ್ನು ಬಧ್ಧಪಡಿಸುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಸರ್ಕಾರಿ ಉತ್ತನಹಳ್ಳಿ ಗ್ರಾಮದ ಸರ್ವೆ ನಂ.6/3ರಲ್ಲಿ 1 ಎಕರೆ 28 ಗುಂಟೆ ಜಮೀನಿಗೆ ಚೆಕ್ಕುಬಂದಿ:
ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಸರ್ವೆ ನಂ.6/5 ಮತ್ತು ಸರ್ವೆ ನಂ.6/11ರ ಜಮೀನು, ಉತ್ತರಕ್ಕೆ :ರಸ್ತೆ ಮತ್ತು ಸರ್ವೆ ನಂ.6/11 ರುಳಿಕೆ ಜಮೀನು, ದಕ್ಷಿಣಕ್ಕೆ : ರಸ್ತೆ.

Sd/- S. Beeranaika, BA. LL.B.
Advocate, KAR:2127/04 No. 2797/1, 1st Floor, 2nd Main, Lakkappa Building, Jayanagara, Mysuru-14
ದಿನಾಂಕ: 04.02.2025 Mob: 9945905603

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಮೈಸೂರು ಸಿಟಿ, ಮೇಟಗಳ್ಳಿ ಅಂಚೆ, ಎಂ.ಜಿ. ಕೊಪ್ಪಲು ಮುಖ್ಯ ಕುಂಬಾರಕೊಪ್ಪಲು, ಮನೆ ನಂ.190/2ರಲ್ಲಿ ವಾಸವಾಗಿರುವ ಲೇಟ್ ಚಿಕ್ಕಕಾಳೇಗೌಡ ರವರ ಮಗನಾದ ನರಸೇಗೌಡ ಮತ್ತು ಇವರ ಕುಟುಂಬದವರಿಂದ,

2.ಮೈಸೂರು ಸಿಟಿ, ಮೇಟಗಳ್ಳಿ ಅಂಚೆ, ಹೆಬ್ಬಾಳು ಮುಖ್ಯ ರಸ್ತೆ, ಕುಂಬಾರಕೊಪ್ಪಲಿನ ಮನೆಯಲ್ಲಿ ವಾಸವಾಗಿರುವ ಲೇಟ್ ಚಿಕ್ಕಕಾಳೇಗೌಡ ರವರ ಮಗನಾದ ಲೇಟ್ ಉಗ್ರೇಗೌಡ ರವರ ಧರ್ಮಪತ್ನಿಯಾದ ಶ್ರೀಮತಿ.ಸಾಕಮ್ಮನವರ ಕುಟುಂಬದವರು,

3. ಮೈಸೂರು ಸಿಟಿ, ಮೇಟಗಳ್ಳಿ ಅಂಚೆ, ವಿಜಯನಗರ 2ನೇ ಹಂತ, ಮಹದೇಶ್ವರ ನಗರ, 3ನೇ ಮುಖ್ಯ ರಸ್ತೆ, 7ನೇ ಕ್ರಾಸ್, ಮನೆ ನಂ.246 ರಲ್ಲಿ ವಾಸವಾಗಿರುವ ಲೇಟ್ ಚಿಕ್ಕಕಾಳೇಗೌಡ ರವರ ಮಗನಾದ ಲೇಟ್ ಜಯರಾಮರವರ ಧರ್ಮಪತ್ನಿಯಾದ ಶ್ರೀಮತಿ, ನಾಗಮಣಿ,

4.ಮೈಸೂರು ಸಿಟಿ, ಮೇಟಗಳ್ಳಿ ಅಂಚೆ, ಕುಂಬಾರಕೊಪ್ಪಲಿನ ಬಸ್ ನಿಲ್ದಾಣದ ಹತ್ತಿರ, ಮನೆ ನಂ.190/2 ರಲ್ಲಿ ವಾಸವಾಗಿರುವ ಲೇಟ್ ಚಿಕ್ಕಕಾಳೇಗೌಡ ರವರ ಮಗನಾದ ಲೇಟ್ ಶ್ರೀನಿವಾಸ್ ರವರ ಧರ್ಮಪತ್ನಿಯಾದ ಶ್ರೀಮತಿ ಭಾಗ್ಯ,

5.ಮೈಸೂರು ಸಿಟಿ, ಸುಭಾಷ್ ನಗರ, ಚಾಮುಂಡೇಶ್ವರಿ ಬಡಾವಣೆ, ಮನೆ ನಂ.687 ರಲ್ಲಿ ವಾಸವಾಗಿರುವ ಲೇಟ್ ಚಿಕ್ಕಕಾಳೇಗೌಡ ರವರ ಮಗನಾದ ಚೆಲುವರಾಜು ಉರುಫ್ ಚೆಲುವೇಗೌಡ ಹಾಗೂ ಇವರ ಕುಟುಂಬದವರು,

6.ಮೈಸೂರು ಸಿಟಿ, ಹೆಬ್ಬಾಳ್ 1ನೇ ಹಂತ, ಸುಭಾಷ್ ನಗರ, ಚಾಮುಂಡೇಶ್ವರಿ ಬಡಾವಣೆ, ಮನೆ ನಂ.138 ರಲ್ಲಿ ವಾಸವಾಗಿರುವ ಲೇಟ್ ಚಿಕ್ಕಕಾಳೇಗೌಡ ರವರ ಮಗನಾದ ಕಾಳೇಗೌಡ ಹಾಗೂ ಇವರ ಕುಟುಂಬದವರು,

7.ಮೈಸೂರು ಸಿಟಿ, ಸುಭಾಷ್ ನಗರ, 2ನೇ ಕ್ರಾಸ್, ಮನೆ ನಂ.518 ರಲ್ಲಿ ವಾಸವಾಗಿರುವ ಲೇಟ್ ಚಿಕ್ಕಕಾಳೇಗೌಡ ರವರ ಮಗನಾದ ಲೇಟ್ ಚಿಕ್ಕಕಾಳೇಗೌಡ ಉರುಫ್ ಗುಂಡ ರವರ ಧರ್ಮಪತ್ನಿಯಾದ ಶ್ರೀಮತಿ. ಸುಧಾ ಹಾಗೂ ಇವರ ಕುಟುಂಬದವರುಗಳು, ನಮ್ಮ ಕಕ್ಷಿದಾರರಾದ ಎಸ್.ಎಂ.ಸಿ ಡೆವಲಪರ್ಸ್ ನ ಮಾಲೀಕರಾದ ಬೆಂಗಳೂರಿನ ಷಫಿ ಅಹಮ್ಮದ್ ರವರ ಮಗ ಶೇಕ್ ಅಕ್ಬರ್ ಆದ ಇವರು ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಮುಂದಾಗಿರುತ್ತಾರೆ. ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದಾದರೂ ತಂಟೆ, ತಕರಾರು ಅಥವಾ ಬೇರೆಯವರಿಗೆ ಯಾವುದೇ ರೀತಿಯ ಭೋಗ್ಯ, ಕ್ರಯ, ಆಧಾರ, ವಗೈರೆಗಳು ಆಗಿದ್ದರೆ ಯಾವುದೇ ಆಕ್ಷೇಪಣೆ ಇದ್ದಲ್ಲಿ ಈ ಪ್ರಕಟಣೆಗೊಂಡ 7 ದಿನಗಳ ಒಳಗಾಗಿ ಮೇಲ್ಕಂಡ ವಕೀಲರ ಕಛೇರಿಗೆ ತಮ್ಮ ಆಕ್ಷೇಪಣೆ ಅಥವಾ ತಂಟೆ, ತಕರಾರನ್ನು ಲಿಖಿತ ಮೂಲಕ ಸಲ್ಲಿಸಬಹುದಾಗಿರುತ್ತದೆ. ಒಂದು ವೇಳೆ ಯಾವುದೇ ತಂಟೆ, ತಕರಾರು ಅಥವಾ ಯಾವುದೇ ಆಕ್ಷೇಪಣೆ ಬಾರದೇ ಇದ್ದ ಪಕ್ಷದಲ್ಲಿ ನಮ್ಮ ಕಕ್ಷಿದಾರರು ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಖರೀದಿಸುತ್ತಾರೆಂದು ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಬೆಲವತ್ತ ಗ್ರಾಮ ಸರ್ವೆ ನಂ.48/8 ರಲ್ಲಿ ಒಟ್ಟು ವಿಸ್ತೀರ್ಣ 1 ಎಕರೆ 31 ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ : ಮೈಸೂರು-ಬೆಂಗಳೂರು ರೈಲ್ವೆ ಬ್ರಾಡ್ ಗ್ರೇಜ್, ಪಶ್ಚಿಮಕ್ಕೆ : ನರಸಿಂಹೇಗೌಡರವರ ಸ್ವತ್ತು, ಉತ್ತರಕ್ಕೆ : ರಿಂಗ್ ರೋಡ್ ದಕ್ಷಿಣಕ್ಕೆ : ನೀರು ಹರಿಯುವ ಹಳ್ಳ ಮತ್ತು ಮೈಸೂರು- ಬೆಂಗಳೂರು ರೈಲ್ವೆ ಬ್ರಾಡ್ ಗ್ರೇಜ್

ಸಹಿ/- ಜಿ.ಕುಮಾರ, ವಕೀಲರು, ಕೆ.ಎ.ಆರ್: 1852/2002. No. 22, First Floor, A.P.M.C. Complex, Sheshadri Iyer Road, Mandi Mohalla, Mysuru 570021
Ph: 9880552338
ದಿನಾಂಕ: 04-02-2025 , ಸ್ಥಳ: ಮೈಸೂರು.